KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜನವರಿ ೨೭, ೨೦೧೧ (ಮಾಘ ೭, ಶಕವರ್ಷ ೧೯೩೨)	ಸಂಚಿಕೆ ೪

ವಿಷಯಸೂಚಿ

ವಿಶೇಷ ರಾಜ್ಯಪತ್ರಗಳು

ವಿಶೇಷ ರಾಜ್ಯಪತ್ರ ಸಂಖ್ಯೆ	ಪ್ರಕಟಣೆ ದಿನಾಂಕ	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ
1	03-01-2011	ಸಂಖ್ಯೆ: ಗ್ರಾಅಪ: 213 :ಉಖಾಯೋ 2009 ದಿನಾಂಕ 31-12-2010
2	04-01-2011	ಸಂಖ್ಯೆ :ಲೋಇ 137 ಇಎಪಿ 2010, ಬೆಂಗಳೂರು, ದಿನಾಂಕ : 3ನೇ ಜನವರಿ, 2011
3	04-01-2011	ಸಂಖ್ಯೆ : ಲೋಇ : 15 : ಇಎಪಿ : 2009, ಬೆಂಗಳೂರು, ದಿನಾಂಕ 03-01-2011
4	04-01-2011	**No. UDD 133 ACM 2008, Bangalore, dated 3rd January 2011**
5	04-01-2011	**No. UDD 31 ACG 2010, Bangalore, dated 3rd January 2011**
6	04-01-2011	**No. UDD 31 ABC 2010, Bangalore, Dated: 4th January, 2011**
7	05-01-2011	ಸಂ. ಇಎಲ್‌ಎನ್.ಸಿಆರ್.121/2010-11, ದಿನಾಂಕ: 31-12-2010.
8	05-01-2011	ನಂ. ಗ್ರಾಅಪ:203:ಜಿಪಸ:2010, ಬೆಂಗಳೂರು, ದಿನಾಂಕ: 5ನೇ ಜನವರಿ, 2011
9	05-01-2011	ನಂ. ಗ್ರಾಅಪ:203:ಜಿಪಸ:2010, ಬೆಂಗಳೂರು, ದಿನಾಂಕ: 5ನೇ ಜನವರಿ, 2011
10	06-01-2011	ಸಂಖ್ಯೆ: ಸಿಐ 372 ಎಸ್‌ಪಿಕ್ಯೂ 2010, ಬೆಂಗಳೂರು, ದಿನಾಂಕ: 5ನೇ ಜನವರಿ, 2011
11	06-01-2011	**No. DPAR 22 SDE 2010, Bangalore, Dated: 6th January, 2011**

೨೦೧೧-೨೦೧೧ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

ಕ್ರಮ ಸಂಖ್ಯೆ	ರಾಜ್ಯಪತ್ರದ ಭಾಗಗಳು	ಪ್ರತಿ ಒಂದಕ್ಕೆ ರೂ. ಪೈ.	ವಾರ್ಷಿಕ ಚಂದಾ ದರ ರೂ. ಪೈ.
1.	ಭಾಗ – 1	22–00	880–00
2.	ಭಾಗ – 2	6–00	244–00
3,	ಭಾಗ – 3	26–00	1061–00
4.	ಭಾಗ – 4	4–00	175–00
5.	ಭಾಗ – 4ಎ	5–00	220–00
6.	ಭಾಗ – 5	22–00	879–00
7.	ಭಾಗ – 6 (ಬೆಂಗಳೂರು)	9–00	357–00
8.	ಭಾಗ – 6ಎ (ಮೈಸೂರು)	32–00	1300–00
9.	ಭಾಗ – 6ಬಿ (ಧಾರವಾಡ)	45–00	1790–00
10.	ಭಾಗ – 6ಸಿ (ಗುಲ್ಬರ್ಗ)	30–00	1194–00
11.	ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ.ಸ. 1 ರಿಂದ 7 (ಭಾಗ–1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ	94–00	3816–00
12.	ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ,		

೨೦೧೧-೨೦೧೧ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

ಕ್ರಮ ಸಂಖ್ಯೆ	ಪ್ರಕಟಣೆ ದರಗಳು	ಮೊತ್ತ ರೂ. ಪೈ.
1.	ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ–4 ಅಳತೆಯ ಪ್ರತಿ ಪುಟಕ್ಕೆ ...	500-00
2.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ ...	11-00
3.	ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ) ...	750-00
4.	ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ ...	16-50
5.	ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ ...	½ ಅಥವಾ ¼ ಪುಟಕ್ಕೆ ದರ ನಿಗಧಿ
6.	ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ ...	ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗದಿಪಡಿಸಿರುವುದು
7.	ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ) ...	1-00

ಸೂಚನೆ :– 1. ಚಂದಾ ಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು **"0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು"** ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.

2. ಭಾಗ VI–ಎ, VI–ಬಿ, VI–ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.

3. ಕರ್ನಾಟಕ ರಾಜ್ಯಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು–59

ಮುದ್ರಕರು :–ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು–59

KA/BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಜನವರಿ ೨೭, ೨೦೧೧, (ಮಾಘ ೭, ಶಕ ವರ್ಷ ೧೯೩೨)	ಸಂಚಿಕೆ ೪

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ರಾಜ್ಯದ ಸ್ವಾಯತ್ತ ವೈದ್ಯಕೀಯ/ದಂತ ವಿಜ್ಞಾನ ಸಂಸ್ಥೆಗಳಲ್ಲಿ ವಿಲೀನಗೊಂಡಿರುವ ಬೋಧಕ ಸಿಬ್ಬಂದಿಯ ವೇತನ ನಿಗಧಿ, ಸೇವಾ ಷರತ್ತು ಹಾಗೂ ನಿವೃತ್ತಿ ಸೌಲಭ್ಯಗಳ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಆಕುಕ 01 ಎಂಪಿಎಸ್ 1994, ದಿನಾಂಕ 11-11-1994.
2. ಸರ್ಕಾರದ ಆದೇಶ ಸಂಖ್ಯೆ : ಆಕುಕ 19 ಎಂಪಿಎಸ್ 2005, ದಿನಾಂಕ 16-11-2006 ಮತ್ತು 17-01-2007.
3. ಸರ್ಕಾರದ ಆದೇಶ ಸಂಖ್ಯೆ : ಆಕುಕ 99 ಎಂಎಸ್ಎಫ್ 2003, ದಿನಾಂಕ 01-09-2003.
4. ಸರ್ಕಾರದ ಆದೇಶ ಸಂಖ್ಯೆ : ಆಕುಕ 516 ಎಂಪಿಎಸ್ 2004, ದಿನಾಂಕ 22-01-2005.
5. ಸರ್ಕಾರದ ಆದೇಶ ಸಂಖ್ಯೆ : ಆಕುಕ 105 ಎಂಎಂಸಿ 2007, ದಿನಾಂಕ 02-05-2007.
6. ಸರ್ಕಾರದ ಆದೇಶ ಸಂಖ್ಯೆ : ಆಕುಕ 277 ಎಂಎಂಸಿ 2008, ದಿನಾಂಕ 26-08-2008.
7. ಸರ್ಕಾರದ ಆದೇಶ ಸಂಖ್ಯೆ : ಆಕುಕ 277 ಎಂಎಂಸಿ 2008, ದಿನಾಂಕ 26-08-2008.
8. ಸರ್ಕಾರದ ಆದೇಶ ಸಂಖ್ಯೆ : ಆಕುಕ 277 ಎಂಎಂಸಿ 2008, ದಿನಾಂಕ 26-08-2008.
9. ಸರ್ಕಾರದ ಆದೇಶ ಸಂಖ್ಯೆ : ಆಕುಕ 277 ಎಂಎಂಸಿ 2008, ದಿನಾಂಕ 24-10-2008.
10. ಸರ್ಕಾರದ ಆದೇಶ ಸಂಖ್ಯೆ : ಆಕುಕ 277 ಎಂಎಂಸಿ 2008, ದಿನಾಂಕ 24-10-2008.
11. ಸರ್ಕಾರದ ಆದೇಶ ಸಂಖ್ಯೆ : ಆಕುಕ 73 ಕೆವಿಎಂ 2008, ದಿನಾಂಕ 07-11-2008.
12. ಸರ್ಕಾರದ ಆದೇಶ ಸಂಖ್ಯೆ : ಆಕುಕ 409 ಎಂಎಂಸಿ 2008, ದಿನಾಂಕ 29-11-2008.
13. ಸರ್ಕಾರದ ಆದೇಶ ಸಂಖ್ಯೆ : ಆಕುಕ 244 ಎಂಪಿಎಸ್ 2007, ದಿನಾಂಕ 24-12-2008.
14. ಸರ್ಕಾರದ ಆದೇಶ ಸಂಖ್ಯೆ : ಆಕುಕ 246 ಎಂಎಂಸಿ 2008, ದಿನಾಂಕ 19-02-2009.
15. ಸರ್ಕಾರದ ಆದೇಶ ಸಂಖ್ಯೆ : ಆಕುಕ 395 ಎಂಎಂಸಿ 2007, ದಿನಾಂಕ 28-02-2009.
16. ತಿದ್ದುಪಡಿ ಆದೇಶ ಸಂಖ್ಯೆ : ಆಕುಕ 395 ಎಂಎಂಸಿ 2007, ದಿನಾಂಕ 28-02-2009.
17. ಸೇರ್ಪಡೆ ಆದೇಶ ಸಂಖ್ಯೆ : ಆಕುಕ 395 ಎಂಎಂಸಿ 2007, ದಿನಾಂಕ 12-06-2009.
18. ಸೇರ್ಪಡೆ ಆದೇಶ ಸಂಖ್ಯೆ : ಆಕುಕ 395 ಎಂಎಂಸಿ 2007, ದಿನಾಂಕ 06-01-2010.
19. ಸರ್ಕಾರದ ಆದೇಶ ಸಂಖ್ಯೆ : ಆಕುಕ 395 ಎಂಎಂಸಿ 2007, ದಿನಾಂಕ 06-01-2010.
20. ಸರ್ಕಾರದ ಆದೇಶ ಸಂಖ್ಯೆ : ಆಕುಕ 277 ಎಂಎಂಸಿ 2008, ದಿನಾಂಕ 17-06-2009.
21. ಸರ್ಕಾರದ ಆದೇಶ ಸಂಖ್ಯೆ : ಆಕುಕ 9 ಎಂಎಂಸಿ 2010, ದಿನಾಂಕ 02-03-2010.

ಪ್ರಸ್ತಾವನೆ :

ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ, 1960 ರಡಿ ಬೆಂಗಳೂರು ವೈದ್ಯಕೀಯ ಕಾಲೇಜು, ಮೈಸೂರು ವೈದ್ಯಕೀಯ ಕಾಲೇಜು, ಕರ್ನಾಟಕ ವೈದ್ಯಕೀಯ ಕಾಲೇಜು, ಬಳ್ಳಾರಿ ವೈದ್ಯಕೀಯ ಕಾಲೇಜು, ಸರ್ಕಾರಿ ದಂತ ಕಾಲೇಜು, ಬೆಂಗಳೂರು, ನೆಫ್ರೋ-ಯುರಾಲಜಿ ಸಂಸ್ಥೆಗಳನ್ನು ಮೇಲೆ (1) ರಿಂದ (3) ರವರೆಗೆ ಓದಲಾದ ಸರ್ಕಾರದ ಆದೇಶಗಳಲ್ಲಿ ನೋಂದಾಯಿತ ಸರ್ಕಾರಿ ಸ್ವಾಯತ್ತ ವೈದ್ಯಕೀಯ/ದಂತ ವಿಜ್ಞಾನ ಸಂಸ್ಥೆಗಳನ್ನಾಗಿ ಪರಿವರ್ತಿಸಲಾಗಿದೆ ಮತ್ತು ಬೆಳಗಾಂ, ಬೀದರ್, ರಾಯಚೂರು, ಶಿವಮೊಗ್ಗ, ಹಾಸನ ಮತ್ತು ಮಂಡ್ಯ ವೈದ್ಯಕೀಯ ವಿಜ್ಞಾನ ಸಂಸ್ಥೆಗಳನ್ನು ಮೇಲೆ (4) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸ್ಥಾಪಿಸಲಾಗಿದೆ.

ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಸ್ವಾಯತ್ತ ಸಂಸ್ಥೆಗಳನ್ನಾಗಿ ಪರಿವರ್ತಿಸುವ ಮೊದಲು ಆಯಾ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವೈದ್ಯಕೀಯ ಶಿಕ್ಷಣ ಸೇವಾ ಅಧಿಕಾರಿಗಳನ್ನು ಮತ್ತು ಸ್ವಾಯತ್ತ ಸಂಸ್ಥೆಗಳಾಗಿ ಪರಿವರ್ತನೆ/ಸ್ಥಾಪನೆಯಾದ ನಂತರ, ನಿಯೋಜನೆ ಮೇಲೆ ಸ್ವಾಯತ್ತ

ವೈದ್ಯಕೀಯ/ದಂತ ವಿಜ್ಞಾನಗಳ ಸಂಸ್ಥೆಗಳಲ್ಲಿ ಬೋಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ ಮತ್ತು ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವೆಯ ವೈದ್ಯಾಧಿಕಾರಿಗಳ ಸೇವೆಯನ್ನು ಮೇಲೆ (5) ರಿಂದ (21) ರವರೆಗೆ ಓದಲಾದ ಸರ್ಕಾರದ ಆದೇಶಗಳಲ್ಲಿ ಆಯಾ ಸ್ವಾಯತ್ತ ಸಂಸ್ಥೆಗಳ ಸೇವೆಯಲ್ಲಿ ಅವರು ಸರ್ಕಾರಿ ಸೇವೆಯಲ್ಲಿ ಮುಂದುವರಿದಿದ್ದರೆ ಅನ್ವಯಿಸುವ ನಿವೃತ್ತಿ ವೇತನ ನಿಯಮಗಳು ಅನ್ವಯಿಸುವ ಷರತ್ತಿಗೊಳಪಟ್ಟು ಮತ್ತು ಕೆಲವರಿಗೆ ಪ್ರೊರೇಟಾ ಪಿಂಚಣಿ ಅನ್ವಯಿಸುವ ಷರತ್ತಿಗೊಳಪಟ್ಟು ವಿಲೀನಗೊಳಿಸಲಾಗಿದೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ಸರ್ಕಾರಿ ಸ್ವಾಯತ್ತ ಸಂಸ್ಥೆಗಳ ಸೇವೆಯಲ್ಲಿ ವಿಲೀನವಾಗಿರುವ ವೈದ್ಯಕೀಯ ಶಿಕ್ಷಣ ಸೇವಾಧಿಕಾರಿಗಳಿಗೆ ಅವರು ಸರ್ಕಾರಿ ಸೇವೆಯಲ್ಲಿ ಮುಂದುವರಿದಿದ್ದರೆ ಯಾವ ಸೇವಾ ಸವಲತ್ತುಗಳು ಲಭ್ಯವಿದ್ದವು ಅಂತಹ ಸವಲತ್ತುಗಳನ್ನು ಮುಂದುವರಿಸಲು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಾಗೂ ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವಾ ಅಧಿಕಾರಿಗಳಿಗೆ ಪ್ರೊರೇಟಾ ಪಿಂಚಣಿಯನ್ನು ಅನ್ವಯಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 277 ಎಂಎಂಇ 2008, ಬೆಂಗಳೂರು, ದಿನಾಂಕ: 21-09-2010

ಸರ್ಕಾರಿ ಸ್ವಾಯತ್ತ ವೈದ್ಯಕೀಯ/ದಂತ ವಿಜ್ಞಾನ ಸಂಸ್ಥೆಗಳಲ್ಲಿ ಸೇವೆಯನ್ನು ವಿಲೀನಗೊಳಿಸಲ್ಪಟ್ಟಿರುವ ವೈದ್ಯಕೀಯ ಶಿಕ್ಷಣ ಸೇವೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆ ಮತ್ತು ಕಾರ್ಮಿಕ ರಾಜ್ಯ ವಿಮಾ ಸೇವಾ ಅಧಿಕಾರಿಗಳ ನಿವೃತ್ತಿ ಉಪದಾನ ಮತ್ತು ಇತರೆ ಸೇವಾ ಸವಲತ್ತುಗಳನ್ನು ಈ ಕೆಳಗಿನಂತೆ ನಿಯಂತ್ರಿಸಲು ಆದೇಶಿಸಲಾಗಿದೆ.

1. **ವೈದ್ಯಕೀಯ ಶಿಕ್ಷಣ ಸೇವಾ ಅಧಿಕಾರಿಗಳು :**
   1. ದಿನಾಂಕ 01-04-2006 ರ ಮೊದಲು ನೇಮಕಗೊಂಡಿರುವವರಿಗೆ ಅವರು ಸರ್ಕಾರಿ ಸೇವೆಯಲ್ಲಿ ಮುಂದುವರಿದಿದ್ದರೆ ಯಾವ ಯಾವ ಪಿಂಚಣಿ ನಿಯಮಗಳು ಅನ್ವಯಿಸುತ್ತಿದ್ದವೋ ಆ ಪಿಂಚಣಿ ನಿಯಮಗಳು ಅನ್ವಯಿಸತಕ್ಕದ್ದು.
   2. ಇವರ ನಿವೃತ್ತಿ ಉಪದಾನಗಳನ್ನು ಕರ್ನಾಟಕದ ಮಹಾಲೇಖಪಾಲರು ಇತ್ಯರ್ಥಗೊಳಿಸತಕ್ಕದ್ದು.
   3. ಇದಕ್ಕೆ ತಗಲುವ ವೆಚ್ಚವನ್ನು 2071 Pension and other retirement benefits 01 Civil-200-other pension-0202 ಲೆಕ್ಕ ಶೀರ್ಷಿಕೆಯಡಿ ಭರಿಸತಕ್ಕದ್ದು.
   4. GPF, KGID ಮತ್ತು EGIS ಯೋಜನೆಗಳು ಯಥಾವತ್ತಾಗಿ ಮುಂದುವರಿಯತಕ್ಕದ್ದು.
   5. GPF, KGID ಮತ್ತು EGIS ಯೋಜನೆಗಳ ವಂತಿಗೆಗಳನ್ನು ಕ್ರಮಬದ್ಧವಾಗಿ ನೌಕರರಿಂದ ವಸೂಲು ಮಾಡಿ ನಿಗದಿತ ಸಮಯದೊಳಗೆ ಸರ್ಕಾರಕ್ಕೆ ಸಂದಾಯಿಸಲು ಸಂಬಂಧಿಸಿದ ಸ್ವಾಯತ್ತ ಸಂಸ್ಥೆಯ ನಿರ್ದೇಶಕರು ಜವಾಬ್ದಾರರಾಗಿರತಕ್ಕದ್ದು.
   6. ವಿಲೀನ ಪೂರ್ವದಲ್ಲಿ ಇವರು ಪಡೆಯುತ್ತಿದ್ದ 1999 ರ ಎಐಸಿಟಿಇ ವೇತನ ಶ್ರೇಣಿಯಲ್ಲೇ ವಿಲೀನದ ನಂತರವೂ ಮುಂದುವರಿಯತಕ್ಕದ್ದು.
2. **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಮತ್ತು ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವಾ ಅಧಿಕಾರಿಗಳು :**
   1. ಇವರು ಸರ್ಕಾರದಡಿ ಸಲ್ಲಿಸಿರುವ ಸೇವೆಗೆ ಪ್ರೊರೇಟಾ ಪೆನ್ಷನ್ ಮಾತ್ರ ಅರ್ಹವಿರತಕ್ಕದ್ದು.
   2. ಇವರ ನಿವೃತ್ತಿ, ಉಪದಾನಗಳನ್ನು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 235 (ಎ) ಉಪಬಂಧಗಳಡಿ ನಿಯಂತ್ರಿಸತಕ್ಕದ್ದು.
   3. ಮೇಲಿನ ಅಂಶ (1) ಮತ್ತು (2) ರಂತೆ ಸರ್ಕಾರದ ಆದೇಶ ಸಂಖ್ಯೆ : ಆಕುಕ 244 ಎಂಪಿಎಸ್ 2007, ದಿನಾಂಕ 24-12-2008 ರ ಷರತ್ತುಗಳು ತಂತಾನೆ ಮಾರ್ಪಟ್ಟಿರುತ್ತದೆ.
   4. ವಿಲೀನಪೂರ್ವದಲ್ಲಿ 2005 ರ ಮೊದಲು ಪಡೆಯುತ್ತಿದ್ದ 1999 ರ ರಾಜ್ಯ ವೇತನ ಶ್ರೇಣಿಗೆ ಅನುಸಾರವಾಗಿ ಎಐಸಿಟಿಇ ವೇತನ ಶ್ರೇಣಿಯಲ್ಲಿ ಇವರ ವೇತನವನ್ನು ನಿಯಂತ್ರಿಸತಕ್ಕದ್ದು.
   5. ಇವರ ವೇತನವನ್ನು ಎಐಸಿಟಿಇ ವೇತನ ಶ್ರೇಣಿಯಲ್ಲಿ ನಿಯಂತ್ರಿಸುವಾಗ 2007 ರ ವೇತನ ಶ್ರೇಣಿಯಲ್ಲಿ ತಜ್ಞರು ಮತ್ತು ಹಿರಿಯ ತಜ್ಞರಾಗಿ ಹುದ್ದೆಗಳಲ್ಲಿ ಪಡೆಯುತ್ತಿದ್ದ ವೇತನವನ್ನು ವೈಯಕ್ತಿಕ ವೇತನವೆಂದು ಸಂರಕ್ಷಿಸತಕ್ಕದ್ದು.
   6. ಕಾಲಮಿತಿ ಮುಂಬಡ್ತಿ ಯೋಜನೆಯಡಿ ಹೊಂದಿದ್ದ ತಜ್ಞರು ಮತ್ತು ಹಿರಿಯ ತಜ್ಞರು ಹುದ್ದೆಗಳನ್ನು ವಿಲೀನವಾದಾಗ ಸ್ವಾಯತ್ತ ಸಂಸ್ಥೆಗಳ ಉನ್ನತ ಬೋಧನಾ ವೃಂದಗಳೊಂದಿಗೆ ಸಮೀಕರಿಸತಕ್ಕದ್ದಲ್ಲ.
   7. ಇವರನ್ನು ಪ್ರಾರಂಭಿಕ ಬೋಧನಾ ವೃಂದಗಳಲ್ಲಿ ಮಾತ್ರ ವಿಲೀನಗೊಳಿಸತಕ್ಕದ್ದು ಮತ್ತು ಆ ಪ್ರಕಾರ ಅವರ ವೇತನವನ್ನು ನಿಯಂತ್ರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್ ಡಿ 644 ಸೇವೆಗಳು-1/10, ದಿನಾಂಕ: 17-07-2010 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.2761

ಕೆ. ಬಿ. ಧನಂಜಯಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

FOREST, ENVIRONMENT AND ECOLOGY SECRETARIAT

Sub : Amendment to the Karnataka State Pollution Control Board, Cadre, Recruitment and Conditions of Service Regulations. 1992-Upgradation of the post of Senior Environmental Officer to Chief Environmental Officer in KSPCB – issue of orders-reg.

Read : 1. G.O. No. FEE 1 EPC 2003 Dated : 21-4-2006.
2. KSPCB letter No. : ಮಾನಿಮಾ/14/ಅಡೆವ/08/390 ಜಣ : 16-07-2010.

Preamble:

In Government Order read at (I) above, Government had brought in amendments to the Karnataka State Pollution Control Board, Cadre, Recruitment and Conditions of Service Regulations, 1992 by upgrading two post's of Senior Environmental Officer's (SEO) and thus creating two posts of Chief Environmental Officer's (CEO) in the KSPCB, Bangalore.

In the letter read at (2) above, the Karnataka State Pollution Control Board has reported that the Board in its meeting held on 21-5-2010 has resolved to create one more post of Chief Environmental Officer in KSPCB. There are totally three sanctioned posts of Senior Environmental Officer's in KSPCB. After examining the matter at Government level, it has been decided to agree with the recommendation of the Board to upgrade one post of Senior Environmental Officer to that of Chief Environmental Officer by amending the Karnataka State Pollution Control Board, Cadre, Recruitment and Conditions of Service Regulations, 1992. Hence the Order.

Government Order No. FEE 130 EPC 2010, Bangalore, Dated: 27-10- 2010

In the facts and circumstances explained in the preamble and in exercise of powers conferred under Section 12 (3A) (b) of the Water (Prevention and Control of Pollution) Act. 1974, Government is pleased to accord sanction for upgradation of one post of Senior Environmental Officer to that of Chief Environmental Officer in Karnataka State Pollution Control Board in the scale of Rs. 22,125-30,300. Consequently, the number of sanctioned posts of Senior Environmental Officer shall stand reduced from three to two and the number of posts of Chief Environmental Officer being enhanced from two to three.

The pay scales attached to the post, qualification/experience and the mode of filling up of these upgraded posts shall continue to be governed by the G.O. read at (1) above.

The Karnataka State Pollution Control Board shall issue a separate Notification on the above lines in terms of Section 12 (3A) of the Water (Prevention and Control of Pollution) Act, 1974.

The expenditure, consequent to this proposal, shall be borne entirely by the Board (KSPCB), and no financial liability whatsoever shall lie with the Government in this regard.

By Order and in the name of the Governor of Karnataka,

PR. 2762

B. MANOHAR
Under Secretary to Government
Forest, Environment and Ecology Dept.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆಯಡಿ "ಬಾಲಸಂಜೀವಿನಿ" ಎಂಬ ಹೊಸ ಉಪಯೋಜನೆಯನ್ನು ಅಳವಡಿಸಿ ಪರಿಷ್ಕರಿಸಿದ ಆದೇಶ.

ಓದಲಾಗಿದೆ :
1. ದಿನಾಂಕ : 30–08–2007 ಮತ್ತು 04–12–2007 ರ ಸರ್ಕಾರಿ ಆದೇಶ ಸಂಖ್ಯೆ : ಮಮಇ 102 ಐಸಿಡಿ 2007.
2. ದಿನಾಂಕ : 15–04–2010 ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಪ್ರಸ್ತಾವನೆ ಸಂಖ್ಯೆ : ಮಮಅಇ : ಯೋಜನೆ–03–10–11.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (i) ದಿನಾಂಕ : 30–08–2007 ರ ಸರ್ಕಾರಿ ಆದೇಶದಲ್ಲಿ ರಾಜ್ಯದಲ್ಲಿನ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗುವ ಮಕ್ಕಳ ಪೈಕಿ 3ನೇ ಗ್ರೇಡಿನ ಹಾಗೂ 4ನೇ ಗ್ರೇಡಿನ ಮಕ್ಕಳಿಗೆ, ವೈದ್ಯರು ಖಾಸಗಿ ಔಷಧಿ ಅಂಗಡಿಗಳಿಂದ ಖರೀದಿಸಲು ಸಲಹೆ ನೀಡುವಂತಹ ಪ್ರಕರಣಗಳಲ್ಲಿ ಪ್ರತಿ ಮಗುವಿಗೆ ಗರಿಷ್ಠ ರೂ. 750/– ರಂತೆ ಔಷದೋಪಚಾರ ಹಾಗೂ ಇತರೆ ವೈದ್ಯಕೀಯ ವೆಚ್ಚಗಳಿಗಾಗಿ ಭರಿಸಲು "ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚಗಳನ್ನು ಭರಿಸುವ ಯೋಜನೆ" ಎಂಬ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿರುತ್ತದೆ. ಈಗಾಗಲೇ ದಿನಾಂಕ : 04–12–2007ರ ಆದೇಶದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸುವ ಮಾರ್ಗಸೂಚಿಯನ್ನು ಹೊರಡಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2) ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಸ್ತಾವನೆಯಲ್ಲಿ ಕೇಂದ್ರ ಪುರಸ್ಕೃತ ಶಿಶು ಅಭಿವೃದ್ಧಿ ಯೋಜನೆಯಡಿ 0–6 ವರ್ಷ ವಯೋಮಿತಿಯಲ್ಲಿರುವ ಅಂಗನವಾಡಿ ಕೇಂದ್ರಗಳಲ್ಲಿನ ಬಿ.ಪಿ.ಎಲ್. ವರ್ಗದ ಅನಾರೋಗ್ಯ ಪೀಡಿತ, 3ನೇ ದರ್ಜೆಯ ಚಿಕಿತ್ಸೆಯ ಅವಶ್ಯಕತೆ ಇರುವ ನ್ಯೂನ್ಯ ಪೋಷಣೆಗೆ ಒಳಗಾಗಿರುವ ಮಕ್ಕಳಿಗೆ ಆಯ್ದ 5 ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಿದಲ್ಲಿ, ಉಚಿತ ಸೇವೆಯನ್ನು ಹೊರತುಪಡಿಸಿ ಉಳಿದ ಚಿಕಿತ್ಸೆಗೆ (3ನೇ ದರ್ಜೆಯ ಚಿಕಿತ್ಸೆಯ ಅವಶ್ಯಕತೆ ಇರುವ) ಮಗುವಿಗೆ ಗರಿಷ್ಠ ರೂ. 35,000/– ಹಾಗೂ ನವಜಾತ ಶಿಸ್ತು ಆರೈಕೆ ಮತ್ತು ಚಿಕಿತ್ಸೆಗೆ ರೂ. 50,000/– ಗಳ ಮೊತ್ತವನ್ನು ಭರಿಸಲು ಉದ್ದೇಶಿಸಲಾಗಿದೆ. ಆಸ್ಪತ್ರೆಗಳಲ್ಲಿ ಭರ್ತಿಯಾಗಿ ಅವಕಾಶ ಇಲ್ಲದಿದ್ದಲ್ಲಿ ಸದರಿ ಆಸ್ಪತ್ರೆಗಳು ಸೂಚಿಸುವ ಇತರೆ ಚಿಕಿತ್ಸಾಲಯಗಳಲ್ಲಿ ಚಿಕಿತ್ಸೆ ನೀಡಬಹುದಾಗಿದ್ದು, ಈ ಯೋಜನೆಯಡಿ 14 ವಿವಿಧ ರೀತಿಯ ಖಾಯಿಲೆಗೆ ಚಿಕಿತ್ಸೆ ಕೊಡಿಸಲು ಈಗಾಗಲೇ ಅನುಷ್ಠಾನದಲ್ಲಿರುವ ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚವನ್ನು ಭರಿಸುವ ಯೋಜನೆಯಡಿ 'ಬಾಲಸಂಜೀವಿನಿ' ಎಂಬ ಉಪಯೋಜನೆಯನ್ನು ಅಳವಡಿಸಿ ಯೋಜನೆಯನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ.

ಈ ಯೋಜನೆಗೆ ರೂ. 550.00 ಲಕ್ಷ ಆಯವ್ಯಯವನ್ನು ಒದಗಿಸಿದ್ದು, ರೂ. 50.00 ಲಕ್ಷ ಮೊತ್ತವನ್ನು ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಮೂಲಕ ಯೋಜನೆಗೆ ಹಾಗೂ ರೂ. 500.00 ಲಕ್ಷ ಮೊತ್ತವನ್ನು ಬಾಲಸಂಜೀವಿನಿ ಎಂಬ ಉಪಯೋಜನೆಗೆ ಭರಿಸಲು ಉದ್ದೇಶಿಸಿದ್ದು, ಈ ಪರಿಷ್ಕೃತ ಯೋಜನೆಯ ಮಾರ್ಗಸೂಚಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆದೇಶ ಸಂಖ್ಯೆ: ಮಮಇ 126 ಐಸಿಡಿ 2010, ಬೆಂಗಳೂರು ದಿನಾಂಕ: 21–10–2010

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈಗಾಗಲೇ ಅನುಷ್ಠಾನದಲ್ಲಿರುವ ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ ಯೋಜನೆ ಅಡಿಯಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿರುವ ಮಾರ್ಗಸೂಚಿಯನ್ವಯ 'ಬಾಲಸಂಜೀವಿನಿ' ಎಂಬ

ಉಪಯೋಜನೆಯನ್ನು ಅಳವಡಿಸಿ ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಾಗೂ ಅವರು ಸರಬರಾಜು ಮಾಡುವ ಔಷದೋಪಚಾರಗಳನ್ನು ಪಡೆದುಕೊಳ್ಳುವ ಷರತ್ತಿಗೊಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ದಿನಾಂಕ : 13-05-2010 ರ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ : 302 : ವೆಚ್ಚ-02/10 ರಲ್ಲಿ ನೀಡಿರುವ ಸಹಮತದೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅನುಬಂಧ

(ಆದೇಶ ಸಂಖ್ಯೆ: ಮಮಇ 126 ಐಸಿಡಿ 2010 ಬೆಂಗಳೂರು, ದಿನಾಂಕ: 21-10-2010ಕ್ಕೆ ಮಾರ್ಗಸೂಚಿ)

I. ಯೋಜನೆಯ ಉದ್ದೇಶ :

1. ಅಪೌಷ್ಠಿಕತೆಯಿಂದ ನರಳುತ್ತಿರುವ ಮಕ್ಕಳನ್ನು ಗುರುತಿಸಿ, ಆ ಮಕ್ಕಳಿಗೆ ಅವಶ್ಯಕವಿರುವ ಚಿಕಿತ್ಸೆ ಹಾಗೂ ಆರೈಕೆಯನ್ನು ನೀಡುವುದು.
2. ಮಕ್ಕಳನ್ನು ಆರೋಗ್ಯವಂತರನ್ನಾಗಿಸುವುದು.
3. ಮಕ್ಕಳ ತಾಯಂದಿರಿಗೆ ಶಿಕ್ಷಣ ನೀಡುವುದರ ಮೂಲಕ ಅವರನ್ನು ಸಬಲರನ್ನಾಗಿಸುವುದು.
4. ಆರೋಗ್ಯ ಸೇವೆಗಳ ಮೂಲಕ ಹಾಗೂ ಉತ್ತಮ ಪೌಷ್ಠಿಕ ಆಹಾರ ಒದಗಿಸುವ ಮೂಲಕ ಸಶಕ್ತರನ್ನಾಗಿಸುವುದು.

II. ಯೋಜನೆಯ ವ್ಯಾಪ್ತಿಗೆ ಒಳಪಡುವವರು :

1. ಫಲಾನುಭವಿ ಅಂಗನವಾಡಿ ಕೇಂದ್ರದಲ್ಲಿ ದಾಖಲಾಗಿರಬೇಕು.
2. ಫಲಾನುಭವಿ 0-6 ವರ್ಷದ ವಯೋಮಿತಿಯಲ್ಲಿರಬೇಕು.
3. ಅನಾರೋಗ್ಯ ಪೀಡಿತ, ನ್ಯೂನ್ಯ ಪೋಷಣೆಗೆ ಒಳಗಾಗಿರುವ ಮಕ್ಕಳು.
4. ಬಿಪಿಎಲ್ ವರ್ಗಕ್ಕೆ ಸೇರಿದವರಾಗಿರಬೇಕು.

III. ಯೋಜನೆಯ ಅನುಷ್ಠಾನ : (ಆಯ್ದ ಆಸ್ಪತ್ರೆಗಳ ಮೂಲಕ) :

ಅಪೌಷ್ಠಿಕ ಹಾಗೂ ತೀವ್ರತರ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ಚಿಕಿತ್ಸೆ ನೀಡುವ ಕೇಂದ್ರವನ್ನು ಹಾಗೂ ಪಾಲಕರಿಗೆ ಮಾಹಿತಿ ನೀಡುವಂತಹ ಕೇಂದ್ರವನ್ನಾಗಿ ಗುರುತಿಸಲು ಪ್ರಾರಂಭಿಕವಾಗಿ ರಾಜ್ಯದ 5 ವಿಭಾಗಗಳಲ್ಲಿ ಅಂದರೆ, ಬೆಂಗಳೂರು, ದಾವಣಗೆರೆ, ಬೆಳಗಾಂ, ಗುಲ್ಬರ್ಗ ಮತ್ತು ಮಂಗಳೂರುಗಳಲ್ಲಿ ಈ ಕೆಳಕಂಡ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬೇಕು.

1. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು-ಬೆಂಗಳೂರು (ನಗರ), ಬೆಂಗಳೂರು (ಗ್ರಾಮಾಂತರ), ಮೈಸೂರು; ಮಂಡ್ಯ, ಕೊಡಗು, ಕೋಲಾರ, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ರಾಮನಗರ ಜಿಲ್ಲೆಗಳು ಸೇರ್ಪಡೆಯಾಗಿರುತ್ತದೆ.
2. ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ, ದಾವಣಗೆರೆ-ಶಿವಮೊಗ್ಗ, ದಾವಣಗೆರೆ, ಹಾವೇರಿ, ಕೊಪ್ಪಳ ಮತ್ತು ಚಿತ್ರದುರ್ಗ.
3. ಡಾ. ಪ್ರಭಾಕರ ಕೋರೆ ಫ್ರೀ ಆಸ್ಪತ್ರೆ, ಬೆಳಗಾಂ-ಧಾರವಾಡ, ಬೆಳಗಾಂ, ಬಳ್ಳಾರಿ, ಬಾಗಲಕೋಟೆ, ಬಿಜಾಪುರ ಮತ್ತು ಗದಗ.
4. ಎಂ.ಆರ್. ಮೆಡಿಕಲ್ ಕಾಲೇಜ್, ಗುಲ್ಬರ್ಗ-ಬೀದರ್, ಗುಲ್ಬರ್ಗ ಮತ್ತು ರಾಯಚೂರು.
5. ಮಣಿಪಾಲ್ ಆಸ್ಪತ್ರೆ, ಮಣಿಪಾಲ್-ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಸೇರ್ಪಡೆಯಾಗಿವೆ.

ವಿಶೇಷ ಸಂದರ್ಭಗಳಲ್ಲಿ ಯಾವುದೇ ಜಿಲ್ಲೆಯ ಮಗುವನ್ನು ಮೇಲಿನ 5 ಘಟಕಗಳ ಪೈಕಿ ಯಾವುದೇ ಘಟಕದಲ್ಲಿ ಚಿಕಿತ್ಸೆ ನೀಡಬಹುದಾಗಿರುತ್ತದೆ. ಮಗುವು ಒಳರೋಗಿಯಾಗಿ ದಾಖಲಿಸ್ಪಟ್ಟಲ್ಲಿ ದಾಖಲಿಸುವ ಹಾಗೂ ವೈದ್ಯರ ಸೇವೆಯ ವೆಚ್ಚವನ್ನು (ಕೊಠಡಿಯ ಹಾಸಿಗೆಯ ಬಾಡಿಗೆ) ಮೇಲಿನ ಘಟಕಗಳು ಉಚಿತವಾಗಿ ಭರಿಸುತ್ತವೆ.

ಈ ಘಟಕದಲ್ಲಿ ಪ್ರಾರಂಭಿಕವಾಗಿ ಸುಮಾರು 500 ಫಲಾನುಭವಿಗಳಿಗೆ ಒಂದು ವರ್ಷಕ್ಕೆ ಚಿಕಿತ್ಸೆ ನೀಡಬಹುದಾಗಿರುತ್ತದೆ.

IV. ಈ ಕೆಳಕಂಡ ತೀವ್ರತರ ಖಾಯಿಲೆಗಳಿಂದ ನರಳುತ್ತಿರುವ 0-6 ವರ್ಷದ ಅಂಗನವಾಡಿ ಕೇಂದ್ರದ ಮಕ್ಕಳು ಈ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ:

1. ತೀವ್ರತರ ನಿಮೋನಿಯ
2. ಎನ್ಸೆಫಿಲೈಟಿಸ್ – ಮೆನ್ಜಿಟಿಸ್
3. ಕ್ಲಿಷ್ಟಕರ ಮಲೇರಿಯ
4. ಅನಿಮಿಯ – (ರಕ್ತಹೀನತೆ)
5. ಡಯಾಬಿಟಿಕ್ (ಮಧುಮೇಹ)
6. ರೀನಲ್ ಸಮಸ್ಯೆಗಳು – ಮೂತ್ರಕೋಶ/ಕಿಡ್ನಿ ಸಮಸ್ಯೆ
7. ನವಜಾತ ಶಿಶುವಿನ ಲೆವೆಲ್ – 3 ಚಿಕಿತ್ಸೆ
8. ಲಿವರ್ ತೊಂದರೆ
9. ನ್ಯುರೊಲಾಜಿಕಲ್ ಡಿಸಾರ್ಡರ್ಸ್
10. ಸೆಕೆಂಡರಿ ಮಾಲ್ ನ್ಯೂಟ್ರಿಷನ್
11. ಕ್ಲಿಷ್ಟ ಅತಿಸಾರ
12. ನವಜಾತ ಶಿಶುವಿನ ಶಸ್ತ್ರ ಚಿಕಿತ್ಸೆ
13. ವಿಷಜಂತು ಕಡಿತಕ್ಕೆ ಚಿಕಿತ್ಸೆ (ಹಾವು)
14. ವಿಷ ಸೇವನೆ

V. ಚಿಕಿತ್ಸೆ ಅವಶ್ಯವಿರುವ ಮಗುವಿನ ದಾಖಲಾತಿ ವಿವರ :

1. ಈ ಯೋಜನೆಯಡಿ ಬರುವ ಮಗುವನ್ನು ಗುರುತಿಸುವ ಜವಾಬ್ದಾರಿ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿ/ಸಿಡಿಪಿಓ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಘಟಕದ ವೈದ್ಯರದ್ದಾಗಿರುತ್ತದೆ.
2. ಗುರುತಿಸಿದ ಮಗುವನ್ನು ರೆಫರಲ್ ಕಾರ್ಡಿನೊಂದಿಗೆ ಆಸ್ಪತ್ರೆಗೆ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿಯರು ದಾಖಲಿಸುವುದು.
3. ರೆಫರಲ್ ಕಾರ್ಡಿನಲ್ಲಿ ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿ/ಸಿಡಿಪಿಓ ಹಾಗೂ ವೈದ್ಯಾಧಿಕಾರಿಗಳು ರುಜು ಮಾಡಬೇಕು.
4. ಮಗುವನ್ನು ಮೊದಲಿನಿಂದಲೂ ಪ್ರಾಥಮಿಕ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಘಟಕದ ವೈದ್ಯಾಧಿಕಾರಿಗಳು ಪರಿಶೀಲಿಸಿ ಅಂಗನವಾಡಿ ಕೇಂದ್ರದ ಆರೋಗ್ಯ ತಪಾಸಣಾ ಇಲ್ಲವೇ ಶಿಫಾರಸ್ಸಿನಲ್ಲಿ ರೆಫರ್ ಮಾಡಲು ಸೂಚಿಸಿದಲ್ಲಿ ರೆಫರಲ್ ಕಾರ್ಡಿನಲ್ಲಿ ರುಜು ಪಡೆಯುವ ಅವಶ್ಯಕತೆ ಇರುವುದಿಲ್ಲ.
5. ತುರ್ತು ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯೊರೊಬ್ಬರೇ ನೇರವಾಗಿ ಮಕ್ಕಳನ್ನು ಗೊತ್ತುಪಡಿಸಿದ ಆಸ್ಪತ್ರೆಗೆ ಕಳುಹಿಸಬಹುದಾಗಿದ್ದು ಅಂತಹ ಸಂದರ್ಭದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಮೇಲ್ವಿಚಾರಕಿಯರು ಆಸ್ಪತ್ರೆಗೆ ಭೇಟಿ ನೀಡಿ ರೆಫರಲ್ ಕಾರ್ಡಿನಲ್ಲಿ ರುಜು ಮಾಡಬೇಕು.
6. ರೆಫರಲ್ ಕಾರ್ಡಿನೊಂದಿಗೆ ಬಿಪಿಎಲ್ ಕಾರ್ಡ್, ಮಗುವಿನ ಭಾವಚಿತ್ರ ಲಗತ್ತಿಸಿರಬೇಕು.
7. ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಐಸಿಡಿಎಸ್‌ನ ಯಾವುದೇ ಕರ್ಮಚಾರಿಗಳ ಸಹಿ ಇಲ್ಲದೇ ಯಾವುದೇ ಮಗುವು ಆಸ್ಪತ್ರೆಗೆ ದಾಖಲಾದಲ್ಲಿ ಆಸ್ಪತ್ರೆಯ ಆಡಳಿತ ವರ್ಗವು ಅಂಗನವಾಡಿ ಕೇಂದ್ರದಲ್ಲಿ ದಾಖಲಾದ ಬಗ್ಗೆ ಹಾಗೂ ಮಗು ಬಿಪಿಎಲ್ ಕುಟುಂಬಕ್ಕೆ ಒಳಪಡುವ ಬಗ್ಗೆ ದೃಢೀಕರಿಸಿಕೊಂಡು ನಂತರದಲ್ಲಿ ಸಿಡಿಪಿಓ ರವರಿಂದ ದೃಢೀಕರಣ ಪ್ರಮಾಣ ಪತ್ರ ಪಡೆಯಬಹುದಾಗಿರುತ್ತದೆ.
8. ಈಗಾಗಲೇ ಆಯ್ಕೆಯಾದ 5 ಆಸ್ಪತ್ರೆಗಳಲ್ಲಿ ವೆಂಟಿಲೇಟರ್, ಆಕ್ಸಿಝನ್ ಮುಂತಾದ ಸೌಲಭ್ಯಗಳನ್ನು ಹೊಂದಿದ್ದು, ಒಂದು ವೇಳೆ ಈ ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಇಲ್ಲದೇ ಇದ್ದ ಸಮಯದಲ್ಲಿ ಕೆಲವು ರೋಗಿಗಳನ್ನು ಬೇರೆ ಆಸ್ಪತ್ರೆಗೆ ಕಳುಹಿಸುವಾಗ ಈಗಾಗಲೇ ಆಯ್ಕೆ ಮಾಡಲಾದ ಆಸ್ಪತ್ರೆಗಳವರು ಇಂತಹದೇ ಸೌಲಭ್ಯ ಹೊಂದಿರುವ ಹತ್ತಿರದ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಅಥವಾ ಆಸ್ಪತ್ರೆಗಳನ್ನು ಗುರುತಿಸಿ ಇಂತಹ ರೋಗಿಗಳನ್ನು ಆ ಆಸ್ಪತ್ರೆಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು/ಉಪನಿರ್ದೇಶಕರು ಆಸ್ಪತ್ರೆಗೆ ರೋಗಿಗಳನ್ನು ಕಳುಹಿಸುವ ಮೊದಲು ಆಸ್ಪತ್ರೆಯ ಮುಖ್ಯಸ್ಥರೊಂದಿಗೆ ದೂರವಾಣಿಯ ಮುಖಾಂತರ ಸಂಪರ್ಕಿಸಿ ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಇರುವ ಕುರಿತು ಖಚಿತಪಡಿಸಿಕೊಂಡು, ಒಂದು ವೇಳೆ ಆಯ್ದ ಆಸ್ಪತ್ರೆಗಳಲ್ಲಿ ಸ್ಥಳಾವಕಾಶ ಇಲ್ಲದ ಸಂದರ್ಭದಲ್ಲಿ ಆ ಆಸ್ಪತ್ರೆ ಗುರುತಿಸಿದ ಹತ್ತಿರದ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಮಾಡುವುದು.

VI. ಅನುದಾನದ ವಿವರ :

1. 3ನೇ ಹಂತದ (Tertiary care) ಚಿಕಿತ್ಸೆ ಅವಶ್ಯವಿರುವ ಮಗುವಿಗೆ ಗರಿಷ್ಠ ರೂ. 35,000/– ಹಾಗೂ ನವಜಾತ ಶಿಶು ಆರೈಕೆ ಮತ್ತು ಚಿಕಿತ್ಸೆಗೆ ಪ್ರತಿ ಮಗುವಿಗೆ ಗರಿಷ್ಠ ರೂ. 50,000/– ದಂತೆ ವೆಚ್ಚ ಭರಿಸಬಹುದು (Subject to Actuals).
2. ಗರಿಷ್ಠ ರೂ. 35,000/– ಹಾಗೂ ಗರಿಷ್ಠ ರೂ. 50,000/– ಚಿಕಿತ್ಸಾವೆಚ್ಚ ಮಾತ್ರವಾಗಿದ್ದು ಅದರಲ್ಲಿ ಮಗು ಹಾಗೂ ಮಗುವಿನ ಪೋಷಕರೊಬ್ಬರ ಪ್ರಯಾಣ ವೆಚ್ಚ; ಹಾಗೂ ದಿನಭತ್ಯ ಒಳಗೊಂಡಿರುವುದಿಲ್ಲ.
3. ಪ್ರತಿ ಮಗುವಿನೊಂದಿಗೆ ಮಗುವಿನ ತಾಯಿ/ತಂದೆ/ಪೋಷಕರು ಒಬ್ಬರಿಗೆ ಮಾತ್ರ ನಿಗದಿತ 2ನೇ ದರ್ಜೆಯ ರೈಲು/ಬಸ್ ದರದಂತೆ ಪ್ರಯಾಣ ಭತ್ಯೆ ನೀಡಲು ಹಾಗೂ ದಿನಭತ್ಯೆ ರೂ. 100/– ರಂತೆ ಮಗುವು ಆಸ್ಪತ್ರೆಯಲ್ಲಿ ಒಳರೋಗಿಯಾಗಿರುವವರೆಗೆ ನೀಡುವುದು.
4. ಆಸ್ಪತ್ರೆ ಇರುವ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿರುವ ಉಪ ನಿರ್ದೇಶಕರು ಒಟ್ಟು ವೆಚ್ಚದ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಪ್ರಧಾನ ಕಛೇರಿಯಿಂದ ಇವರಿಗೆ ತ್ರೈಮಾಸಿಕಕ್ಕೊಮ್ಮೆ ರೂ. 25 ಲಕ್ಷಗಳನ್ನು ಬಿಡುಗಡೆ ಮಾಡಲಾಗುವುದು.
5. ಆಸ್ಪತ್ರೆಯ ವೈದ್ಯರು ಮಗುವಿನ ಆಸ್ಪತ್ರೆಯ ವೆಚ್ಚ ಭರಿಸಿ, ಭರಿಸಿದ ವೆಚ್ಚಕ್ಕೆ ವೋಚರ್‌ನೊಂದಿಗೆ ಉಪ ನಿರ್ದೇಶಕರಿಗೆ ಪ್ರಸ್ತಾವನೆಯನ್ನು ಸಲ್ಲಿಸಬೇಕು. ಸಲ್ಲಿಸಿದ ಪ್ರಸ್ತಾವನೆಯ ಆಧಾರದ ಮೇಲೆ ಉಪ ನಿರ್ದೇಶಕರು ಡಿಸಿ ಬಿಲ್ಲಿನಲ್ಲಿ ಹಣ ಸೆಳೆದು ಆಸ್ಪತ್ರೆಗೆ ಮರುಪಾವತಿ ಮಾಡುವುದು.
6. ಅಂಗನವಾಡಿ ಕೇಂದ್ರದ ಮೇಲ್ವಿಚಾರಕಿಯರು ಸಿಡಿಪಿಓ ಕಛೇರಿಗಳಲ್ಲಿ ಮಗುವಿನ ವಿವರ ಹಾಗೂ ವೆಚ್ಚದ ವಿವರಗಳ ದಾಖಲಾತಿ ನಿರ್ವಹಿಸುವುದು.
7. ಗುರುತಿಸಿದ 5 ಆಸ್ಪತ್ರೆಗಳಲ್ಲಿ ಲಭ್ಯವಿರುವ ಔಷಧಿ ಹೊರತುಪಡಿಸಿ ಉಳಿದ ಔಷಧಿಗಳ ವೆಚ್ಚವನ್ನು ಈ ಯೋಜನೆಯಡಿ ಭರಿಸಬಹುದಾಗಿರುತ್ತದೆ.
8. ಅನುದಾನದ ಖರ್ಚಿಗೆ ಸಂಬಂಧಪಟ್ಟಂತೆ ಅನುದಾನ ಉಪಯುಕ್ತತಾ ಪ್ರಮಾಣ ಪತ್ರವನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರುಗಳು ನೀಡುವುದು.

VII. ಯೋಜನೆಯಡಿ ಆಸ್ಪತ್ರೆಯವರು ಈ ಕೆಳಕಂಡ ಬಾಬ್ತಿಗೆ ವೆಚ್ಚ ಭರಿಸುವುದು :

1. ಯಾವ ಔಷಧಿಗಳು ಆಸ್ಪತ್ರೆಯಲ್ಲಿ ಉಚಿತವಾಗಿ ಲಭ್ಯವಿಲ್ಲವೋ ಅಂತಹ ಔಷಧಿಗಳು.
2. ಚಿಕಿತ್ಸೆಯ ಪೂರಕ ವೆಚ್ಚಗಳು (consumable) ಉದಾ: ಸಿರೆಂಜ್, ಗ್ಲೂಕೋಸ್, ಆಕ್ಸಿಝನ್, ವೆಂಟಿಲೇಟರ್, ಔಷಧಿಗಳು ಇತ್ಯಾದಿ.
3. ಆಯ್ದ 5 ಆಸ್ಪತ್ರೆಗಳಲ್ಲಿ ಯಾವುದಾದರೂ Investigation ಸೌಲಭ್ಯ ಲಭ್ಯವಿಲ್ಲದಿದ್ದಲ್ಲಿ ಬೇರೆ ಸಂಸ್ಥೆ/ಆಸ್ಪತ್ರೆಯಲ್ಲಿ ಮಾಡಿಸಿದ ಪಕ್ಷದಲ್ಲಿ ಅದರ ವೆಚ್ಚವನ್ನು ಗರಿಷ್ಠ ಮಿತಿಯಲ್ಲಿ ಸಂಬಂಧಪಟ್ಟ ಆಸ್ಪತ್ರೆಯವರೇ ಭರಿಸುವುದು.

VIII. ಅನುದಾನದ ನಿರ್ವಹಣೆ :

1. ನ್ಯೂನ್ಯಪೋಷಣೆಗೆ ಒಳಗಾಗಿರುವ ಮಗುವಿಗೆ ಸಂಬಂಧಪಟ್ಟ ಸಂಪೂರ್ಣ ಅನುದಾನದ ನಿರ್ವಹಣೆ ಆಯಾ ಜಿಲ್ಲೆಯ ಉಪ ನಿರ್ದೇಶಕರದ್ದಾಗಿರುತ್ತದೆ.
2. ಅನುದಾನದ ಖರ್ಚಿನ ಸಂಬಂಧಪಟ್ಟ ಅನುದಾನ ಉಪಯೋಗತಾ ಪ್ರಮಾಣಪತ್ರವನ್ನು ಸಲ್ಲಿಸುವ ಕ್ರಮ ಉಪ ನಿರ್ದೇಶಕರದ್ದಾಗಿರುತ್ತದೆ.

IX. ಕಾರ್ಯಕ್ರಮದಲ್ಲಿ ಸಹಕರಿಸುವವರು :

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
3. ವೈದ್ಯಕೀಯ ಆಸ್ಪತ್ರೆ ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು

X. ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಕರ್ಮಚಾರಿಗಳ ಜವಾಬ್ದಾರಿ :

1. ಯೋಜನೆಯ ಕುರಿತು ಪ್ರಚಾರ/ಸಮುದಾಯದಲ್ಲಿ ತಿಳುವಳಿಕೆ-ನಿರ್ದೇಶನಾಲಯ/ಉಪ ನಿರ್ದೇಶಕರು/ ನಿರೂಪಣಾಧಿಕಾರಿಗಳು/ ಸಿಡಿಪಿಓ/ ಎಸಿಡಿಪಿಓ/ಮೇಲ್ವಿಚಾರಕಿ/ಅಂಗನವಾಡಿ ಕಾರ್ಯಕರ್ತೆ/ಆಶಾ/ANM/ ವೈದ್ಯಾಧಿಕಾರಿಗಳು.
2. ಮಕ್ಕಳಗುರುತಿಸುವಿಕೆ ಮೇಲ್ವಿಚಾರಕಿ/ಅಂಗನವಾಡಿಕಾರ್ಯಕರ್ತೆ/ಆಶಾ/ANM/PHC/PHU/ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳು.
3. ಮಕ್ಕಳನ್ನು ಆಸ್ಪತ್ರೆಗೆ ರೆಫರ್ ಮಾಡುವುದು – ಅಂಗನವಾಡಿ ಕಾರ್ಯಕರ್ತೆ/ ANM/ವೈದ್ಯಾಧಿಕಾರಿಗಳು/ಸಿಡಿಪಿಓ/ಎಲ್‌ಹೆಚ್‌ವಿ.
4. ಮಕ್ಕಳನ್ನು ಆಸ್ಪತ್ರೆಗೆ ದಾಖಲಿಸುವುದು – ಅಂಗನವಾಡಿ ಕಾರ್ಯಕರ್ತೆ/ಸಿಡಿಪಿಓ/ಮೇಲ್ವಿಚಾರಕಿ
5. ಮಕ್ಕಳ ಚಿಕಿತ್ಸೆ – ಆಸ್ಪತ್ರೆಯ ವೈದ್ಯರು
6. ಮಕ್ಕಳ ಅನುಪಾಲನೆ – ಸಿಡಿಪಿಓ/ಎಸಿಡಿಪಿಓ/ಮೇಲ್ವಿಚಾರಕಿ/ಅಂಗನವಾಡಿ ಕಾರ್ಯಕರ್ತೆ/ಆಶಾ/ ANM
7. ಮಕ್ಕಳ ದಾಖಲೆ ನಿರ್ವಹಣೆ – ಅಂಗನವಾಡಿ ಕಾರ್ಯಕರ್ತೆ/ಮೇಲ್ವಿಚಾರಕಿ/ಸಿಡಿಪಿಓ/ಉಪ ನಿರ್ದೇಶಕರು
8. ಮಗು ಆಸ್ಪತ್ರೆಯಲ್ಲಿರುವಾಗ ಭೇಟಿ/ಮೇಲ್ವಿಚಾರಣೆ – ಸಿಡಿಪಿಓ/ನಿರುಪಣಾಧಿಕಾರಿ/ಉಪ ನಿರ್ದೇಶಕರು
9. ಲೆಕ್ಕಪತ್ರ ನಿರ್ವಹಣೆ – ಉಪ ನಿರ್ದೇಶಕರು/ಸಿಡಿಪಿಓ
10. ಬಿಡುಗಡೆ ಹೊಂದಿ ಮನೆಗೆ ಹೊರಡುವಾಗ ಫಾಲೊ ಅಪ್ – ಅಂಗನವಾಡಿ ಕಾರ್ಯಕರ್ತೆ/ಆಶಾ/ಮೇಲ್ವಿಚಾರಕಿ.

XI. ಇತರೆ :

1. ಅಂಗನವಾಡಿ ಕಾರ್ಯಕರ್ತೆಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮಹಿಳೆ ಮತ್ತು ಮಕ್ಕಳ ಆರೋಗ್ಯ ಸುಧಾರಣೆಗೆ ಸಂಬಂಧಪಟ್ಟಂತೆ ಯೋಜನೆಗಳ ಕುರಿತು ವೃತ್ತ ಸಭೆ/ಬ್ಲಾಕ್ ಸಭೆಗಳಲ್ಲಿ ಆರೋಗ್ಯ ಮತ್ತು ಕುಟುಂಬ ಇಲಾಖೆಯ ಅಧಿಕಾರಿಗಳ ತರಬೇತಿ ನೀಡುವುದು. ಅಂತಹ ಕಾರ್ಯಕ್ರಮದಲ್ಲಿಯ ಅನುದಾನ ಸದರಿ ಮಕ್ಕಳ ಚಿಕಿತ್ಸೆಗಾಗಿ ಸೌಲಭ್ಯವಿದ್ದಲ್ಲಿ ಅಳವಡಿಸಿಕೊಳ್ಳುವುದು.
2. ಪ್ರಾರಂಭಿಕ ಹಂತದಲ್ಲಿ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿ ಅದರ ಕುರಿತು ನಿರಂತರ ಮೌಲ್ಯಮಾಪನ ಮಾಡಿ ವಿಶ್ಲೇಷಿಸಿ ರಾಜ್ಯ ಸರ್ಕಾರಕ್ಕೆ ಕಳುಹಿಸುವುದು. ರೂ. 5.00 ಕೋಟಿ ಅನುದಾನ ಸಾಕಾಗದೇ ಇರುವ ಸಂದರ್ಭದಲ್ಲಿ ಹೆಚ್ಚಿನ ಅನುದಾನ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವುದು.
3. ಸದರಿ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಸ್ಥಳೀಯ ಸರ್ಕಾರ (ಗ್ರಾ.ಪಂ./ತಾ.ಪಂ./ಜಿ.ಪಂ.) ಯೂನಿಸೆಫ್ ಸಹಕಾರ ಪಡೆಯಲು ಕ್ರಮ ಜರುಗಿಸುವುದು.
4. ಆಯ್ದ 5 ಆಸ್ಪತ್ರೆಗಳಲ್ಲಿ ಬಾಲಸಂಜೀವಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪ್ರಾಯೋಜಿತ ಎಂದು ಫಲಕವನ್ನು ಹಾಕುವುದು.
5. ಆಸ್ಪತ್ರೆಗಳವರು ನಿರ್ದೇಶಕರು/ಕಾರ್ಯದರ್ಶಿಗಳು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರೊಂದಿಗೆ ಯೋಜನೆ ಅನುಷ್ಠಾನ ಕುರಿತಂತೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
6. ಪ್ರಧಾನ ಕಛೇರಿಯಿಂದ ಸುಮಾರು 10,000 ರೆಫರಲ್ ಕಾರ್ಡ್‌ಗಳನ್ನು ಮುದ್ರಿಸಲು ಹಾಗೂ ಎಲ್ಲಾ 30 ಜಿಲ್ಲೆಗಳಿಗೆ ವಿತರಿಸುವುದು.

ಪಿ.ಆರ್.2763

ಎಸ್. ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಇಂಧನ ಸಚಿವಾಲಯ

ವಿಷಯ : M/s "Bellandur Power Projects Pvt. Ltd. ಇವರಿಗೆ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ :
1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ವರ್ತೂರು ಕಿ.ಜ.ವಿ/2010/1917 ದಿನಾಂಕ: 18/23.06.2010.
2. ದಿನಾಂಕ 06.08.2010ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Bellandur Power Projects Pvt.Ltd. ಇವರಿಗೆ ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕಿನ ವರ್ತೂರು ಗ್ರಾಮದ ಬಳಿ ವರ್ತೂರು ಕೆರೆಯ ಕೋಡಿಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Bellandur Power Projects Pvt. Ltd. ಇವರಿಗೆ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 268 ಎನ್‌ಸಿಇ 2010, ಬೆಂಗಳೂರು, ದಿನಾಂಕ: 03-11-2010.

M/s Bellandur Power Projects Pvt. Ltd. ಇವರಿಗೆ ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕಿನ ವರ್ತೂರು ಗ್ರಾಮದ ಬಳಿ ವರ್ತೂರು ಕೆರೆಯ ಕೋಡಿಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು (Weir Latitude : 12°56'43" Longitude : 77°44'53" Power House-Latitude: 12°56'45" Longitude : 77°44'58") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ.

1. (ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ)ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ)ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2. (ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸತಕ್ಕದ್ದು.

4. ಫೈನಾನ್ಸಿಯಲ್ ಕ್ಲೋಷರ್‌ನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನು ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.

11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.

13. ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಅಭಿವೃದ್ಧಿದಾರರು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ತೀರುವಳಿ ಪಡೆಯಬೇಕು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2768

ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : M/s "Bellandur Power Projects Pvt. Ltd. ಇವರಿಗೆ ಬೆಲ್ಲಂದೂರು ಕೆರೆಯ ಕೋಡಿಗೆ ಅಡ್ಡಲಾಗಿ ಬೆಲ್ಲಂದೂರು-II ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಬೆಲ್ಲಂದೂರು-II ಕಿ.ಜ.ವಿ/2010/1919 ದಿನಾಂಕ: 18/23.06.2010.

2. ದಿನಾಂಕ 06.08.2010ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Bellandur Power Projects Pvt.Ltd. ಇವರಿಗೆ ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕಿನ ಯಮಲೂರು ಗ್ರಾಮದ ಬಳಿ ಬೆಲ್ಲಂದೂರು ಕೆರೆಯ ಕೋಡಿಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Bellandur Power Projects Pvt. Ltd. ಇವರಿಗೆ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 269 ಎನ್‌ಸಿಇ 2010, ಬೆಂಗಳೂರು, ದಿನಾಂಕ: 03-11-2010.

M/s Bellandur Power Projects Pvt. Ltd. ಇವರಿಗೆ ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕಿನ ಯಮಲೂರು ಗ್ರಾಮದ ಬಳಿ ಬೆಲ್ಲಂದೂರು ಕೆರೆಯ ಕೋಡಿಗೆ ಅಡ್ಡಲಾಗಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಬೆಲ್ಲಂದೂರು -II ಕಿರು ಜಲ ವಿದ್ಯುತ್ ಯೋಜನೆಯನ್ನು (Weir Latitude : 12º56`36" Longitude : 77º40'50" Power House-Latitude: 12º56`35" Longitude : 77º40'55") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:-

1(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ)ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ)ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2.(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ)ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸತಕ್ಕದ್ದು.

4. ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.

5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನು ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.

6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.

8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.

9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ

10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.
13. ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಅಭಿವೃದ್ಧಿದಾರರು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ತೀರುವಳಿ ಪಡೆಯಬೇಕು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 2769

ಇಂಧನ ಸಚಿವಾಲಯ

ವಿಷಯ : M/s "Bellandur Power Projects Pvt. Ltd. ಇವರಿಗೆ 1.5 ಮೆಗಾವ್ಯಾಟ್ ಸಾಮರ್ಥ್ಯದ ಬೆಲ್ಲಂದೂರು–I ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : 1. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಬೆಲ್ಲಂದೂರು–I ಕಿ.ಜ.ವಿ/2010/1914 ದಿನಾಂಕ: 18/23.06.2010.

2. ದಿನಾಂಕ 06.08.2010ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು M/s Bellandur Power Projects Pvt.Ltd. ಇವರಿಗೆ ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕಿನ ಬೆಲ್ಲಂದೂರು ಗ್ರಾಮದ ಬಳಿ ಬೆಲ್ಲಂದೂರು ಕೆರೆಯ ಕೋಡಿಗೆ ಅಡ್ಡಲಾಗಿ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಬೆಲ್ಲಂದೂರು-I ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಹಂಚಿಕೆ ಸಮಿತಿ ಸಭೆಯ ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಲಾಗಿತ್ತು. M/s Bellandur Power Projects Pvt. Ltd. ಇವರಿಗೆ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಹಂಚಿಕೆ ಸಮಿತಿಯು ಪರಿಗಣಿಸಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ:–

ಸರ್ಕಾರದ ಆದೇಶ ಸಂಖ್ಯೆ: ಇಎನ್ 270 ಎನ್‌ಸಿಇ 2010, ಬೆಂಗಳೂರು, ದಿನಾಂಕ: 03–11–2010.

M/s Bellandur Power Projects Pvt. Ltd. ಇವರಿಗೆ ಬೆಂಗಳೂರು ಜಿಲ್ಲೆಯ ಬೆಂಗಳೂರು ತಾಲ್ಲೂಕಿನ ಬೆಲ್ಲಂದೂರು ಗ್ರಾಮದ ಬಳಿ ಬೆಲ್ಲಂದೂರು ಕೆರೆಯ ಕೋಡಿಗೆ ಅಡ್ಡಲಾಗಿ 1.5 ಮೆಗಾ ವ್ಯಾಟ್ ಸಾಮರ್ಥ್ಯದ ಬೆಲ್ಲಂದೂರು –I ಕಿರು ಜಲ ವಿದ್ಯುತ್ ಯೋಜನೆಯನ್ನು (Weir Latitude: 12º55`50" Longitude : 77º40'41" Power House-Latitude: 12º55`49" Longitude : 77º40'45") ಈ ಕೆಳಗಿನ ನಿಬಂಧನೆಗೊಳಪಟ್ಟು ಹಂಚಿಕೆ ಮಾಡಲಾಗಿದೆ:–

1(ಅ) ಸದರಿ ಯೋಜನೆಯಿಂದ ಕೆಳತೊರೆ ಮತ್ತು ಮೇಲ್ತೊರೆ ಯೋಜನೆಗಳಿಗೆ ಯಾವುದೇ ಹಾನಿಯಾಗಬಾರದು.

(ಆ) ಹಂಚಿಕೆದಾರರು ಈ ಆದೇಶ ಹೊರಡಿಸಿದ 45 ದಿನಗಳ ಒಳಗಾಗಿ ಸರ್ಕಾರದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ, ಈ ಹಂಚಿಕೆ ತಂತಾನೇ ರದ್ದಾಗುವುದು. ನಂತರ, ಕಂಪನಿಯು ಹಂಚಿಕೆಗೋಸ್ಕರ ಪುನಃ ಹೊಸದಾಗಿ ಅರ್ಜಿ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಸ್ವೀಕರಿಸಿದ ಅರ್ಜಿ ಪರಿಷ್ಕರಣಾ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

(ಇ)ಒಡಂಬಡಿಕೆಯನ್ನು ರೂ. 400.00ರ ಛಾಪಾ ಕಾಗದದ ಮೇಲೆ ಮಾಡಿಕೊಂಡು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದವರಿಗೆ ಕಳುಹಿಸಿ ಪ್ರಮಾಣೀಕರಿಸಿ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು.

(ಈ)ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ಮೊದಲು ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ವಿವರವಾದ ಯೋಜನಾ ವರದಿಯನ್ನು (ಡಿ.ಪಿ.ಆರ್.) ಪರಿಷ್ಕರಿಸಲು ಮೆಗಾ ವ್ಯಾಟ್ ಒಂದಕ್ಕೆ ಸರ್ಕಾರದ ಆದೇಶಾನುಸಾರ ವಿವರವಾದ ಯೋಜನಾ ವರದಿ ಪರಿಷ್ಕರಣ ಶುಲ್ಕವನ್ನು ತುಂಬುವುದು.

2.(ಅ) ಯೋಜನಾ ಅಭಿವೃದ್ಧಿದಾರರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಅಂದರೆ ಜಲಸಂಪನ್ಮೂಲ ಇಲಾಖೆ, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕಂದಾಯ ಇಲಾಖೆಗಳಿಂದ ಕ್ಲಿಯರೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು. ಒಡಂಬಡಿಕೆ ಮಾಡಿಕೊಂಡ ಒಂದು ವರ್ಷದೊಳಗಾಗಿ ವಿವರವಾದ ಯೋಜನಾ ವರದಿಯನ್ನು ಸಲ್ಲಿಸತಕ್ಕದ್ದು.

(ಆ) ಹಂಚಿಕೆದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಠೇವಣಿ ಇಡುವ ಹಣವನ್ನು, ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಆವಿಷ್ಕರಿಸುವುದಕ್ಕೋಸ್ಕರ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.

3. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಕೊಟ್ಟ ಆರು ತಿಂಗಳ ಒಳಗಾಗಿ ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸತಕ್ಕದ್ದು.
4. ಫೈನಾನ್ಸಿಯಲ್ ಕ್ಲೋಷರನ್ನು ಸಾಧಿಸಿದ 24 ತಿಂಗಳ ಒಳಗಾಗಿ ಯೋಜನೆಯನ್ನು ಮುಗಿಸುವ ನಿಟ್ಟಿನಲ್ಲಿ ಹಂಚಿಕೆದಾರರು ಕಾರ್ಯಪ್ರವೃತ್ತರಾಗತಕ್ಕದ್ದು.
5. ಮೇಲೆ ತಿಳಿಸಿದ 2, 3 ಮತ್ತು 4 ಅಂಶಗಳ ಯೋಜನಾ ಅನುಷ್ಠಾನ ಮಾಡಲು ಸಫಲವಾಗದಿದ್ದಲ್ಲಿ ಈ ಹಂಚಿಕೆಯು ತಂತಾನೇ ಯಾವ ಮುನ್ಸೂಚನೆಯನ್ನು ನೀಡದೆ ರದ್ದಾಗುವುದೆಂದು ತಿಳಿಯತಕ್ಕದ್ದು.
6. ಯೋಜನಾ ಅಭಿವೃದ್ಧಿದಾರರು ವಿದ್ಯುತ್ತನ್ನು ಮೂರನೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದೊಂದಿಗೆ ವೀಲಿಂಗ್ ಅಂಡ್ ಬ್ಯಾಂಕಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಮತ್ತು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ವಿದ್ಯುತ್ತನ್ನು ಮಾರಾಟ ಮಾಡುವ ಸಂದರ್ಭದಲ್ಲಿ ವಿದ್ಯುತ್ ಖರೀದಿ ಒಡಂಬಡಿಕೆ (ಪಿಪಿಎ) ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.
7. ಈ ವಿಷಯದಲ್ಲಿ ಹಂಚಿಕೆದಾರರು ರಾಜ್ಯ ಮತ್ತು ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದ ಅಧಿಕಾರಿಗಳ ಸಹಾಯ/ಸಹಕಾರವನ್ನು ಪಡೆದು ನಿಗದಿತ ಅವಧಿಯೊಳಗೆ ಯೋಜನಾ ಅನುಷ್ಠಾನ ಪೂರ್ಣಗೊಳಿಸತಕ್ಕದ್ದು.
8. ಈ ಕಿರು ಜಲ ವಿದ್ಯುತ್ ಯೋಜನೆಯ ಸ್ಥಳದಲ್ಲಿ ಯಾವುದಾದರು ಸರ್ಕಾರಿ ಜಲ ವಿದ್ಯುತ್/ನೀರಾವರಿ/ಕುಡಿಯುವ ನೀರಿನ ಯೋಜನೆಗಳು ಬಂದಲ್ಲಿ ಸರ್ಕಾರಿ ಯೋಜನೆಗಳಿಗೆ ಮೊದಲ ಆದ್ಯತೆ ದೊರಕುವುದು ಹಾಗೂ ಈ ಯೋಜನೆಗೆ ಯಾವುದಾದರೂ ಇತರೆ ಯೋಜನೆಗಳಿಂದ ಧಕ್ಕೆಯಾದಲ್ಲಿ ಯಾವುದೇ ಪರಿಹಾರವನ್ನು ಅಭಿವೃದ್ಧಿದಾರರು ನಿರೀಕ್ಷಿಸುವಂತಿಲ್ಲ.
9. ಸ್ಥಳೀಯವಾಗಿ ಉದ್ಭವಿಸುವ ಯಾವುದಾದರೂ ಆಕ್ಷೇಪಣೆಗಳಿಗೆ ಅಭಿವೃದ್ಧಿದಾರರೇ ಸಂಪೂರ್ಣವಾಗಿ ಹೊಣೆಗಾರರಾಗಿರುತ್ತಾರೆ.
10. ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ ಯಾವುದೇ ಯೋಜನೆಗಳಿಂದಾಗಿ ಸದರಿ ಯೋಜನೆಯು ಮುಳುಗಡೆಯಾದಲ್ಲಿ, ಒದಗಬಹುದಾದ ಸಂಪೂರ್ಣ ತೊಂದರೆಗಳಿಗೆ ಅಭಿವೃದ್ಧಿದಾರರೇ ಪೂರ್ಣ ಜವಾಬ್ದಾರರಾಗಿರುತ್ತಾರೆ.
11. ಸದರಿ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.
12. ಡಿ.ಪಿ.ಆರ್. ತಯಾರು ಮಾಡಿದ ಮೇಲೆ ಕ್ರೆಡಲ್ ಸಂಸ್ಥೆಯು ಪರಿಶೀಲಿಸಿದ ನಂತರ ಇತರ ಸಂಬಂಧಿಸಿದ ಇಲಾಖೆಗಳಿಗೆ ಡಿ.ಪಿ.ಆರ್. ಸಲ್ಲಿಸುವುದು ಹಾಗೂ ತದನಂತರ ತಾಂತ್ರಿಕ ಅನುಮೋದನೆಗಾಗಿ ಕ್ರೆಡಲ್‌ಗೆ ಅರ್ಜಿ ಸಲ್ಲಿಸತಕ್ಕದ್ದು.
13. ಈ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ಅಭಿವೃದ್ಧಿದಾರರು ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ತೀರುವಳಿ ಪಡೆಯಬೇಕು ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್. ಬಿ. ಕೃಷ್ಣಪ್ಪನವರ್

ಪಿ.ಆರ್. 2770

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ

ಇಂಧನ ಸಚಿವಾಲಯ

ವಿಷಯ : ಮೆ॥ ಪ್ರಸನ್ನ ಪವರ್ ಲಿಮಿಟೆಡ್ ಇವರ ಈಗಾಗಲೇ ಅನುಷ್ಠಾನಗೊಂಡಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯೊಂದಿಗೆ ಹೆಚ್ಚುವರಿಯಾಗಿ 3 ಮೆಗಾ ವ್ಯಾಟ್ ಸಾಮರ್ಥ್ಯದ ಮತ್ತೊಂದು ಘಟಕವನ್ನು ಅಳವಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಡಿಇ 42 ಎನ್‌ಸಿಇ 1998 ದಿನಾಂಕ: 11.11.1998.
2. ಸರ್ಕಾರದ ಆದೇಶ ಸಂಖ್ಯೆ: ಡಿಇ 105 ಎನ್‌ಸಿಇ 2002 ದಿನಾಂಕ: 28.05.2002.
3. ಸರ್ಕಾರದ ಆದೇಶ ಸಂಖ್ಯೆ: ಇಎನ್ 266 ಎನ್‌ಸಿಇ 2003 ದಿನಾಂಕ: 12.02.2004
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆಆರ್‌ಇಡಿ/06/ಅನಿಯೂರು- ಕಿ.ಜ.ವಿ/2010/2138 ದಿನಾಂಕ: 14.07.2010/20.07.2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆII ಪ್ರಸನ್ನ ಪವರ್ ಲಿಮಿಟೆಡ್ ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಅಣಿಯೂರು ಹೊಳೆಗೆ ಅಡ್ಡಲಾಗಿ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ಮತ್ತು (3) ರ ಆದೇಶಗಳಲ್ಲಿ ಮೆ॥ ಪ್ರಸನ್ನ ಪವರ್ ಲಿಮಿಟೆಡ್ ಇವರಿಗೆ ಹಂಚಿಕೆ ಮಾಡಿರುವ 2.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರು ಜಲ ವಿದ್ಯತ್ ಯೋಜನೆಯ ಸಾಮರ್ಥ್ಯವನ್ನು 6.00 ಮೆಗಾ ವ್ಯಾಟ್‌ಗೆ ಹೆಚ್ಚಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಪ್ರಸನ್ನ ಪವರ್ ಲಿಮಿಟೆಡ್ ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಅಣಿಯೂರು ಹೊಳೆಗೆ ಅಡ್ಡಲಾಗಿ ಹಂಚಿಕೆಯಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಮೇಲ್ಕಂಡ ಕಿರು ಜಲ ವಿದ್ಯುತ್ ಯೋಜನೆಯು ದಿನಾಂಕ: 13.08.2009ರಂದು ಅನುಷ್ಠಾನಗೊಂಡಿದ್ದು ಈಗಾಗಲೇ ಅನುಷ್ಠಾನಗೊಂಡಿರುವ ಯೋಜನೆಯಿಂದ ಲಭ್ಯವಿರುವ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಹೆಚ್ಚುವರಿಯಾಗಿ 3 ಮೆಗಾ ವ್ಯಾಟ್ ಸಾಮರ್ಥ್ಯದ ಮತ್ತೊಂದು ಘಟಕವನ್ನು ಅಳವಡಿಸಲು ಸದರಿ ಕಂಪನಿಯವರು ಯೋಜಿಸಿದ್ದು, ರಾಜ್ಯದ ವಿದ್ಯುತ್ ಜಾಲಕ್ಕೆ ಹೆಚ್ಚುವರಿ ವಿದ್ಯುತ್ ಲಭ್ಯವಾಗಲಿರುವುದರಿಂದ ಹೆಚ್ಚುವರಿಯಾಗಿ 3 ಮೆಗಾ ವ್ಯಾಟ್ ಸಾಮರ್ಥ್ಯದ ಮತ್ತೊಂದು ಘಟಕವನ್ನು ಅಳವಡಿಸಲು ಅನುಮತಿ ನೀಡಬೇಕೆಂದು ಕ್ರೆಡಲ್ ನ ವ್ಯವಸ್ಥಾಪಕ ನಿರ್ದೇಶಕರು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 319 ಎನ್‌ಸಿಇ 2010, ಬೆಂಗಳೂರು, ದಿನಾಂಕ: 03-11-2010.

ಮೆ॥ ಪ್ರಸನ್ನ ಪವರ್ ಲಿಮಿಟೆಡ್ ಇವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ, ಅಣಿಯೂರು ಹೊಳೆಗೆ ಅಡ್ಡಲಾಗಿ ಹಂಚಿಕೆಯಾಗಿರುವ 6.00 ಮೆಗಾ ವ್ಯಾಟ್ ಸಾಮರ್ಥ್ಯದ ಕಿರುಜಲ ವಿದ್ಯುತ್ ಯೋಜನೆಯೊಂದಿಗೆ ಹೆಚ್ಚುವರಿಯಾಗಿ 3.00 ಮೆಗಾ ವ್ಯಾಟ್ ಸಾಮರ್ಥ್ಯದ ಮತ್ತೊಂದು ಘಟಕವನ್ನು ಅಳವಡಿಸಲು ಸರ್ಕಾರದ ಅನುಮತಿಯನ್ನು ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಡಿಇ 42 ಎನ್‌ಸಿಇ 1998 ದಿನಾಂಕ: 11.11.1998ರ ಇತರೆ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 2771

ಇಂಧನ ಸಚಿವಾಲಯ

ವಿಷಯ : ಮೆ॥ ಶ್ರೀ ಶಿವಸಾಗರ ಶುಗರ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್ ಇವರಿಗೆ 18 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ : ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರಗಳ ಸಂಖ್ಯೆ: ಕೆಆರ್‌ಇಡಿ/04/ಎಸ್‌ಎಸ್‌ಎಸ್‌ಪಿಎಲ್/ 10/2069 ದಿನಾಂಕ: 07/08.07.2010 ಮತ್ತು ಕೆಆರ್‌ಇಡಿ/04/ ಎಸ್‌ಎಸ್‌ಎಸ್&ಎಪಿಎಲ್/10/2534 ದಿನಾಂಕ: 03/04.09.2010.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಶ್ರೀ ಶಿವಸಾಗರ್ ಶುಗರ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಉಡಮಡಿ ಗ್ರಾಮದಲ್ಲಿ 18 MW (Gross) ಮತ್ತು 10.37 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 315 ಎನ್‌ಸಿಇ 2010, ಬೆಂಗಳೂರು, ದಿನಾಂಕ: 28-10-2010.

ಮೆ॥ ಶ್ರೀ ಶಿವಸಾಗರ್ ಶುಗರ್ ಅಂಡ್ ಅಗ್ರೋ ಪ್ರಾಡಕ್ಟ್ಸ್ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಉಡಮಡಿ ಗ್ರಾಮದಲ್ಲಿ 18 MW (Gross) ಮತ್ತು 10.37 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ನೀಡಲಾಗಿದೆ.

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka power Transmission Corporation Limited in case of selling power to third party and power purchase agreement in case of selling power to Karnataka power Transmission Corporation Limited.
3. The company shall obtain necessary statutory clearance Wherever required from the respective Departments / Organizations such as forest Department, Revenue Department, & Karnataka State pollution Control Board, etc. for both the Sugar Mill and the Power plant.
4. The Detailed Project Report (D.P.R.) for the Power Plant shall be got approved by Karnataka Renewable Energy Development Limited , before the commencement of the power plant.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್. ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ

ಪಿ.ಆರ್. 2772

ಇಂಧನ ಸಚಿವಾಲಯ

ವಿಷಯ : ಮೆ॥ ಸತೀಶ್ ಶುಗರ್ಸ್ ಲಿಮಿಟೆಡ್ ಇವರಿಗೆ 16 ಮೆಗಾ ವ್ಯಾಟ್ ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವ ಬಗ್ಗೆ.

ಓದಲಾಗಿದೆ : ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ:ಕೆಆರ್‌ಇಡಿ/04/ಎಸ್‌ಎಸ್‌ಎಲ್/10/2517 ದಿನಾಂಕ: 18.08.2010./03.09.2010.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕರ ನಿರ್ದೇಶಕರು ಮೆ॥ ಸತೀಶ್ ಶುಗರ್ಸ್ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಹುನ್ಯಾಳ್ ಪಿಜಿ ಗ್ರಾಮದಲ್ಲಿ 16 MW(Gross) ಮತ್ತು 8.00 MW(exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ನಿರಾಕ್ಷೇಪಣೆಯನ್ನು ನೀಡುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಕಳುಹಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ:-

ಸರ್ಕಾರದ ಆದೇಶ ಸಂಖ್ಯೆ: ಇಎನ್ 405 ಎನ್‌ಸಿಇ 2010, ಬೆಂಗಳೂರು, ದಿನಾಂಕ: 28-10-2010.

ಮೆII ಸತೀಶ್ ಶುಗರ್ಸ್ ಲಿಮಿಟೆಡ್ ಇವರಿಗೆ ಬೆಳಗಾಂ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಹುನ್ಯಾಳ್ ಪಿಜಿ ಗ್ರಾಮದಲ್ಲಿ 16 MW (Gross) ಮತ್ತು 8.00 MW (exportable) ಸಾಮರ್ಥ್ಯದ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಗಿನ ನಿಬಂಧನೆಗೊಳಪಟ್ಟು ಸರ್ಕಾರದ ನಿರಾಕ್ಷೇಪಣೆಯನ್ನು ನೀಡಲಾಗಿದೆ.

1. The company shall obtain separate clearance from Karnataka Power Transmission Corporation Limited in respect of evacuation of power.
2. The company shall enter into wheeling and banking agreement with Karnataka power Transmission Corporation Limited in case of selling power to third party and power purchase agreement in case of selling power to Karnataka power Transmission Corporation Limited.
3. The company shall obtain necessary statutory clearance Wherever required from the respective Departments / Organizations such as forest Department, Revenue Department, & Karnataka State pollution Contol Board, etc. for both the Sugar Mill and the Power plant.
4. The Detailed Project Report (D.P.R.) for the Power Plant shall be got approved by Karnataka Renewable Energy Development Limited , before the commencement of the power plant.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2773

ಸುರೇಶ್. ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ

ಇಂಧನ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಇಎನ್ 329 ಎನ್‌ಸಿಇ 2007 ಬೆಂಗಳೂರು, ದಿನಾಂಕ: 02.11.2010.

ಸರ್ಕಾರಿ ಆದೇಶ ಸಂಖ್ಯೆ: ಇಎನ್ 329 ಎನ್‌ಸಿಇ 2007 ದಿನಾಂಕ: 22.02.2010ರಲ್ಲಿ ನಮೂದಿಸಲಾಗಿರುವ "ಚನ್ನರಾಯಪಟ್ಟಣ ತಾಲ್ಲೂಕು" ಎಂಬುದನ್ನು "ಹೊಳೆನರಸೀಪುರ ತಾಲ್ಲೂಕು" ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್. ಬಿ. ಕೃಷ್ಣಪ್ಪನವರ್

ಪಿ.ಆರ್. 2774

ಸರ್ಕಾರದ ಅಧೀನ ಕಾರ್ಯದರ್ಶಿ,

ಇಂಧನ ಇಲಾಖೆ

ENERGY SECRETARIAT

Sub: Enhancement of wind power capacity from 4.5 MW to 12.6 MW in favour of M/s Vestas Wind Technology India Private Limited-reg.

Read:
1. Government Order No. EN 210 NCE 2005 dated: 20-08-2005.
2. Government Order No. EN 463 NCE 2006 dated: 22-12-2006.
3. Letter No. KRED/08/VWTIPL/2010/2649 dated: 07/20-09-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, sanction has been accorded for implementation of 99.75 MW capacity Wind Power Project at Bagalkot, Raichur, Bidar, Bijapur and Gulbarga Districts to M/s NEG Micon (India) Pvt. Ltd (The part capacity of 4.5 MW wind power project at Masbinal, Ingaleshwartanda, Bijapur District)

In the Government Order read at (2) above, the company name was changed from M/s NEG Micon India (P) Ltd to M/s Vestas Wind Technology India Private Limited.

The Managing Director, Karnataka Renewable Energy Development Limited, Bangalore vide his letter read at (3) above has recommended to enhance the wind power capacity to 12.6 MW from the part capacity of 4.5 MW of the main capacity of 99.75 MW at Masbinal, Ingaleshwaratanda villages, Bijapur District in favour of M/s Vestas Wind Technolgy India Pvt. Ltd.

The proposal has been examined in detail and issued following Orders:-

Government Order No. EN 398 NCE 2010, Bangalore, Dated: 20-10-2010

Government accords approval for enhancement of wind power capacity to 12.6 MW from the part capacity of 4.5 MW of the main capacity of 99.75 MW at Masbinal, Ingaleshwartanda villages, Bijapur District in favour of M/s Vestas Wind Technology India Pvt. Ltd. as detailed below:-

Geographical Area Details	Sanctioned capacity	Enhancement proposed in stage-1	No. of WTG's & rating	Total capacity including proposed enhancement
The identified area has NW-SE orientation and is located on the East of Masbinal. It appears to be open scrub and stony waste area. The proposed areas covered in the following geographical Co-ordinates:- Latitude: $16^0$38'39"-$16^0$40" 0"N Longitude: $76^0$58'28"-$76^0$0'0" E Peaks: 665m Amsl Toposheet No. 47P/14	4.5 MW	8.1 MW	7x1800 KW	12.6 MW

The Government has reserved the right to Cancel/modify this Order.

The other terms and conditions of the allotment Order read at (1) above shall continue as it is.

By Order and in the Name of the Governor of Karnataka

Suresh B. Krishnappanavar

PR No. 2782

Under Secretary to Government

Energy Department

ENERGY SECRETARIAT

Sub: Enhancement of wind power capacity from 6.00 MW to 21.6 MW in favour of M/s Vestas Wind Technology India Private Limited-reg.

Read:
1. Government Order No. EN 210 NCE 2005 dated: 20-08-2005.
2. Government Order No. EN 463 NCE 2006 dated: 22-12-2006.
3. Letter No. KRED/08/VWTIPL/2010/2648 dated: 07/20-09-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1) above, sanction has been accorded for implementation of 99.75 MW capacity Wind Power Project at Bagalkot, Raichur, Bidar, Bijapur and Gulbarga Districts to M/s NEG Micon (India) Pvt. Ltd (The part capacity of 6.00 MW wind power project at Uttanal, Heggadehaltanda, Mangoli villages of Bijapur District)

In the Government Order read at (2) above, the company name has been changed from M/s NEG Micon India (P) Ltd. to M/s Vestas Wind Technology India Private Limited.

The Managing Director, Karnataka Renewable Energy Development Limited, Bangalore vide his letter read at (3) above has recommended to enhance the wind power capacity to 21.6 MW from part capacity of 6.00 MW of the main capacity of 99.75 MW at Uttanal, Heggadehaltanda, Mangoli villages of Bijapur District in favour of M/s Vestas Wind Technology India Pvt. Ltd.

The proposal has been examined in detail and issued following Orders:-

Government Order No. EN 399 NCE 2010, Bangalore, Dated: 20-10-2010

Government accords approval for enhancement of wind power capacity to 21.6 MW from part capacity of 6.00 MW of the main capacity of 99.75 MW at Uttanal Heggadehaltanda, Mangoli villages, Bijapur District in favour of M/s Vestas Wind Technology India Pvt. Ltd. as detailed below:-

Geographical Area Details	Sanctioned capacity	Enhancement proposed in stage-1	No. of WTG's & rating	Total capacity including proposed enhancement
Moderately elevated areas are identified as 'A' and 'B' and are situated on North and N-E of	6 MW	15.6 MW	12x1800 KW	21.6 MW

Mangoli village. These two elevated plains are having N-S orientation and are appears to be non-forest areas. These two plain areas are held in the following geographical Co-ordinates:- Latitude: 16°39'46"-16°43"1"N Longitude:75°49'15"-75°50'57" E Peaks: 660, 652, 668m Amsl Toposheet No. 47P/14				

The Government has reserved the right to Cancel/modify this Order.

The other terms and conditions of the allotment Order read at (1) above shall continue as it is.

By Order and in the name of the Governor of Karnataka

Suresh B. Krishnappanavar

Under Secretary to Government

Energy Department

PR No. 2783

COMMERCE AND INDUSTRIES SECRETARIAT

Sub: Package of reliefs for revival/rehabilitation of sick industries.

Read: G.O. No. CI 167 SPI 2001 dated: 25-09-2002.

Preamble:

In the Government Order No. CI 167 SPI 2001 dated 25-09-2002, certain releifs have been sanctioned for rehabilitation of sick industries under BIFR.

2. The Government had issued Industrial Policy 2001-2006 in G.O. No. CI 319 SPI 2005 dated: 26-08-2006. In para 3.21 of the said order as far as BIFR cases are concerned, it is stated as under:-

> "Government would come up with a revival package for sick units and BIFR cases after consultation with all the stake holders viz., Industries Associations, Financial Institutions, Banks, Service providers and Labour representatives. A clearcut Exit Policy would be attempted"

3. Further, a new Industrial Policy 2009-14 has been brought out vide G.O. No. CI 233 SPI 2008 dated: 28-02-2009.

4. In view of 'some difficulties faced in the implementation of provisions of CI 167 SPI 2001 dated 25-09-2002 and the change in the tariff orders approved by KERC, it is felt that new guidelines for revival of sick industries are required to be issued.

5. In many cases, BIFR has been recommending for waiver of interest, penalty, surcharge on the dues, interest on royalty, stamp duty exemption etc. But these exemptions are not covered under the provisions of the Government Order dated: 26-09-2002, Therefore, it is considered necessary to take a suitable decision by the Government in this regard.

6. Hence the Order.

GOVERNMENT ORDER NO. CI 2 BTF 2010, BANGALORE DATED: 20-10-2010

In the circumstances explained in the preamble and in partial modification of the Government Order No. CI 167 SPI 2001 dated: 25-09-2002, the State Government is pleased to extend the following reliefs and concessions to Sick Industries and BIFR cases:

1. COMMERCIAL TAX DEPARTMENT:

(i) The sick units under rehabilitation would be eligible for payment of outstanding principal amount of tax & penalty under the KST/VAT/CST and KTEG Acts with simple interest @ ½% per month from the date of Government Order in 6 half yearly installments.

(ii) Waiver of 75% of the total accrued interest on the principal and penalty till the date of declaring the unit as sick by BIFR. Remaining 25% of the interest shall be paid in 6 half yearly installment without interest

(iii) Payment of interest @ ½% per month on the principal tax and penalty for the period from the date of declaring the unit as sick by BIFR till the issue of Government Order for rehabilitation in 6 half yearly interest free installment.

(iv) If the unit fails to pay the principal tax, penalty and interest as above, a penal interest at statutory rates will be levied which shall be paid along with the defaulted amount.

(v) No Interest shall be charged for the closure period.

(vi) Future taxes [KST/VAT/CST and KTEG] shall be payable by the units along with the returns in accordance with the provisions of the relevant Act.

II **STAMPS & REGISTRATION DEPARTMENT**

Stamp duty exemption will be given in respect of BIFR cases as per the Industrial Policy 2009-14.

III **Department of Mines and Geology**

i) Principal amount including cess with simple interest @ ½% per month to be paid in 6 half yearly installments.
ii) No Interest will be calculated for the closure period.
iii) Mining leases will be renewed after the dues are cleared.

IV. **KPTCL/ESCOMS**

With regard to energy dues, the companies shall approach the Karnataka Electricity Reforms Commission, as no financial support from the State Government will be provided for the ESCOM dues.

V. **Industries Department**

One time settlement of Development loan will be as follows:-

1) This will be prospective in nature.
2) The payment of principal should be in six half yearly interest free instalments.
3) 75% of the total accrued interest on the principal and penalty till the date of declaring the unit as sick by BIFR will be waived off. Remaining 25% of the interest shall be paid in 6 half yearly instalment without interest.
4) Any interest paid in the past should not be adjusted against principal outstanding dues.
5) The principal outstanding dues as on the date of issue of the G.O. should be the value on which the OTS should be offered.

VI. **Delegation of Financial Powers**

BIFR Sub-Committee is vested with power to grant reliefs as per the standard package involving financial implication upto Rs. 2 crores, beyond Rs. 2 Crores the proposal shall be placed before the High Level Committee.

This order issues with the concurrence of Finance Department vide U.O Note No. FD 1230 Exp-1/2010 dated: 10-08-2010.

By Order and in the Name of the Governor of Karnataka
M.S. Ganapathy
Deputy Secretary to Government
Commerce & Industries Department

PR No. 2784

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಸಿರಗುಪ್ಪ ಪಟ್ಟಣಕ್ಕೆ ತುಂಗಭದ್ರಾ ಯೋಜನೆಯ ಬಾಗೇವಾಡಿ ಉಪ ಕಾಲುವೆಯಿಂದ ನೀರು ಸರಬರಾಜು ಯೋಜನೆಯ ಅಂದಾಜು ರೂ. 2865.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿರವರ ಪತ್ರ ಸಂಖ್ಯೆ: ವ್ಯನಿ/ಉಮುಅ(ಎಂ)/ಸಿರಗುಪ್ಪ/3884/2008-09, ದಿನಾಂಕ: 03-03-2009.

ಪ್ರಸ್ತಾವನೆ:

ಸಿರಗುಪ್ಪ ಪಟ್ಟಣವು ಬಳ್ಳಾರಿ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದು, 2001ರ ಜನಗಣತಿ ಪ್ರಕಾರ ಈ ಪಟ್ಟಣದ ಜನಸಂಖ್ಯೆಯು ಸುಮಾರು 42.862 ಇದ್ದು ಹಾಲಿ 45,000 ಇರುತ್ತದೆ. ಪ್ರಸ್ತುತ ಈ ಪಟ್ಟಣಕ್ಕೆ 2000ನೇ ಸಾಲಿನಲ್ಲಿ ತುಂಗಭದ್ರಾ ಕಾಲುವೆಯನ್ನು ಮೂಲವಾಗಿಟ್ಟುಕೊಂಡು ನೀರು ಸರಬರಾಜು ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಬೇಸಿಗೆಯಲ್ಲಿ ನದಿಯ ನೀರಿನ ಹರಿವು ನಿಂತು ಹೋಗುತ್ತಿದ್ದು ಕುಡಿಯುವ ನೀರು ಒದಗಿಸುವುದು ಕಷ್ಟ ಸಾಧ್ಯವಾಗಿರುತ್ತದೆ. ಆದ್ದರಿಂದ ಬೇಸಿಗೆ ದಿನಗಳಲ್ಲಿ ಪಟ್ಟಣಕ್ಕೆ ಸಮರ್ಪಕ ನೀರು ಸರಬರಾಜು ಪೂರೈಸಲು ತುಂಗಭದ್ರಾ ಯೋಜನೆಯ ಲೋ ಲೆವಲ್ ಕಾಲುವೆಯ ಬಾಗೇವಾಡಿ ಉಪ ಕಾಲುವೆಯನ್ನು ಮೂಲವಾಗಿಟ್ಟು ಜಲಸಂಗ್ರಹಣ ಕೆರೆ ನಿರ್ಮಾಣ ಕಾಮಗಾರಿಯನ್ನೊಳಗೊಂಡ ಹೆಚ್ಚುವರಿ ನೀರು ಸರಬರಾಜು ಮಾಡುವ ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯನ್ನು 2046ನೇ ಸಾಲಿನ ಮಧ್ಯಂತರ ಮತ್ತು ಅಂತಿಮ ಅವಧಿ 2061ನೇ ಸಾಲಿಗೆ ಕ್ರಮವಾಗಿ 103000 ಹಾಗೂ 130000 ರಷ್ಟು ನಿರೀಕ್ಷಿಸಿದ ಜನಸಂಖ್ಯೆಗೆ ತಲಾ ದಿನಂಪ್ರತಿ 135 ಲೀಟರ್‌ನಂತೆ ನೀರು ಸರಬರಾಜು ಮಾಡಲು ಯೋಜನೆಯನ್ನು ರೂಪಿಸಲಾಗಿದೆ.

ಪಟ್ಟಣದ ನೀರು ಸರಬರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲು ಯೋಜನೆಯನ್ನು ನಗರ ನೀರು ಸರಬರಾಜು ಯೋಜನೆಯಡಿ 2009-10ನೇ ಸಾಲಿನ ಮಂಡಳಿ ಹಾಗೂ ಲೋಕೋಪಯೋಗಿ ಇಲಾಖೆಯ ದರ ಸೂಚಿಯನ್ವಯ ರೂ. 2865.00 ಲಕ್ಷಗಳಿಗೆ ತಯಾರಿಸಿ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿರವರು ಆಡಳಿತಾತ್ಮಕ ಅನುಮೋದನೆ ಕೋರಿ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆರ್ಥಿಕ ಸಂಸ್ಥೆಗಳಿಂದ ಸಾಲ ಶೇ. 50	ರೂ. 1432.50 ಲಕ್ಷಗಳು
ಕರ್ನಾಟಕ ಸರ್ಕಾರದ ಅನುದಾನ ಶೇ. 50	ರೂ. 1432.50 ಲಕ್ಷಗಳು
ಒಟ್ಟು	ರೂ. 2865.00 ಲಕ್ಷಗಳು

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 11 ಯುಡಬ್ಲ್ಯೂಎಸ್ 2009 ಬೆಂಗಳೂರು ದಿನಾಂಕ: 20-10-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ಸಿರಗುಪ್ಪ ಪಟ್ಟಣಕ್ಕೆ ತುಂಗಭದ್ರಾ ಯೋಜನೆಯ ಬಾಗೇವಾಡಿ ಉಪ ಕಾಲುವೆಯಿಂದ ನೀರು ಸರಬರಾಜು ಯೋಜನೆಯನ್ನು ಅಂದಾಜು ರೂ. 2865.00 ಲಕ್ಷಗಳಲ್ಲಿ (ರೂ. ಎರಡು ಸಾವಿರದ ಎಂಟು ನೂರ ಅರವತ್ತೈದು ಲಕ್ಷಗಳಲ್ಲಿ ಮಾತ್ರ) ನಗರ ನೀರು ಸರಬರಾಜು ಯೋಜನೆಯಡಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತುಗಳನ್ವಯ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) Adequate provision should be made in the subsequent years so that the project gets over without cost escalation;
2) Water rates as proposed by KUWS & DB to be implemented to meet the O & M Charges;
3) KTPP Provision, Quality control & timely completion to be ensured;
4) ಮಂಡಳಿಯು ಬಾಗೇವಾಡಿ ವಿತರಣಾ ಕಾಲುವೆಯಿಂದ ನೀರನ್ನು ಉಪಯೋಗಿಸಿಕೊಳ್ಳಲು, ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರವರೊಡನೆ ಸೂಕ್ತ ಒಪ್ಪಂದ ಮಾಡಿಕೊಳ್ಳತಕ್ಕದ್ದು.
5) ನೀರೆತ್ತುವ ಪ್ರಮಾಣವನ್ನು ಸೂಕ್ತ ರೀತಿಯಲ್ಲಿ ಅಳತೆ ಮಾಡುವ ಸಲುವಾಗಿ ಅಗತ್ಯ ಮಾಪಕವನ್ನು ನಗರಾಭಿವೃದ್ಧಿ ಇಲಾಖೆಯು ತನ್ನ ಸ್ವಂತ ಖರ್ಚಿನಲ್ಲಿ ಕಾಲುವೆಯ ಹತ್ತಿರ ಅಳವಡಿಸಿಕೊಳ್ಳತಕ್ಕದ್ದು.
6) ಯಾವುದು ಕಾರಣದಿಂದ ನೀರನ್ನು ಜಲ ಸಂಪನ್ಮೂಲ ಇಲಖೆಯು ನೀಡಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಉಂಟಾಗುವ ತೊಂದರೆಗೆ ಜಲಸಂಪನ್ಮೂಲ ಇಲಾಖೆಯು ಜವಾಬ್ದಾರಿಯಾಗುವುದಿಲ್ಲ.
7) ಮೇಲಿನ ಷರತ್ತುಗಳ ಜೊತೆಗೆ ಸ್ಥಳೀಯವಾಗಿ ಅಗತ್ಯವೆನಿಸುವ ಇತರೆ ಯಾವುದೇ ಷರತ್ತುಗಳನ್ನು ವಿಧಿಸಲು ಜಲ ಸಂಪನ್ಮೂಲ ಇಲಾಖೆಗೆ ಅಧಿಕಾರವಿರುತ್ತದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ/637/ಇಎಕ್ಸ್‌ಪಿ-9/2010 ದಿನಾಂಕ: 25-09-2010ರಲ್ಲಿ ನೀಡಿದ ಸಹಮತಿ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಪಿ.ಆರ್. 2785 ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಬಾಲನ್ಯಾಯ ಮಂಡಳಿಗೆ ಸಮಾಜ ಕಾರ್ಯಕರ್ತರನ್ನು ನಾಮನಿರ್ದೇಶನ ಮಾಡುವ ಕುರಿತು.

ಓದಲಾಗಿದೆ :
1. ದಿನಾಂಕ: 26-02-2007 ರ ಅಧಿಸೂಚನೆ ಸಂ:ಮಮಇ/3/ಮಭಾಬ/2007.
2. ದಿನಾಂಕ: 11-03-2010 ರ ಆದೇಶ ಸಂ:ಮಮಇ/07/ಮಭಾಬ/2010 ಬೆಂಗಳೂರು
3. ದಿನಾಂಕ: 06-05-2010 ರ ಆದೇಶ ಸಂ:ಮಮಇ 255 ಮಭಾಬ 2008.
4. ದಿನಾಂಕ: 06-05-2010 ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರ ಏಕ ಕಡತ ಸಂ:ಮಮಅಇ/ಪಿಡಿಎಂ/59/2010-11.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮಾಂಕ (1) ರ ಅಧಿಸೂಚನೆಯಲ್ಲಿ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ, 2000 ತಿದ್ದುಪಡಿ 2006, ಸೆಕ್ಷನ್ 29(1)(2) ಹಾಗೂ ನಿಯಮಾವಳಿ 2007 ನಿಯಮ 7(2) ರನ್ವಯ 8 ಜಿಲ್ಲೆಗಳಿಗೆ ಬಾಲನ್ಯಾಯ ಮಂಡಳಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಒಳಗೊಂಡಂತೆ ಮೂರು ವರ್ಷಗಳ ಅವಧಿಗೆ ಬಾಲನ್ಯಾಯ ಮಂಡಳಿಯನ್ನು ರಚಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ (2) ರ ಆದೇಶದಲ್ಲಿ ರಚಿಸಲಾದ ಸಮಿತಿಗಳ ಕಾರ್ಯಾವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಹೊಸ ಸಮಿತಿಗಳು ರಚನೆಯಾಗದ ಕಾರಣ ಅಂತಿಮಗೊಂಡ ದಿನಾಂಕದಂದು ಕಾರ್ಯನಿರ್ವಹಿಸುತ್ತಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೊಸ ಬಾಲನ್ಯಾಯ ಮಂಡಳಿ ರಚಿಸುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇವೆರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ವಿಸ್ತರಿಸಿ ಆದೇಶ ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3) ರ ಆದೇಶದಲ್ಲಿ ಮಕ್ಕಳ ಕಲ್ಯಾಣ ಸಮಿತಿಗೆ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಮತ್ತು ಬಾಲನ್ಯಾಯ ಮಂಡಳಿಗಳಿಗೆ ಸಮಾಜ ಕಾರ್ಯಕರ್ತರನ್ನು ಆಯ್ಕೆ ಮಾಡಲು ರಾಜ್ಯ ಮಟ್ಟದ ಆಯ್ಕೆ ಸಮಿತಿಯನ್ನು ರಚಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4) ರಲ್ಲಿ ರಾಜ್ಯ ಮಟ್ಟದ ಆಯ್ಕೆ ಸಮಿತಿಯು ಸಂದರ್ಶನ ನಡೆಸಿ 28 ಜಿಲ್ಲೆಗಳಿಗೆ ಸಮಾಜ ಕಾರ್ಯಕರ್ತರನ್ನು ಆಯ್ಕೆ ಮಾಡಿದ್ದು, ಆಯ್ಕೆ ಸಮಿತಿಯ ನಡವಳಿಯನ್ನು ಸಲ್ಲಿಸಿರುತ್ತಾರೆ. ಯಾದಗಿರಿ ಜಿಲ್ಲೆಯು ಹೊಸದಾಗಿ ರಚನೆಯಾಗಿದ್ದು, ರಾಜ್ಯ ಮಟ್ಟದ ಆಯ್ಕೆ ಸಮಿತಿಯು ಅರ್ಜಿ ಕರೆಯಲು ಪ್ರಕಟಣೆ ಹೊರಡಿಸದ ಕಾರಣ ಆ ಜಿಲ್ಲೆಯ ಬಾಲನ್ಯಾಯ ಮಂಡಳಿಗೆ ಅಧ್ಯಕ್ಷರು ಮತ್ತು ಸದಸ್ಯರನ್ನು ಆಯ್ಕೆ ಮಾಡಿರುವುದಿಲ್ಲ. ಬಳ್ಳಾರಿ ಜಿಲ್ಲೆಗೆ ಬಾಲನ್ಯಾಯ ಮಂಡಳಿಗೆ ಸೂಕ್ತವಾದ ಅಭ್ಯರ್ಥಿಗಳು ದೊರಕದ ಕಾರಣ ಸಮಾಜ ಕಾರ್ಯಕರ್ತರನ್ನು ಆಯ್ಕೆ ಮಾಡಿರುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಬಾಲನ್ಯಾಯ ಮಂಡಳಿಗಳಿಗೆ ಅಗತ್ಯವಿರುವ ಸದಸ್ಯರುಗಳಿಗಾಗಿ 2 ಬಾರಿ ಅರ್ಜಿ ಕರೆದಿದ್ದರೂ, ಸಂದರ್ಶನದಲ್ಲಿ ಅರ್ಹ ಅಭ್ಯರ್ಥಿಗಳು ಲಭ್ಯವಾಗದ ಕಾರಣ ಪೂರ್ಣ ಪ್ರಮಾಣದ ಸದಸ್ಯರನ್ನು ಆಯ್ಕೆ ಮಾಡಿರುವುದಿಲ್ಲ. ಈ ಬಗ್ಗೆ ಕಡಿಮೆ ಸದಸ್ಯರಿರುವ ಜಿಲ್ಲೆಗಳಿಂದ ಮತ್ತೊಮ್ಮೆ ಅರ್ಜಿ ಕರೆಯುವ ಬಗ್ಗೆ ಕ್ರಮವಹಿಸಬಹುದಾಗಿದ್ದು, ಬಾಲನ್ಯಾಯ ಅಧಿನಿಯಮ, 2000 ತಿದ್ದುಪಡಿ 2006 ಹಾಗೂ ನಿಯಮ 2007ರಂತೆ ಪ್ರತಿ ಜಿಲ್ಲೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಬಾಲನ್ಯಾಯ ಮಂಡಳಿಗಳನ್ನು ರಚಿಸಬೇಕಾಗಿರುತ್ತದೆ. ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಗಿರುವ ಅನುಮೋದನೆಗಾಗಿ

ಅನುಬಂಧ-1 ರಲ್ಲಿ ತಿಳಿಸಲಾಗಿರುವ ಷರತ್ತಿನೊಂದಿಗೆ ಅನುಬಂಧ-2 ರಲ್ಲಿನ 28 ಜಿಲ್ಲೆಗಳ ಬಾಲನ್ಯಾಯ ಮಂಡಳಿಗಳಿಗೆ ಅಧ್ಯಕ್ಷರು ಹಾಗೂ ಸಮಾಜ ಕಾರ್ಯಕರ್ತರನ್ನು ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಕೋರಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 206 ಮಭಾಬ 2010, ಬೆಂಗಳೂರು, ದಿನಾಂಕ : 14ನೇ ಅಕ್ಟೋಬರ್ 2010

ಮೇಲಿನ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಅಧಿನಿಯಮ, 2000, ತಿದ್ದುಪಡಿ 2006 ಸೆಕ್ಷನ್ 4 ಮತ್ತು 29 ರಡಿ ಅನುಬಂಧ-1 ರಲ್ಲಿ ತಿಳಿಸಿರುವ ಷರತ್ತಿನೊಂದಿಗೆ ಅನುಬಂಧ-2 ರಲ್ಲಿರುವಂತೆ ಯಾದಗಿರಿ ಜಿಲ್ಲೆಗಳನ್ನು ಹೊರತುಪಡಿಸಿ 28 ಜಿಲ್ಲೆಗಳ ಬಾಲನ್ಯಾಯ ಮಂಡಳಿಗಳಿಗೆ ಅಧಕ್ಷರು ಹಾಗೂ ಸಮಾಜ ಕಾರ್ಯಕರ್ತರನ್ನು ನಾಮನಿರ್ದೇಶನ ಮಾಡಿ ಆದೇಶ ಹೊರಡಿಸಿದೆ.

ಈ ಬಾಲನ್ಯಾಯ ಮಂಡಳಿಗಳು ಬಾಲನ್ಯಾಯ ಕಾಯಿದೆ 2000 ಮತ್ತು ನಿಯಮ 2007 ರನ್ವಯ ಪ್ರದತ್ತವಾದ ಕರ್ತವ್ಯಗಳನ್ನು ನಿರ್ವಹಿಸಲು ಅಧಿಕಾರವನ್ನು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅನುಬಂಧ-1

(ಸಂಖ್ಯೆ: ಮಮಇ 206 ಮಭಾಬ 2010, ಬೆಂಗಳೂರು ದಿನಾಂಕ: 14ನೇ ಅಕ್ಟೋಬರ್ 2010)

ಷರತ್ತುಗಳು

- ಬಾಲನ್ಯಾಯ ಮಂಡಳಿಯ ಕಾರ್ಯವ್ಯಾಪ್ತಿಯು ಆಯಾ ಜಿಲ್ಲೆಗೆ ಮಾತ್ರ ಸೀಮಿತವಾಗಿರುತ್ತದೆ.
- ಕಾನೂನು ಸಂಘರ್ಷಕ್ಕೆ ಒಳಪಡುವ ಮಕ್ಕಳ ಪ್ರಕರಣಗಳನ್ನು ನಿರ್ವಹಿಸುವುದು.
- ಬಾಲನ್ಯಾಯ ಮಂಡಳಿಯಲ್ಲಿ ಕಾರ್ಯಾವಧಿಯು ಆದೇಶ ಹೊರಡಿಸಿದ ದಿನಾಂಕದಿಂದ 3 ವರ್ಷಗಳವರೆಗೆ ಸೀಮಿತವಾಗಿರುತ್ತದೆ.
- ಪ್ರತಿಯೊಬ್ಬ ಸದಸ್ಯರು ಪ್ರತಿ ಸಿಟ್ಟಿಂಗ್‌ನಲ್ಲಿ ಕನಿಷ್ಠ 4 ಗಂಟೆಗಳು ಕಾರ್ಯನಿರ್ವಹಿಸತಕ್ಕದ್ದು.
- ವಾರದಲ್ಲಿ ಕನಿಷ್ಠ ಒಂದು ದಿನ ಕಾರ್ಯನಿರ್ವಹಿಸಬೇಕು. ಬಾಕಿ ಪ್ರಕರಣಗಳ ಸಂಖ್ಯೆಗಳನ್ನು ಪರಿಶೀಲಿಸಿ ಸಿಟ್ಟಿಂಗ್‌ನ್ನು ಹೆಚ್ಚಿಸಬಹುದಾಗಿದೆ.
- ತರಬೇತಿಯು ಕಡ್ಡಾಯ.
- ಪ್ರತಿ ಸಿಟ್ಟಿಂಗ್‌ಗಾಗಿ ರೂ.500/- ಗಳ ಸಿಟ್ಟಿಂಗ್ ಫೀ ನಿಗದಿಪಡಿಸಲಾಗಿದೆ.
- ರಾಜ್ಯ ಸರ್ಕಾರವು ನಿಗದಿಪಡಿಸುವ ದರದಲ್ಲಿ ಪ್ರಯಾಣ ಭತ್ಯೆಯನ್ನು ನೀಡಲಾಗುತ್ತದೆ.
- ಸಮಿತಿಯ ಅವಧಿಯಲ್ಲಿ ಖಾಲಿಯಾಗುವ ಸ್ಥಾನಗಳಿಗೆ ಕಾಯ್ದಿರಿಸಿರುವ ಪಟ್ಟಿಯಿಂದ ಅಥವಾ ಹೊಸದಾಗಿ ಆಯ್ಕೆ ಮಾಡುವ ಮೂಲಕ ಸದಸ್ಯರನ್ನು ಭರ್ತಿಮಾಡಲಾಗುವುದು. ಹಾಗೂ ಇವರ ಅವಧಿಯು ಸಮಿತಿಯ ಅವಧಿಗೆ ಸೀಮಿತ ವಾಗಿರುತ್ತದೆ.
- ರಾಜೀನಾಮೆ ನೀಡಬೇಕಾಗಿದ್ದಲ್ಲಿ ಒಂದು ತಿಂಗಳ ಪೂರ್ವದಲ್ಲೇ ರಾಜೀನಾಮೆ ತಿಳುವಳಿಕೆಯನ್ನು ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ/ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ.
- ಸಮಿತಿಯ ಸದಸ್ಯತ್ವವನ್ನು ಈ ಕೆಳಗಿನ ಕಾರಣಗಳಿಂದ ರದ್ದುಗೊಳಿಸಲು ಅವಕಾಶವಿರುತ್ತದೆ.

  ಯಾವ ಸದಸ್ಯರು:

  - ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡ ದೋಷಿ ಎಂದು ಕಂಡು ಬಂದರೆ;
  - ತಮ್ಮ ಬುದ್ಧಿ ಸ್ಥಿಮಿತ ಕಳೆದು ಕೊಂಡಲ್ಲಿ;
  - ದಿವಾಳಿ ಎಂದು ಘೋಷಿಸಿದಲ್ಲಿ;
  - ಅಸ್ತಿತ್ವದಲ್ಲಿರುವ ಮಕ್ಕಳಿಗೆ ಮತ್ತು ಇತರೆ ಸಂಬಂಧಿತ ಕಾಯ್ದೆಗಳಡಿ ತಪ್ಪಿತಸ್ಥನೆಂದು ಕಂಡು ಬಂದಲ್ಲಿ;
  - ಸಕ್ರಿಯ ರಾಜಕಾರಣದಲ್ಲಿದ್ದಲ್ಲಿ;
  - ರಾಜ್ಯ ಸರ್ಕಾರದ ಗಮನಕ್ಕೆ ಸದರಿ ವ್ಯಕ್ತಿಯು ಸದಸ್ಯರಾಗಿ ಮುಂದುವರೆಯುವುದು ಅನಗತ್ಯವೆಂದು ಕಂಡು ಬಂದಲ್ಲಿ ವಿಚಾರಣೆ ನಡೆಸಿ ಸದಸ್ಯತ್ವದಿಂದ ತೆಗೆಯಲು ಅವಕಾಶವಿರುತ್ತದೆ.
  - ನಿರಂತರವಾಗಿ ಯಾವುದೇ ಸಮಂಜಸ ಕಾರಣವಿಲ್ಲದೆ ಮೂರು ತಿಂಗಳು ಸಮಿತಿಯ ಕಲಾಪಗಳಿಗೆ ಭಾಗವಹಿಸದಿದ್ದರೆ ಹಾಗೂ ಒಂದು ವರ್ಷದ ಒಟ್ಟು ಸಭೆಗಳಲ್ಲಿ ನಾಲ್ಕನೇ ಮೂರಕ್ಕಿಂತ ಕಡಿಮೆ ಸಭೆಗಳಿಗೆ ಹಾಜರಾಗಿದ್ದರೆ.
  - ಬಾಲನ್ಯಾಯ ಕಾಯ್ದೆ ಮತ್ತು ನಿಯಮಗಳಡಿ ಕಾರ್ಯನಿರ್ವಹಿಸತಕ್ಕದ್ದು.
  - ಎಲ್ಲಾ ಸಮಯದಲ್ಲೂ ಮಗುವಿನ ಒಳಿತಿನ ಹಿನ್ನಲೆಯನ್ನು ಗಮನದಲ್ಲಿಟ್ಟುಕೊಂಡೇ ಪ್ರಕರಣಗಳನ್ನು ನಿರ್ವಹಿಸತಕ್ಕದ್ದು.
  - ಖಾಸಗಿ, ಸರ್ಕಾರಿ ಅಥವಾ ಸ್ವಯಂ ಸೇವಾ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅವರ ಸಂಸ್ಥೆಯ ಮುಖ್ಯಸ್ಥರುಗಳಿಂದ ಮಕ್ಕಳ ಕಲ್ಯಾಣ ಸಮಿತಿ ಕಾರ್ಯನಿರ್ವಹಿಸಲು ಅನುಮತಿ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

ಸದಸ್ಯರುಗಳು ಪಾಲಿಸಬೇಕಾದ ನಡವಳಿಕೆಗಳು:

1. ಮಕ್ಕಳೊಡನೆ ಸಂಭಾಷಿಸುವಾಗ ಅಥವಾ ಸಮಿತಿಯ ಸಿಟ್ಟಿಂಗ್ ಸಂದರ್ಭಗಳಲ್ಲಿ ಅಥವಾ ಸಂಸ್ಥೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಸಭ್ಯವಾದ ಮಾತುಗಳು/ಸಂಜ್ಞೆಗಳನ್ನು ಬಳಸತಕ್ಕದ್ದಲ್ಲ.
2. ಸಿಟ್ಟಿಂಗ್ ಸಂದರ್ಭ ಹೊರತು ಪಡಿಸಿ ಬೇರೆ ಸಮಯದಲ್ಲಿ ಅಧೀಕ್ಷಕರ ಅನುಮತಿಯಿಲ್ಲದೆ ಸಂಸ್ಥೆಗಳಿಗೆ ಭೇಟಿ ನೀಡತಕ್ಕದ್ದಲ್ಲ.
3. ಮಕ್ಕಳನ್ನು ಅವರುಗಳ ಜಾತಿ, ಧರ್ಮ, ಲಿಂಗ, ವರ್ಣ, ಪ್ರಬೇಧಗಳ ಆಧರಿಸಿ ಭೇದ ತೋರಬಾರದು.
4. ಅಂಗವಿಕಲತೆ ಅಥವಾ ಅಡ್ಡ ಹೆಸರನ್ನು ಗುರುತಿಸಿ ಕರೆಯಬಾರದು

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅನುಬಂಧ-2

(ಆದೇಶ ಸಂಖ್ಯೆ: ಮಮಇ 206 ಮಭಾಬ 2010, ಬೆಂಗಳೂರು ದಿನಾಂಕ: 14ನೇ ಅಕ್ಟೋಬರ್ 2010)

ಬಾಲ ನ್ಯಾಯ ಮಂಡಲಿಗಳಿಗೆ ನಾಮನಿರ್ದೇಶನ ಮಾಡಿರುವ ಅಧ್ಯಕ್ಷರು ಹಾಗು ಸಮಾಜ ಕಾರ್ಯಕರ್ತರುಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಾಮನಿರ್ದೇಶನ ಮಾಡಿದ ಸಮಾಜ ಕಾರ್ಯಕರ್ತರುಗಳ ಹೆಸರುಗಳು ಹಾಗು ವಿಳಾಸ		ಪದನಾಮ
1	ಬೆಂಗಳೂರು (ನಗರ)	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಡಾ: ಆಂತೋಣಿ ಸಬಾಸ್ಟೀಯನ್,	"ಎಕೋ" ಕಾನ್‌ವೆಂಟ್ ರೋಡ್, ಕಮ್ಮನಹಳ್ಳಿ, ಸೆಂಟ್ ಥಾಮಸ್ ಟೌನ್, ಬೆಂಗಳೂರು	ಸಮಾಜ ಕಾರ್ಯಕರ್ತರು
		ಗೀತಾ ವಿಜಯಕುಮಾರ್,	#672,17ನೇ ಅಡ್ಡ ರಸ್ತೆ, 24ನೇ ಮುಖ್ಯ ರಸ್ತೆ, ಜೆ.ಪಿ.ನಗರ 6ನೇ ಹಂತ, ಬೆಂಗಳೂರು.	ಸಮಾಜ ಕಾರ್ಯಕರ್ತರು
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಚಿತ್ರಾವತಿ ಕೆ.	#140, ಮುತ್ಸಂದ್ರ, 3ನೇ ವಾರ್ಡ್, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ	ಸಮಾಜ ಕಾರ್ಯಕರ್ತರು
		ಜೋನಿ ಮ್ಯಾಥ್ಯೂ	ಸುಮನಹಳ್ಳಿ ಸೊಸೈಟಿ, ಮಾಗಡಿ ರಸ್ತೆ, ವಿಶ್ವನೀಡಂ ಪೋಸ್ಟ್, ಬೆಂಗಳೂರು.	ಸಮಾಜ ಕಾರ್ಯಕರ್ತರು
3	ಬಾಗಲಕೋಟೆ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಎಂ.ಪಿ. ಚಂದ್ರಿಕಾ	ಕೇರಾಫ್ ಎಸ್.ಸಿ. ನಂದಿಮಠ, ಕಾನೂನು ಮಹಾವಿದ್ಯಾಲಯ, ಬಾಗಲಕೋಟೆ	ಸಮಾಜ ಕಾರ್ಯಕರ್ತರು
		ಹೆಚ್.ಆರ್. ಅಮೃತ ಕುವರ್	ಕಾಕನೂರು, ಬದಾಮಿ ತಾಲ್ಲೂಕು ಬಾಗಲಕೋಟೆ ಜಿಲ್ಲೆ	ಸಮಾಜ ಕಾರ್ಯಕರ್ತರು
4	ಬೆಳಗಾಂ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಆನಂದ ಲೊಬೋ	#3826, "ನಿತ್ಯಾಧಾರ", ಹುಂಚ್ಯಾನಟ್ಟಿ ರಸ್ತೆ, ಟಿಪ್ಪುಸುಲ್ತಾನ ನಗರ, ಮಚ್ಚೆ, ಪೀರನವಾಡಿ ಅಂಚೆ, ಬೆಳಗಾಂ	ಸಮಾಜ ಕಾರ್ಯಕರ್ತರು
		ಸುನಂದ ನಾಗಪ್ಪ ಎಮ್ಮಿ	ಫ್ಲಾಟ್ ನಂ. 353, ಬಿಯುಡಿಎ ಯೋಜನೆ 51, ಗಣೇಶಪುರ ರಸ್ತೆ, ಬೆಳಗಾಂ	ಸಮಾಜ ಕಾರ್ಯಕರ್ತರು
5	ಬೀದರ್	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಕವಿತಾ ಹುಷಾರೆ	ಫ್ಲಾಟ್ ನಂ. 59 ಮಾಣಿಕ್‌ರಾವ್ ನಿಲಯ, ಜಿಯಾನ ಕಾಲೋನಿ, ಕುಂಬಾರವಾಡ ರೋಡ್, ಬೀದರ್	
6	ಬಿಜಾಪುರ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಮೇಬಲ್ ಡೊಮೊಸೆನ್ ಪಿಂಟೊ	ದೀಪಾಲಯ ಸೋಷಿಯಲ್ ಸರ್ವಿಸ್ ಸೆಂಟರ್, ಅಗರ್‌ಕೇಡ್ ರೋಡ್, ಇಂಡಿ ತಾಲ್ಲೂಕು, ಬಿಜಾಪುರ ಜಿಲ್ಲೆ	ಸಮಾಜ ಕಾರ್ಯಕರ್ತರು
		ದಾನಪ್ಪ ಗುರುಪಾದಪ್ಪ ಆವಟಿ	ಸ್ಟೇಟ್ ಬ್ಯಾಂಕ್ ಕಾಲೋನಿ, ರೈಲು ನಿಲ್ದಾಣದ ಹತ್ತಿರ, ಬಿಜಾಪುರ	ಸಮಾಜ ಕಾರ್ಯಕರ್ತರು

7	ಚಾಮರಾಜ ನಗರ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಬಿ.ಎಸ್. ಬಸವರಾಜು	ಕೇರಾಫ್ ಕೆ.ರವೀಂದ್ರನಾಥ್, ನಂ. 95, ಹೌಸಿಂಗ್ ಬೋರ್ಡ್, ಚಾಮರಾಜನಗರ	ಸಮಾಜ ಕಾರ್ಯಕರ್ತರು
		ದಾಕ್ಷಾಯಿಣಮ್ಮ	ಯಾರದಹಳ್ಳಿ, ಮೂಡುಗೂರು ಅಂಚೆ, ತೆರಕಣಾಂಬಿ ಹೋಬಳಿ, ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	ಸಮಾಜ ಕಾರ್ಯಕರ್ತರು
8	ಚಿಕ್ಕಮಗಳೂರು	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಮೇರಿ ಕೆ.ಜಿ. (ಮೇರಿ ಸುಮ)	ಕಾರ್ಯದರ್ಶಿ, ಸರ್ವೋದಯ ಸಮಾಜಸೇವಾ ಸಂಸ್ಥೆ, ಕದ್ರಿಮಿದ್ರಿ, ಮಳಲೂರು ಅಂಚೆ, ಚಿಕ್ಕಮಗಳೂರು	ಸಮಾಜ ಕಾರ್ಯಕರ್ತರು
		ಜಿ.ಎಲ್. ಯಶೋಧ ಲಕ್ಷಣಗೌಡ	ಕೋಂ ಬಿ.ಎಂ. ಲಕ್ಷಣಗೌಡ, ವಕೀಲರು, ಜಯನಗರ ಬಡಾವಣೆ, ಚಿಕ್ಕಮಗಳೂರು	ಸಮಾಜ ಕಾರ್ಯಕರ್ತರು
9	ಚಿತ್ರದುರ್ಗ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಜಿ. ಮಂಜಪ್ಪ	ಸಂಗಮೇಶ್ವರ ಬಡಾವಣೆ, ಆಕಾಶವಾಣಿ ಹಿಂಭಾಗ, ಸಿ.ಕೆ. ಪುರ, ಚಿತ್ರದುರ್ಗ	
10	ಚಿಕ್ಕಬಳ್ಳಾಪುರ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಎಂ.ಎನ್. ಶ್ರೀರಾಮಪ್ಪ	ಮುದ್ದಲಹಳ್ಳಿ ಚಿಂತಾಮಣಿ ತಾಲ್ಲೂಕು ಚಿಕ್ಕಬಳ್ಳಾಪುರ	ಸಮಾಜ ಕಾರ್ಯಕರ್ತರು
		ಎಂ.ಎಲ್. ಸುಶೀಲ	ವಿವೇಕಾನಂದ ನಗರ, ಗುಡಿಬಂಡೆ, ಚಿಕ್ಕಬಳ್ಳಾಪುರ ಜಿಲ್ಲೆ	ಸಮಾಜ ಕಾರ್ಯಕರ್ತರು
11	ಧಾರವಾಡ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಬಸನಗೌಡ ಯಲ್ಲಪ್ಪ ಗೌಡಪಾಟೀಲ (ಪೊಲೀಸ್ ಪಾಟೀಲ)	ಕೇರಾಫ್, ಟಿ.ಜಿ. ಬಾಳೆ ಕಾಯಿ, ಚಿತ್ರಗಾರ ಓಣಿ, ಕಲಘಟಗಿ ತಾಲ್ಲೂಕು ಧಾರವಾಡ	ಸಮಾಜ ಕಾರ್ಯಕರ್ತರು
		ರಾಜೇಶ್ವರಿ ವಸಂತ ಸಾಲಗಟ್ಟಿ	ಕೋಂ ಡಾ. ವಸಂತ ಸಾಲಗಟ್ಟಿ ಸಾಕೇನ, 6ನೇ ಕ್ರಾಸ್, ಮರಾಠಾ ಕಾಲೋನಿ, ಧಾರವಾಡ	ಸಮಾಜ ಕಾರ್ಯಕರ್ತರು
12	ದಾವಣಗೆರೆ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಭಾರತಿ ವಿರೇಶ್	#293, 2ನೇ ಮುಖ್ಯ ರಸ್ತೆ ಎಸ್. ನಿಜಲಿಂಗಪ್ಪ ಲೇಔಟ್, ದಾವಣಗೆರೆ	ಸಮಾಜ ಕಾರ್ಯಕರ್ತರು
		ವೈ. ರಾಮನಾಯಕ್	# 477, ಎ ಬ್ಲಾಕ್, ಎಸ್.ಪಿ.ಎಸ್. ನಗರ, 2ನೇ ಹಂತ, ಆರ್.ಸಿ.ಸಿ. ಲೇಔಟ್, ದಾವಣಗೆರೆ	ಸಮಾಜ ಕಾರ್ಯಕರ್ತರು
13	ಗದಗ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಹುಸೇನಸಾಬ್ ಫಕ್ರುಸಾಬ ಕುಸಣ್ಣವರ್	ಸೊರಟೂರು ತಾಲ್ಲೂಕು ಗದಗ್	ಸಮಾಜ ಕಾರ್ಯಕರ್ತರು
		ಅನ್ನಪೂರ್ಣ ಗಾಣಿಗೇರ	ಕೇರಾಫ್ ಸಿ.ವಿ. ಅಬ್ಬಿಗೇರಿಮಠ, ಟ್ಯಾಗೋರ್ ರಸ್ತೆ, ಗದಗ್	ಸಮಾಜ ಕಾರ್ಯಕರ್ತರು
14	ಗುಲ್ಬರ್ಗಾ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಟಿ. ಶಿವಾನಂದ್	ಕೇರಾಫ್ ಪರಮಾನಂದ್ ಹೆಚ್. ಅಣಜಿಗಿ, ಜೇವರ್ಗಿ ತಾಲ್ಲೂಕು ಗುಲ್ಬರ್ಗಾ ಜಿಲ್ಲೆ	ಸಮಾಜ ಕಾರ್ಯಕರ್ತರು
		ಸುಚೇತಾ ಎಂ. ರಂಜೋಳ್‌ಕರ್	ಪ್ಲಾಟ್ ನಂ. 34 ಎಸ್.ಬಿ.ಐ. ಕಾಲೋನಿ, ಹಳೆ ಜೇವರ್ಗಿ ರಸ್ತೆ, ಗುಲ್ಬರ್ಗ	ಸಮಾಜ ಕಾರ್ಯಕರ್ತರು
15	ಹಾಸನ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಉದಯರವಿ	ಅಧ್ಯಕ್ಷರು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, 2ನೇ ಅಡ್ಡ ರಸ್ತೆ, ಉದಯಗಿರಿ, ಹಾಸನ	ಸಮಾಜ ಕಾರ್ಯಕರ್ತರು
		ಹೆಚ್.ಟಿ. ಕೋಮಲ	ನಂ. 2174, ಸರ್ಕಾರಿ ಕಾಲೇಜು ರಸ್ತೆ, ಇರಾನಿ ಬಂಗಲೆ ಹಳೇ ರಕ್ಷಣಾಪುರಂ ಪೋಸ್ಟ್ ಆಫೀಸ್ ಬಿಲ್ಡಿಂಗ್, ಹಾಸನ	ಸಮಾಜ ಕಾರ್ಯಕರ್ತರು

16	ಹಾವೇರಿ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಹನುಮಪ್ಪ ಜೆಟ್ಟಪ್ಪ ಜಾಡರ	ಕೆ/ಆ ಸಿ.ಬಿ. ಗುಡ್ಡೇರ ಹೌಸ್, 1ನೇ ಮುಖ್ಯ ರಸ್ತೆ, ಸಿ–ಪೂರ್ವ ಬಡಾವಣೆ ವಿದ್ಯಾನಗರ, ಹಾವೇರಿ	ಸಮಾಜ ಕಾರ್ಯಕರ್ತರು
		ಶೈನಾಜ್‌ಮಹಮ್ಮದ್ ಅಲಿ ಖಲೀಫ	ಕುಮಾರನಗರ, ಅಕ್ಕಿ ಆಲೂರು ಪೋ. ಹಾನಗಲ್ ತಾಲ್ಲೂಕು ಹಾವೇರಿ ಜಿಲ್ಲೆ	ಸಮಾಜ ಕಾರ್ಯಕರ್ತರು
17	ಕಾರವಾರ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ವಿವೇಕಲತಾ ಫರ್ನಾಂಡಿಸ್	ಕೆ.ಡಿ.ಡಿ.ಸಿ. ಬಿಶಪ್ಸ್ ಹೌಸ್, ಬೈತಕೋಲ್ ಪೋಸ್ಟ್ ಕಾರವಾರ	
18	ಕೊಡಗು	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಸೂರಜ್ ಎ.ಎಂ.	ಸುಲುಗೋಡು ಹಳ್ಳಿ, ದಾನುಗಾಲ ಪೋಸ್ಟ್ ದಕ್ಷಿಣ ಕೊಡಗು	ಸಮಾಜ ಕಾರ್ಯಕರ್ತರು
		ಆರತಿ ಸೋಮಯ್ಯ	ಕೇರಾಫ್ ಪ್ರಮೋದ್ ಸೋಮಯ್ಯ ಹಕತ್ತೂರ ಗ್ರಾಮ ಬೆಳಿಗೇರಿ ಪೋಸ್ಟ್, ಕೊಡಗು	ಸಮಾಜ ಕಾರ್ಯಕರ್ತರು
19	ಕೋಲಾರ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ನಿಕೋಲಸ್ ಎ.	#551, ನಾರ್ತ್ ಗಿಲ್‌ಬರ್ಟ್ಸ್ ಕ್ವಾಟ್ರಸ್, ಮಾರಿಕುಪ್ಪಂ ಪೋಸ್ಟ್, ಬಂಗಾರಪೇಟೆ, ಕೆ.ಜಿ.ಎಫ್. ಕೋಲಾರ	ಸಮಾಜ ಕಾರ್ಯಕರ್ತರು
		ಸುಗುಣಮ್ಮ ಹೆಚ್.ವಿ.	ಕೋಂ ಕೆ.ಶ್ರೀನಾಥ್ # 431/1, ಕಠಾರಿಪಾಳ್ಯ ಮುಖ್ಯ ರಸ್ತೆ, ಕೋಲಾರ	ಸಮಾಜ ಕಾರ್ಯಕರ್ತರು
20	ಕೊಪ್ಪಳ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಸಾವಿತ್ರಿ ಮುಜುಮದಾರ	ಅಂಚೆ ಮನೆಗಳು, ಜವಾಹರ ರಸ್ತೆ, ಕೊಪ್ಪಳ	ಸಮಾಜ ಕಾರ್ಯಕರ್ತರು
		ವಸಂತಕುಮಾರ್ ಕೆ.	ಅಂಚೆ ಪೆಟ್ಟಿಗೆ ಸಂಖ್ಯೆ: 10, ವಿವೇಕಾನಂದ ಕಾಲೋನಿ, ಗಂಗಾವತಿ, ಕೊಪ್ಪಳ	ಸಮಾಜ ಕಾರ್ಯಕರ್ತರು
21	ಮಂಡ್ಯ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಮಹೇಶ್ ಚಂದ್ರಗುರು	#2500, 6ನೇ ತಿರುವು, ಮರಿಗೌಡ ಬಡಾವಣೆ, ಮಂಡ್ಯ	ಸಮಾಜ ಕಾರ್ಯಕರ್ತರು
		ವೀಣಾ ಟಿ.	ಶ್ರೀ ಲಕ್ಷ್ಮೀ, 2ನೇ ಕ್ರಾಸ್, ಚಂದ್ರದರ್ಶನ ಕಲ್ಯಾಣಮಂಟಪ ಎದುರು, ವಿನಾಯಕ ಬಡಾವಣೆ, ಕಾರಸವಾಡಿ ರಸ್ತೆ, ಮಂಡ್ಯ	ಸಮಾಜ ಕಾರ್ಯಕರ್ತರು
22	ಮಂಗಳೂರು	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ರಮೀಲ ಶೇಖರ್	ಹೈ–ಲ್ಯಾಂಡ್–ಹೋಮ್, ಹೈಲ್ಯಾಂಡ್ಸ್, ಮಂಗಳೂರು	ಸಮಾಜ ಕಾರ್ಯಕರ್ತರು
		ಶ್ರೀಲತಾ ಯು.ಎ.	ಮೈ. ನೆಸ್ಟ್, ಗುರುಪ್ರಸಾದ್ ಲೇನ್, ಗೋರಿಗುಡ್ಡ, ಮಂಗಳೂರು	ಸಮಾಜ ಕಾರ್ಯಕರ್ತರು
23	ಮೈಸೂರು	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಪುಷ್ಪಲತಾ ಎಂ.	# 4726, ರಾಜರತ್ನ ಕೃಪ, ರಜಪೂತ್ ಬ್ಲಾಕ್, 1ನೇ ಅಡ್ಡರಸ್ತೆ, ಶಿವಾಜಿರೋಡ್, ಎನ್.ಆರ್. ಮೊಹಲ್ಲಾ, ಮೈಸೂರು	ಸಮಾಜ ಕಾರ್ಯಕರ್ತರು
		ಬಾಬುರಾಜು ಪಿ.ಪಿ.	ನಂ. 97, 2ನೇ ಮೈನ್ ಹೆಚ್. ಬ್ಲಾಕ್, ರಾಮಕೃಷ್ಣನಗರ, ಮೈಸೂರು	ಸಮಾಜ ಕಾರ್ಯಕರ್ತರು
24	ರಾಯಚೂರು	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಈರಣ್ಣ ಜೆ.	ತಂದೆ ಲಕ್ಷ್ಮಣ # 1–3–12, ರಾಗಿಮಾನಗಡ್ಡ ಸ್ಟೇಷನ್ ಏರಿಯಾ ರಾಯಚೂರು	ಸಮಾಜ ಕಾರ್ಯಕರ್ತರು
		ಚಾಂದ್ ಬೇಗಂ	ಕೇ/ಆ ಚಾಂದ್ ಹುಸೇನ್, ಮಾರ್ಕೆಟ್ ಹತ್ತಿರ, ಲಿಂಗಸುಗೂರು, ರಾಯಚೂರು	ಸಮಾಜ ಕಾರ್ಯಕರ್ತರು

25	ರಾಮನಗರ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಪಿ. ಷಣ್ಮುಗ ಸುಂದರಂ	#29, ಶಾಂತ ಜೀವಜ್ಯೋತಿ, ಕರಗದ ಬೀದಿ, ಮಂಡಿಪೇಟೆ, ರಾಮನಗರ	ಸಮಾಜ ಕಾರ್ಯಕರ್ತರು
		ಗಂಗರತ್ನಮ್ಮ	ಕೋಂ ಬಿ.ಎನ್. ಲೋಕೇಶ್, ವಿದ್ಯಾಪೀಠ ಶಾಲೆ ಹಿಂಭಾಗ ಮಲ್ಲೇಶ್ವರ ಬಡಾವಣೆ, ಐಜೂರು, ರಾಮನಗರ	ಸಮಾಜ ಕಾರ್ಯಕರ್ತರು
26	ಶಿವಮೊಗ್ಗ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ತಾರಾ ಪ್ರಸಾದ್	ಶೇಷಾದ್ರಿ ಕೃಪಾ, ಅಣ್ಣಾಜಿರಾವ್ ಲೇಔಟ್, 1ನೇ ಕ್ರಾಸ್, ವಿನೋಬನಗರ, ಕೀರ್ತಿನಗರ ರಸ್ತೆ, ಶಿವಮೊಗ್ಗ	ಸಮಾಜ ಕಾರ್ಯಕರ್ತರು
		ಹೆಚ್.ಜಿ. ಮಂಜುಳಾಂಬ ಆರಾಧ್ಯ	ಹೆಚ್.ಆರ್. ಉಮೇಶ್ ಆರಾಧ್ಯ, "ಪ್ರಶಾಂತ್", ಬಿ.ಹೆಚ್. ರಸ್ತೆ, ಹರಿಗೆ, ಶಿವಮೊಗ್ಗ	ಸಮಾಜ ಕಾರ್ಯಕರ್ತರು
27	ತುಮಕೂರು	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಶಂಕರಪ್ಪ ಕೆ.	ಅಂತರಸನಹಳ್ಳಿ, 1ನೇ ಕ್ರಾಸ್, ಜನತಾ ಕಾಲೋನಿ, ತುಮಕೂರು	ಸಮಾಜ ಕಾರ್ಯಕರ್ತರು
		ಸುಕನ್ಯಾ ಆರ್. ಹೆಚ್.	1ನೇ ಕ್ರಾಸ್, 2ನೇ ಅಡ್ಡರಸ್ತೆ, ನೃಪತುಂಗ ಬಡಾವಣೆ, ಶೆಟ್ಟಿಹಳ್ಳಿ ಮುಖ್ಯರಸ್ತೆ, ತುಮಕೂರು	ಸಮಾಜ ಕಾರ್ಯಕರ್ತರು
28	ಉಡುಪಿ	ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್		ಅಧ್ಯಕ್ಷರು
		ಸ್ವಪ್ನ ಗಣೇಶ್	"ಸಂಸ್ಕೃತಿ", ಶಾರದಾನಗರ ಲೇಔಟ್, ಮಣಿಪಾಲ, ಅಲೆವೂರು ರಸ್ತೆ, ಉಡುಪಿ	ಸಮಾಜ ಕಾರ್ಯಕರ್ತರು
		ಜಯಶ್ರೀ ಭಟ್	ಶ್ರೀನಿವಾಸ ಕೃಪಾ, ಹಂದೆ ಕಾಂಪೌಂಡ್, ಫೀಶರೀಸ್ ರೋಡ್, ಕೋಟ-576221, ಉಡುಪಿ ಜಿಲ್ಲೆ	ಸಮಾಜ ಕಾರ್ಯಕರ್ತರು

ಎಸ್.ಎನ್. ಕೃಷ್ಣಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 2786

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕುಡುಮಲಕುಂಟೆ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿರುವ ಜಮೀನುಗಳಲ್ಲಿ ಬರುವ 19 ಜನರಿಗೆ ಸೇರಿದ 15-31 ಎಕರೆ ಜಮೀನಿನ ಬಗರ್ ಹುಕುಂ ಸಾಗುವಳಿದಾರರಿಗೆ ಎಕ್ಸ್‌ಗ್ರೇಷಿಯಾ ನೀಡುವ ಬಗ್ಗೆ

ಓದಲಾಗಿದೆ:
1. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರ ಪತ್ರ ಸಂಖ್ಯೆ: ಎಲ್‌ಎನ್‌ಡಿ/ಸಿಆರ್/99/2008-09, ದಿನಾಂಕ:03-02-2010
2. ಸಿ.ಇ.ಓ. & ಇ.ಎಂ., ಕೆ.ಐ.ಎ.ಡಿ.ಬಿ.ಯವರ ಪತ್ರ ಸಂಖ್ಯೆ: ಕಕೈಪ್ರಅಮಂ/ಕೇಕ/ಭೂಸ್ವಾ/1762-1/1610/2009-10, ದಿನಾಂಕ: 08-03-2010

ಪ್ರಸ್ತಾವನೆ :

ದಿನಾಂಕ 24-08-2006ರಂದು ನಡೆದ 275ನೇ ಕೆ.ಐ.ಎ.ಡಿ.ಬಿ. ಸಭೆಯಲ್ಲಿ ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನ ಕುಡುಮಲಕುಂಟೆ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಲು ನಿರ್ಣಯವಾಗಿರುತ್ತದೆ. ಮಂಡಳಿ ಸಭೆಯ ನಿರ್ಣಯದಂತೆ ಅಧಿಸೂಚನೆ ಸಂಖ್ಯೆ: ಸಿಐ 405 ಎಸ್‌ಪಿಕ್ಯೂ 2006, ದಿನಾಂಕ: 25-10-2006ರಂದು ಕಲಂ 28(1)ರನ್ವಯ 250 ಎಕರೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 32 ಎಸ್‌ಪಿಕ್ಯೂ 2007 ದಿನಾಂಕ 09-02-2007ರಂದು 239-38 ಎಕರೆ ಜಮೀನಿಗೆ ಕಲಂ 28(4)ರ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಜಮೀನುಗಳಿಗೆ ಎಕರೆಯೊಂದಕ್ಕೆ ರೂ.3.50 ಲಕ್ಷದಂತೆ ಪರಿಹಾರ ಧನ ನಿಗದಿಪಡಿಸಿ, ಖಾಸಗಿ ಜಮೀನುಗಳಿಗೆ ಪರಿಹಾರ ಧನ ಪಾವತಿಸಲಾಗಿದೆ.

ಸದರಿ ಅಧಿಸೂಚನೆಯಲ್ಲಿ ಭೂಸ್ವಾಧೀನಪಡಿಸಿದ ಸರ್ಕಾರಿ ಜಮೀನುಗಳ ವಿವರ ಈ ಕೆಳಕಂಡಂತಿವೆ.

ಕ್ರ. ಸಂ.	ಸರ್ವೆ ನಂಬರ್	ವಿಸ್ತೀರ್ಣ(ಎ-ಗುಂ)	ಷರಾ
1.	17ರ ಪೈಕಿ	18-05	ಸರ್ಕಾರಿ ಗೋಮಾಳ
2.	18ರ ಪೈಕಿ	33-27	ಸರ್ಕಾರಿ ಗೋಮಾಳ
3.	212	2-39	ಸರ್ಕಾರಿ ಖರಾಬು
4.	286ರ ಪೈಕಿ	0-15	ಸರ್ಕಾರಿ ಖರಾಬು
ಒಟ್ಟು		55-06	

ಈ ಮೇಲ್ಕಂಡ ಸರ್ಕಾರಿ ಜಮೀನುಗಳನ್ನು ಕೆ.ಐ.ಎ.ಡಿ.ಬಿ.ಗೆ ಮಂಜೂರು ಮಾಡಿ, ವರ್ಗಾಯಿಸಲು ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರಿಗೆ ದಿನಾಂಕ 02-12-2007 ಹಾಗೂ ದಿನಾಂಕ 04-10-2008ರಂದು ಪತ್ರ ಬರೆಯಲಾಗಿತ್ತು.

ತಹಶೀಲ್ದಾರ್, ಗೌರಿಬಿದನೂರು ತಾಲ್ಲೂಕು ಇವರು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ಪತ್ರ ಬರೆದು, ಕುಡುಮಲಕುಂಟೆ ಗ್ರಾಮದ ಸರ್ವೆ ನಂ. 8 ಹಾಗೂ 212ರಲ್ಲಿ ಅನಧಿಕೃತ ಸಾಗುವಳಿದಾರರು ಇದ್ದಾರೆಂದು ವರದಿ ಮಾಡಿರುತ್ತಾರೆ. ಇದರ ಮೇರೆಗೆ ದಿನಾಂಕ 10-08-2009ರಂದು ನಡೆದ [illegible] ಮಂಡಳಿ ಸಭೆಯಲ್ಲಿ ಅನಧಿಕೃತ ಸಾಗುವಳಿಯಲ್ಲಿರುವ 31-09 ಎಕರೆ ಜಮೀನಿನ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಇವರಿಂದ ವಿವರವಾದ ವರದಿ ಪಡೆದು, ಸರ್ಕಾರಕ್ಕೆ ಸೂಕ್ತವಾದ ಪ್ರಸ್ತಾವನೆ ಸಲ್ಲಿಸಿ, ಕಂದಾಯ ಇಲಾಖೆಯ ಸಹಮತಿಯೊಂದಿಗೆ ದಯಾತ್ಮಕ ಪರಿಹಾರ ಧನ ಪಾವತಿಸಲು ನಿರ್ಣಯಿಸಲಾಗಿದೆ.

ದಿನಾಂಕ 10-08-2009ರ ಮಂಡಳಿ ನಿರ್ಣಯದಂತೆ ಹಾಗೂ ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಇವರು ಶಿಫಾರಸ್ಸು ಮಾಡಿರುವಂತೆ, ಅನಧಿಕೃತ ಸಾಗುವಳಿಯಲ್ಲಿರುವ 19 ಜನರಿಗೆ ಸೇರಿದ ಒಟ್ಟು 15-31 ಎಕರೆ ಜಮೀನಿಗೆ ದಯಾತ್ಮಕ ಪರಿಹಾರ ಪಾವತಿಸುವ ಪ್ರಸ್ತಾವನೆ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಯಿತು. ಕಂದಾಯ ಇಲಾಖೆಯಿಂದ ಟಿಪ್ಪಣಿ ಸಂಖ್ಯೆ: ಆರ್‌ಡಿ 88 ಎಲ್‌ಜಿಕೆ 2010, ದಿನಾಂಕ 22-05-2010ರಲ್ಲಿ ಅಭಿಪ್ರಾಯ ನೀಡಿರುತ್ತದೆ.

ಕಂದಾಯ ಇಲಾಖೆಯು ನೀಡಿರುವ ಅಭಿಪ್ರಾಯದಂತೆ ಈ ಪ್ರಸ್ತಾವನೆ ಬಗ್ಗೆ ಅಭಿಪ್ರಾಯ ಕೋರಿ, ಕಡತವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ ಮೇರೆಗೆ, ಸದರಿ ಇಲಾಖೆಯಿಂದ ಟಿಪ್ಪಣಿ ಸಂಖ್ಯೆ: ಆಇ/993/ವೆಚ್ಚ-1/2010, ದಿನಾಂಕ 16-06-2010ರಲ್ಲಿ Finance Department regrets the proposal giving of compensation to unuthorised occupant ಎಂದು ಅಭಿಪ್ರಾಯ ನೀಡಿರುತ್ತದೆ.

ಮಂಡಳಿಯು ಇತರೆ ಒಂದು ಪ್ರದೇಶದಲ್ಲಿ ಸ್ವಾಧೀನಪಡಿಸಿರುವ ಅಂದರೆ ಶಿವಮೊಗ್ಗ ವಿಮಾನ ನಿಲ್ದಾಣ ಸ್ಥಾಪನೆಗಾಗಿ ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕು, ಸೋಗಾನೆ ಗ್ರಾಮದಲ್ಲಿ ಭೂಸ್ವಾಧೀನಪಡಿಸಿರುವ ಒಟ್ಟು 660-29 ಎಕರೆ ಜಮೀನಿನ ಪೈಕಿ, 590-21 ಎಕರೆ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡುತ್ತ ಬಂದಿರುವ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸ್ಥಳಾಂತರಿಸಿ, ಅವರಿಗೆ ಸೂಕ್ತ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಲು [illegible] ಪ್ರತಿ ಎಕರೆಗೆ ರೂ.2.00 ಲಕ್ಷದಂತೆ ಒಟ್ಟು ಪ್ರತಿ ಕುಟುಂಬಕ್ಕೆ 4 ಎಕರೆಗೆ ಮೀರದಂತೆ ದಯಾತ್ಮಕ ಪರಿಹಾರ ನೀಡಲು ಸರ್ಕಾರದ ಆದೇಶ ಸಂಖ್ಯೆ: ಮೂಅಇ/70/ರಾಅವಿ/2007, ದಿನಾಂಕ 19-07-2007ರಂದು ಆದೇಶ ಹೊರಡಿಸಲಾಗಿದೆ. ಬಗರ್ ಹುಕುಂ ಜಮೀನಿನಲ್ಲಿ ನೀರಾವರಿ ಪಂಪ್‌ಸೆಟ್ ಮರಗಳು, ಕಟ್ಟಡಗಳಿದ್ದಲ್ಲಿ ಅದಕ್ಕೂ ಪರಿಹಾರ ನೀಡಲಾಗಿದೆ.

ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರ, (1)ರಲ್ಲಿ ಓದಲಾದ ದಿನಾಂಕ 03-02-2010ರ ಪತ್ರದಲ್ಲಿ ಗೌರಿಬಿದನೂರು ತಾಲ್ಲೂಕು ಕುಡುಮಲಕುಂಟೆ ಗ್ರಾಮದ 239-38 ಎಕರೆ ಜಮೀನು ಭೂಸ್ವಾಧೀನವಾಗಿದ್ದು, ಅಧಿಕೃತ ದಾಖಲೆಗಳನ್ನು ಹೊಂದಿರುವವರಿಗೆ ಪರಿಹಾರ ತಲುಪಿದ್ದು, ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿದಾರರಾದ ಕೆಲವು ರೈತರ ಬಳಿ ಯಾವುದೇ ದಾಖಲೆಗಳಿಲ್ಲದೇ ಸುಮಾರು 30-40 ವರ್ಷಗಳ ಹಿಂದಿನಿಂದ ಅನುಭವದಲ್ಲಿದ್ದು, ಇವರುಗಳು ನಿಗದಿತ ಅವಧಿಯಲ್ಲಿ ಭೂ ಸಕ್ರಮೀಕರಣ ಕೋರಿ ಅರ್ಜಿ ಸಲ್ಲಿಸದೇ ಇದ್ದ ಕಾರಣ, ಇವರ ಅನುಭವದಲ್ಲಿರುವ ಜಮೀನನ್ನು ಸಕ್ರಮಗೊಳಿಸಿರುವುದಿಲ್ಲ. ಆದಕಾರಣ, ಇವರಿಗೆ ಪರಿಹಾರ ನೀಡಿರುವುದಿಲ್ಲ. ಈ ಜಮೀನುಗಳನ್ನು ಹೊರತುಪಡಿಸಿದಂತೆ ಸದರಿಯವರಿಗೆ ಬೇರೆ ಯಾವುದೇ [illegible]ಧಾರ ಇಲ್ಲದ ಕಾರಣ, 15.31 ಎಕರೆ ಜಮೀನುಗಳು ಈ ಕೆಳಕಂಡ 19 ಜನ ರೈತರ ಅನುಭವದಲ್ಲಿರುತ್ತವೆ ಎಂದು ತಿಳಿಸಿ ಇವರಿಗೆ ದಯಾತ್ಮಕ ಪರಿಹಾರ ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಕ್ರ. ಸಂ.	ಅನಧಿಕೃತ ಸಾಗುವಳಿದಾರರು	ವಿಸ್ತೀರ್ಣ(ಎ-ಗುಂ)
1	ಅಶ್ವತ್ಥಪ್ಪ ಬಿನ್ ಲೇ: ಗುಡ್ಡಿ ನರಸಿಂಹಪ್ಪ	1-00
2.	ನಂಜಮ್ಮ ಕೋಂ ನಂಜುಂಡಪ್ಪ	0-13
3.	ರಾಮಕೃಷ್ಣಪ್ಪ ಬಿನ್ ನ್ಯಾತಪ್ಪ	1-08
4.	ಕದಿರಪ್ಪ ಬಿನ್ ಹನುಮಂತಪ್ಪ	0-13
5.	ಗಂಗಪ್ಪ ಬಿನ್ ಹನುಮಂತಪ್ಪ	0-11
6.	ನರಸಮ್ಮ ಕೋಂ ರಾಮಪ್ಪ	0-21
7.	ಅಂಜಿನಪ್ಪ ಬಿನ್ ಮಾರಪ್ಪ	1-20
8.	ಕಮಾಲ್ ಸಾಬ್ ಬಿನ್ ಶಿಲಾರ್ ಸಾಬ್	0-25
9.	ಅಶ್ವತ್ಥಮ್ಮ ಕೋಂ ಚಂದ್ರಶೇಖರ್	0-35
10.	ಅಶ್ವತ್ಥಪ್ಪ ಬಿನ್ ಕದಿರಪ್ಪ	0-14
11.	ತಿಪ್ಪಯ್ಯ ಬಿನ್ ನರಸಿಂಹಪ್ಪ	0-13
12.	ಸಿದ್ದಗಂಗಮ್ಮ ಕೋಂ ಲೇ: ಕದಿರಪ್ಪ	1-00
13.	ಮುದ್ದಮ್ಮ ಕೋಂ ಲೇ: ಎಂ.ಗಿ. ರಾಮಚಂದ್ರಪ್ಪ	0-28
14.	ನರಸಪ್ಪ ಬಿನ್ ಗಂಗಪ್ಪ	0-28
15.	ನಾರಾಯಣಪ್ಪ ಬಿನ್ ಮಳ್ಳೂರು ನರಸಿಂಹಪ್ಪ	1-15
16.	ಸಂಜೀವರಾಯಪ್ಪ ಬಿನ್ ಮಳ್ಳೂರು ಕದಿರಪ್ಪ	0-28
17.	ಅಶ್ವತ್ಥಪ್ಪ ಬಿನ್ ಮಳ್ಳೂರು ಕದಿರಪ್ಪ	0-28
18.	ನಾರಾಯಣಪ್ಪ ಬಿನ್ ಗಂಗಪ್ಪ	2-00
19.	[illegible] ಬಿನ್ ಮುನ್ನೂರು ಗಂಗಪ್ಪ	1-11
	ಒಟ್ಟು	15-31

ಈ ಹಿನ್ನೆಲೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಸ್ವಾಧೀನವಾಗಿರುವ ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕುಡುಮಲಕುಂಟೆ ಗ್ರಾಮದ 15-31 ಎಕರೆ ಸರ್ಕಾರಿ ಜಮೀನಿನ 19 ಜನ ಬಗರ್ ಹುಕುಂ ಸಾಗುವಳಿದಾರರಿಗೆ ದಯಾತ್ಮಕ ಪರಿಹಾರ ನೀಡುವ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 188 ಎಸ್‌ಪಿಕ್ಯೂ 2010, ಬೆಂಗಳೂರು, ದಿನಾಂಕ: 21ನೇ ಅಕ್ಟೋಬರ್ 2010.

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕುಡುಮಲಕುಂಟೆ ಗ್ರಾಮದಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿರುವ 239-38 ಎಕರೆ ಜಮೀನಿನ ಪೈಕಿ ಸರ್ಕಾರಿ ಜಮೀನುಗಳಲ್ಲಿ ಅನಧಿಕೃತ ಸಾಗುವಳಿದಾರರಾದ ಕೆಲವು ರೈತರ ಬಳಿ ಯಾವುದೇ ದಾಖಲೆಗಳಿಲ್ಲದೇ ಸುಮಾರು 30-40 ವರ್ಷಗಳ ಹಿಂದಿನಿಂದ ಅನುಭವದಲ್ಲಿದ್ದು, ಇವರುಗಳು ನಿಗದಿತ ಅವಧಿಯಲ್ಲಿ ಭೂ ಸಕ್ರಮೀಕರಣ ಕೋರಿ ಅರ್ಜಿ ಸಲ್ಲಿಸದೇ ಇದ್ದ ಕಾರಣ, ಇವರ ಅನುಭವದಲ್ಲಿರುವ ಈ ಜಮೀನುಗಳನ್ನು ಹೊರತುಪಡಿಸಿದಂತೆ ಸದರಿಯವರಿಗೆ ಬೇರೆ ಯಾವುದೇ ಜೀವನಾಧಾರ ಇಲ್ಲದ ಕಾರಣ, ಈ ಕೆಳಕಂಡ 19 ಜನ ರೈತರ 15-31 ಎಕರೆ ಸರ್ಕಾರಿ ಜಮೀನಿಗೆ ಎಕರೆಯೊಂದಕ್ಕೆ ರೂ.2.00 ಲಕ್ಷಗಳಂತೆ ದಯಾತ್ಮಕ ಪರಿಹಾರ ಧನ ಮಂಜೂರು ಮಾಡಲು ಆದೇಶ ಹೊರಡಿಸಲಾಗಿದೆ.

ಕ್ರ. ಸಂ.	ಅನಧಿಕೃತ ಸಾಗುವಳಿದಾರರು	ವಿಸ್ತೀರ್ಣ (ಎ-ಗುಂ)
1.	ಅಶ್ವತ್ಥಪ್ಪ ಬಿನ್ ಲೇ: ಗುಡ್ಡಿ ನರಸಿಂಹಪ್ಪ	1-00
2.	ನಂಜಮ್ಮ ಕೋಂ ನಂಜುಂಡಪ್ಪ	0-13
3.	ರಾಮಕೃಷ್ಣಪ್ಪ ಬಿನ್ ನ್ಯಾತಪ್ಪ	1-08
4.	ಕದಿರಪ್ಪ ಬಿನ್ ಹನುಮಂತಪ್ಪ	0-13
5.	ಗಂಗಪ್ಪ ಬಿನ್ ಹನುಮಂತಪ್ಪ	0-11
6.	ನರಸಮ್ಮ ಕೋಂ ರಾಮಪ್ಪ	0-21
7.	ಆಂಜಿನಪ್ಪ ಬಿನ್ ಮಾರಪ್ಪ	1-20
8.	ಕಮಾಲ್ ಸಾಬ್ ಬಿನ್ ಶಿಲಾರ್ ಸಾಬ್	0-25
9.	ಅಶ್ವತ್ಥಮ್ಮ ಕೋಂ ಚಂದ್ರಶೇಖರ್	0-35
10.	ಅಶ್ವತ್ಥಪ್ಪ ಬಿನ್ ಕದಿರಪ್ಪ	0-14
11.	ತಿಪ್ಪಯ್ಯ ಬಿನ್ ನರಸಿಂಹಪ್ಪ	0-13
12.	ಸಿದ್ದಗಂಗಮ್ಮ ಕೋಂ ಲೇ: ಕದಿರಪ್ಪ	1-00
13.	ಮುದ್ದಮ್ಮ ಕೋಂ ಲೇ: ಎಂ.ಗಿ. ರಾಮಚಂದ್ರಪ್ಪ	0-28
14.	ನರಸಪ್ಪ ಬಿನ್ ಗಂಗಪ್ಪ	0-28
15.	ನಾರಾಯಣಪ್ಪ ಬಿನ್ ಮಳ್ಳೂರು ನರಸಿಂಹಪ್ಪ	1-15
16.	ಸಂಜೀವರಾಯಪ್ಪ ಬಿನ್ ಮಳ್ಳೂರು ಕದಿರಪ್ಪ	0-28
17.	ಅಶ್ವತ್ಥಪ್ಪ ಬಿನ್ ಮಳ್ಳೂರು ಕದಿರಪ್ಪ	0-28
18.	ನಾರಾಯಣಪ್ಪ ಬಿನ್ ಗಂಗಪ್ಪ	2-00
19.	ಅಲಕ್ಷ್ಮಯ್ಯ ಬಿನ್ ಮುನ್ನೂರು ಗಂಗಪ್ಪ	1-11
ಒಟ್ಟು		15-31

ಈ ಆದೇಶವು ಮೇಲ್ಕಂಡ 19 ಜನ ರೈತರುಗಳಿಗೆ ಮಾತ್ರ ಅನ್ವಯಿಸಲ್ಪಡುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.2788

ಕೆ.ಹೆಚ್. ಶೇಷಗಿರಿ
ಸರ್ಕಾರದ ಅಧೀನ ಕಾರ್ಯದರ್ಶಿ (ಕೈಅ.)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

INFRASTRUCTURE DEVELOPMENT SECRETARIAT

Sub : Implementation of PPP projects in Karnataka-Constitution of Empowered Committee-reg.

Read : Note No. PSCM/F/3710/2010 dated 24-09-2010

Preamble:

The Government of Karnataka had brought out the first Infrastructure Policy in the year 1997. The policy aimed at expanding and upgrading Infrastructure to meet the growing needs of Industrial and Agricultural sectors.

The PPP projects handled by various departments are primarily in logistics, Railways, Ports, Roads, Urban Transportation, Agri-logistics covering 10 different sectors spreading over to 34 sub-sectors. The departments are developing and delivering the projects right from conceptualization the projects, preparation of Pre-feasibility report and hand hold the administrative departments till they initiate the process of procurement by issue of RFQ/RFP, Preparation of Concession Agreement Manuals of specifications and Standards, Detailed project Reports besides seeking approvals as required in Single Window Agency/High Level Committee at various

stages; Many projects also require VGF assistance and as such seeking VGF from Government of India. Evaluation bids by IDD or IDD to help the administrative department is the aim process besides getting approvals for signing Concession Agreement/Project Development by IDD/Administrative department depending on the allocation of business to the departments.

The management of PPP projects is in its infancy stage requiring enormous amount of understanding amongst the officers, Consultants, Transaction Advisors as to how to determine and project the service/goods levels, spread over a long period, configure contract with necessary provisions to take care of variations in technology with times, competitiveness in tariff etc.

Since the PPP projects are time bound, Government of the view that, it is necessary to dispense with the routine file referral systems for clearance mechanisms by way of creating an Empowered Committee in the matter. Hence the following order.

Government Order No. IDD 116 ITS 2010, Bangalore, Dated: 6th October 2010

In view of the circumstances explained in the preamble, Government is pleased to constitute an Empowered Committee comprising of the following officers to examine the PPP proposals and accord expeditious clearances to various documents covering RFQ, RFP, Concession Agreements, Land lease agreements, State support agreements, Share holder agreements, Project development agreements and the related documents used to enter into agreement with the selected developers for expeditious implementation of PPP projects.

1. The Principal Secretary to Govt. Finance Department - Chairman
2. The Principal Secretary to Govt. Administrative Department - Member
3. The Principal Secretary to Govt. Infrastructure Development Department - Member
4. The Secretary to Govt. Law Department - Member

The agenda notes consisting of the documents, the salient points therein shall be circulated well in advance by IDD/Administrative department before the meeting to enable the member of the Committee to hold a view on the proposals during the meeting of the Empowered Committee. The meetings of the Empowered Committee shall be held on fortnightly basis.

This order issues with the approval of the Competent Authority vide authorization bearing No.PSCM/F/3710/2010 dated 24-09-2010.

By Order and in the name of the Governor of Karnataka,

PR. 2789

R.Shivalingaiah

Under Secretary to Govt.

Infrastructure Development Department

ಯುವಜನ ಸೇವಾ ಸಚಿವಾಲಯ

ವಿಷಯ : ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ 2010–11ನೇ ಸಾಲಿಗೆ ಕೆಳಹಂತದ ಗ್ರಾಮೀಣ ಕ್ರೀಡಾಕೂಟಗಳನ್ನು ಸಂಘಟಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 81 ಯುಸೇಕ್ರೀ 2010, ದಿನಾಂಕ:07–08–2010
2. ಅಧೀನ ಕಾರ್ಯದರ್ಶಿ, ಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯ, ಋುಲಂಟಿ ಉಡಿಜಛಿಣಂಡಿಚಿಣಜ–ಪೈಕಾ, ಭಾರತ ಸರ್ಕಾರ ನವದೆಹಲಿ, ಇವರ ಪತ್ರ ಸಂಖ್ಯೆ: ಎಫ್ 03/17/ಎಂವೈಎಎಸ್/ಪೈಕಾ–2010/12728/ದಿನಾಂಕ:05–08–2010
3. ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರ ಪತ್ರ ಸಂಖ್ಯೆ: ಡಿವೈಎಸ್ಎಸ್/ಕ್ರೀಕಪಂ/4/ಪೈಕಾ/2010–11, ದಿನಾಂಕ:16–9–2010

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 07–08–2010ರ ಸರ್ಕಾರಿ ಆದೇಶದಲ್ಲಿ 2010–11ನೇ ಸಾಲಿಗೆ ಕೆಳಹಂತದ ಗ್ರಾಮೀಣ ಕ್ರೀಡಾಕೂಟಗಳನ್ನು ಸಂಘಟಿಸುವ ಸಲುವಾಗಿ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಲ್ಪಟ್ಟ ಪೈಕಾ ಯೋಜನೆಯ 2010–11ನೇ ಸಾಲಿನ ಶೇ.75ರಷ್ಟು ಅನುದಾನ ರೂ.2,16,20,000/–ಗಳನ್ನು ಬಿಡುಗಡೆ ಮಾಡಲಾಗಿತ್ತು. ಕೇಂದ್ರ ಸರ್ಕಾರವು ಮೇಲೆ (2)ರಲ್ಲಿ ಓದಲಾದ ದಿನಾಂಕ 5–8–2010ರ ಪತ್ರದಲ್ಲಿ ಉಳಿದ ಶೇ.25ರಷ್ಟು ಅನುದಾನ ರೂ.36,00,000/– ಬಿಡುಗಡೆ ಮಾಡಿದೆ. ನಿರ್ದೇಶಕರು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಇವರು ಮೇಲೆ (3)ರಲ್ಲಿ [illegible]ದ ದಿನಾಂಕ:16–09–2010ರ ಪತ್ರದಲ್ಲಿ 2010–11ನೇ ಸಾಲಿನ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ ಗ್ರಾಮೀಣ ಕ್ರೀಡಾ ಪಂದ್ಯಾವಳಿಗಳನ್ನು ಬ್ಲಾಕ್ ಮಟ್ಟ, ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದಲ್ಲಿ ಸಂಘಟಿಸಲು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನದ [illegible] 11,00,000/–ಗಳನ್ನು [illegible] ಪಂಚಾಯತ್ ಮಟ್ಟದ ಪೈಕಾ ಪಂದ್ಯಾವಳಿಗಳನ್ನು ಸಂಘಟಿಸಲು [illegible]

ರೂ.2,00,000/-ಗಳನ್ನು ರಾಜ್ಯ ಮಟ್ಟದ ಪೈಕಾ ಪಂದ್ಯಾವಳಿಗಳನ್ನು ಸಂಘಟಿಸಲು ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 81 ಯುಸೇಕ್ರೀ 2010 ಬೆಂಗಳೂರು, ದಿನಾಂಕ: 20ನೇ ಅಕ್ಟೋಬರ್ 2010

ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆಯಡಿ 2010-11ನೇ ಸಾಲಿಗೆ ಕೆಳಹಂತದ ಗ್ರಾಮೀಣ ಕ್ರೀಡಾ ಕೂಟಗಳನ್ನು ಸಂಘಟಿಸಲು ಕೇಂದ್ರ ಸರ್ಕಾರ ಒದಗಿಸಿರುವ ಶೇ25ರ ಅನುದಾನ ರೂ.36,00,000/-ಗಳಲ್ಲಿ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1ರಲ್ಲಿ ನಮೂದಿಸಿರುವ ಷರತ್ತುಗಳಿಗೆ ಒಳಪಟ್ಟು, ಅನುಬಂಧ-2ರಲ್ಲಿ ನಮೂದಿಸಿದಂತೆ ಒಟ್ಟು ರೂ.34,00,000 (ಮೂವತ್ತನಾಲ್ಕು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 2204-00-198-6-11 ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ ಯೋಜನೆ ಅಡಿಯಲ್ಲಿ ಆಯಾ ಜಿಲ್ಲಾ ಕೇಂದ್ರದ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಹಣ ಸೆಳೆದು ಬ್ಲಾಕ್ ಪಂಚಾಯತ್ ಮಟ್ಟದ, ಮತ್ತು ಜಿಲ್ಲಾ ಪಂಚಾಯತ್ ಮಟ್ಟದ ಪೈಕಾ ಪಂದ್ಯಾವಳಿಗಳನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರಿಗೆ ಕ್ರೀಡಾಕೂಟಗಳ ಸಂಘಟನೆಗೆ ನೀಡಲು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಅವರಿಗೆ ಪ್ರಾಧೀಕರಿಸಿ ಹಣ ಬಿಡುಗಡೆ ಮಾಡಲು ಆದೇಶಿಸಿದೆ.

ರಾಜ್ಯ ಮಟ್ಟದ ಪೈಕಾ ಪಂದ್ಯಾವಳಿಗಳನ್ನು ಅನುಬಂಧ-3ರಲ್ಲಿ ನಮೂದಿಸಿದಂತೆ ರೂ. 2,00,000/- ಗಳನ್ನು (ರೂ. ಎರಡು ಲಕ್ಷಗಳು ಮಾತ್ರ) ಲೆಕ್ಕಶೀರ್ಷಿಕೆ 2204-00-198-6-11 ಪಂಚಾಯತ್ ಯುವಕ್ರೀಡಾ ಔರ್ ಖೇಲ್ ಅಭಿಯಾನ ಯೋಜನೆ ಅಡಿಯಲ್ಲಿ ಆಯಾ ಜಿಲ್ಲಾ ಕೇಂದ್ರದ ತಾಲ್ಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು ಹಣ ಸೆಳೆದು ರಾಜ್ಯ ಮಟ್ಟದ ಪೈಕಾ ಪಂದ್ಯಾವಳಿಗಳನ್ನು ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಇವರಿಗೆ ಕ್ರೀಡಾಕೂಟಗಳ ಸಂಘಟಿಸಲು ರೂ.2,00,000/-ಗಳನ್ನು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಅವರಿಗೆ ಪ್ರಾಧೀಕರಿಸಿ ಹಣ ಬಿಡುಗಡೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಹೊರಡಿಸಿದ 2010-11ನೇ ಸಾಲಿನ ಜಮಾ ಸ್ಥಿರೀಕರಣ ತಃಖ್ತೆ ಸಂಖ್ಯೆ:ಎಫ್‌ಡಿ/13/ಬಿಜಿಎಲ್/2010, ದಿನಾಂಕ 21-08-2010ರನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ

ಅನುಬಂಧ-1

ಪೈಕಾ ಯೋಜನೆಯ ಮಹಿಳಾ ಕ್ರೀಡಾ ಮತ್ತು ಪಂದ್ಯಾವಳಿಗಳ ಅನುದಾನ ವಿನಿಯೋಗಿಸುವ ಬಗ್ಗೆ ಅನುಸರಿಸಬೇಕಾದ ನಿಬಂಧನೆಗಳು

1. ಅನುದಾನವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶ/ಯೋಜನೆಗೆ ವೆಚ್ಚಭರಿಸುವುದು, ಮತ್ತು ಕ್ರೀಡೆಗಳ ಸಂಘಟನೆಯ ನಂತರ ಉಳಿಕೆಯಾದ ಹಣವನ್ನು ಕೇಂದ್ರ ಸರ್ಕಾರಕ್ಕೆ ಮರುಪಾವತಿಸಿ ಉಪಯುಕ್ತಾ ಪತ್ರದೊಂದಿಗೆ ಆಡಿಟೆಡ್ ಲೆಕ್ಕ ಪತ್ರಗಳ ಪಟ್ಟಿಯನ್ನು ಸಲ್ಲಿಸುವುದು.
2. ಸದರಿ ಹಣವನ್ನು ಯಾವುದೇ ಕಾರಣಕ್ಕೂ ಬೇರೆ ಉದ್ದೇಶ ಅಥವಾ/ಬೇರೆ ಯೋಜನೆಗೆ ವಿನಿಯೋಗಿಸತಕ್ಕದ್ದಲ್ಲ. ಎಲ್ಲಾ ಹಂತದ ಕ್ರೀಡೆಗಳನ್ನು ಸಂಘಟಿಸಿರುವ ಬಗ್ಗೆ ವಿನಿಯೋಗಿಸಲಾದ ಅನುದಾನಕ್ಕೆ ಕ್ರೋಢೀಕೃತ ಲೆಕ್ಕಪತ್ರವನ್ನು ಕಳುಹಿಸತಕ್ಕದ್ದು.
3. ಈ ಯೋಜನೆಯ ಅನುಷ್ಠಾನದ ಸಂದರ್ಭದಲ್ಲಿ ಸಾಮಾಜಿಕ ಪಿಡುಗಾದ ಹೆಚ್.ಐ.ವಿ/ಏಡ್ಸ್ ಬಗ್ಗೆ ಜಾಗ್ರತೆ ಮೂಡಿಸುವುದು.
4. ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳ ವಿಜೇತರಾದ ಕ್ರೀಡಾಪಟುಗಳ ವಿವರಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯತ್ ಕ್ರೀಡಾ ಶ್ರೀಗಳಿಗೆ ತಪ್ಪದೆ ಒದಗಿಸುವುದು.
5. ಸಹಾಯಕ ನಿರ್ದೇಶಕರು ಜಿಲ್ಲಾ ಮಟ್ಟದಲ್ಲಿ ಪ್ರತಿ ವರ್ಷ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳ ಪೂರ್ಣ ಮಾಹಿತಿ ಸಂಗ್ರಹಿಸತಕ್ಕದ್ದು.
6. ರಾಜ್ಯ ಸರ್ಕಾರದ ಕೋರಿಕೆಯಂತೆ ಉಳಿಕೆಯ ಮೊತ್ತವನ್ನು ಕಾರ್ಯಕ್ರಮ ಸಂಘಟನೆಯ ನಂತರ ಪೂರ್ಣ ಲೆಕ್ಕಪತ್ರಗಳನ್ನು ನಿಗದಿತ ನಮೂನೆಯಲ್ಲಿ ಒದಗಿಸಿದ ನಂತರ ಹಣ ಬಿಡುಗಡೆ ಮಾಡಲಾಗುವುದು.
7. ಈ ಯೋಜನೆಯು ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಮತ್ತು ಯುವಜನ ಕಲ್ಯಾಣ ಮತ್ತು ಕ್ರೀಡಾ ಮಂತ್ರಾಲಯ ಭಾರತೀಯ ಕ್ರೀಡಾ ಪ್ರಾಧಿಕಾರ ಪ್ರಾಯೋಜಿತ ಕಾರ್ಯವಾಗಿರುವುದರಿಂದ ವ್ಯಾಪಕ ಪ್ರಚಾರ ನೀಡುವುದು, ಹಾಗೂ ಕಾರ್ಯಕ್ರಮ ಸಂಘಟನೆಯ ಸಂದರ್ಭದಲ್ಲಿ ಹೆಚ್ಚಿನ ಪ್ರಚಾರ ಕೈಗೊಳ್ಳುವುದು.
8. ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದ ಅನುದಾನವು ಉದ್ದೇಶಿತ ಕಾರ್ಯಕ್ರಮಕ್ಕೆ ಬಳಕೆಯಾಗದಿರುವುದು ಕಂಡುಬಂದಲ್ಲಿ ಸದರಿ ಹಣದ ಪಾವತಿಯನ್ನು ತಡೆಹಿಡಿಯುವುದು.
9. ರಾಜ್ಯ ಮಟ್ಟದ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳು ರಾಷ್ಟ್ರಮಟ್ಟದ ಕ್ರೀಡಾ ಕೂಟಗಳಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ನೋಡಿಕೊಳ್ಳತಕ್ಕದ್ದು.
10. ಈ ಅನುದಾನದಿಂದ ಯಾವುದೇ ರೀತಿಯ ಆಸ್ತಿಯನ್ನು ವೃದ್ಧಿಗೊಳಿಸಿಕೊಳ್ಳಕೂಡದು.
11. ನಗದು ಬಹುಮಾನದ ಮೊತ್ತವನ್ನು ವಿಜೇತರಾದ ಗ್ರಾಮ ಪಂಚಾಯತಿ ಅಥವಾ ಬ್ಲಾಕ್ ಪಂಚಾಯತಿಗಳಿಗೆ ನೀಡಿ ಸದರಿ ಗ್ರಾಮ /ಬ್ಲಾಕ್ ಪಂಚಾಯತಿ ಕೇಂದ್ರಗಳಲ್ಲಿ ಕ್ರೀಡೆಗಳ ಅಭಿವೃದ್ಧಿ ಕ್ರೀಡಾ ಸಲಕರಣೆಗಳ ಖರೀದಿಗಾಗಿ ಉಪಯೋಗಿಸತಕ್ಕದ್ದು.

ಈ ಬಗ್ಗೆ [illegible] ಪಂದ್ಯಾವಳಿ ನಡೆಸಿದ ಬಗ್ಗೆ ಪೂರ್ಣ ವರದಿ, ನಡೆಸಿದ ಸ್ಥಳ, ದಿನಾಂಕ, ಫೋಟೊ, ಸಿ.ಡಿ., ಇತ್ಯಾದಿ ದಾಖಲೆಗಳೊಂದಿಗೆ ಲೆಕ್ಕಪತ್ರಗಳನ್ನು ನಿಗದಿತ ನಮೂನೆಗಳಲ್ಲಿ ದಿನಾಂಕ 30–09–2010ರೊಳಗೆ ಕಳುಹಿಸಿಕೊಡುವುದು.

ನಿಗದಿತ ಅವಧಿಯೊಳಗೆ ವಿವರಗಳನ್ನು ನೀಡದಿದ್ದಲ್ಲಿ ಸಂಬಂಧಪಟ್ಟ ಜಿಲ್ಲೆಯ ಸಹಾಯಕ ನಿರ್ದೇಶಕರುಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.

ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಬೆಂಗಳೂರು

ಅನುಬಂಧ–2

2010–11ನೇ ಸಾಲಿನ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆ ಅಡಿ ಕೆಳಹಂತದ ಕ್ರೀಡೆಗಳನ್ನು ಸಂಘಟಿಸಲು ಬಿಡುಗಡೆಗೊಳಿಸುವ ಅನುದಾನದ ವಿವರ

ಕ್ರ. ಸಂ.	ಜಿಲ್ಲೆಯ ಹೆಸರು	ಜಿಲ್ಲಾ ಮಟ್ಟದ ಗ್ರಾಮೀಣ ಕ್ರೀಡಾಕೂಟಗಳ ಸಂಘಟನೆಗೆ ಬಿಡುಗಡೆ ಮಾಡಲಾದ ಶೇ75 ಮೊದಲ ಕಂತಿನ ಅನುದಾನ (ರೂ.ಗಳಲ್ಲಿ)	ಬ್ಲಾಕ್ ಮಟ್ಟದ ಗ್ರಾಮೀಣ ಕ್ರೀಡಾಕೂಟಗಳ ಸಂಘಟನೆಗೆ ಬಿಡುಗಡೆ ಮಾಡಲಾದ ಶೇ75 ಮೊದಲ ಕಂತಿನ ಅನುದಾನ		ಒಟ್ಟು ಮೊತ್ತ (ರೂ.ಗಳಲ್ಲಿ)
			ಬ್ಲಾಕ್‌ಗಳ ಸಂಖ್ಯೆ	ಬಿಡುಗಡೆ ಮಾಡಲಾದ ಶೇ 75 ಅನುದಾನ (ರೂ.ಗಳಲ್ಲಿ)	
1.	ಬಾಗಲಕೋಟೆ	40,000	6	75000	115000
2.	ಬೆಂಗಳೂರು (ನಗರ)	40,000	4	50000	90000
3.	ಬೆಂಗಳೂರು (ಗ್ರಾ)	40,000	4	50000	90000
4.	ಬೆಳಗಾಂ	40,000	10	125000	165000
5.	ಬಳ್ಳಾರಿ	40,000	7	87500	127500
6.	ಬೀದರ	40,000	5	62500	102500
7.	ಬಿಜಾಪೂರ	40,000	5	62500	102500
8.	ಚಾಮರಾಜನಗರ	40,000	4	50000	90000
9.	ಚಿಕ್ಕಬಳ್ಳಾಪುರ	40,000	6	75000	115000
10.	ಚಿಕ್ಕಮಗಳೂರು	40,000	7	87500	127500
11.	ಚಿತ್ರದುರ್ಗ	40,000	6	75000	115000
12.	ದಕ್ಷಿಣ ಕನ್ನಡ	40,000	5	62500	102500
13.	ದಾವಣಗೆರೆ	40,000	6	75000	115000
14.	ಧಾರವಾಡ	40,000	5	62500	102500
15.	ಗದಗ	40,000	5	62500	102500
16.	ಗುಲ್ಬರ್ಗಾ	40,000	7	87500	127500
17.	ಹಾಸನ	40,000	8	100000	140000
18.	ಹಾವೇರಿ	40,000	7	87500	127500
19.	ಕೊಡಗು	40,000	3	37500	77500
20.	ಕೋಲಾರ	40,000	5	62500	102500
21.	ಕೊಪ್ಪಳ	40,000	4	50000	90000
22.	ಮಂಡ್ಯ	40,000	7	87500	127500
23.	ಮೈಸೂರು	40,000	7	87500	127500
24.	ರಾಯಚೂರು	40,000	5	62500	102500

25.	ರಾಮನಗರ	40,000	4	50000	90000
26.	ಶಿವಮೊಗ್ಗ	40,000	7	87500	127500
27	ತುಮಕೂರು	40,000	10	125000	165000
28.	ಉಡುಪಿ	40,000	3	37500	77500
29.	ಉತ್ತರ ಕನ್ನಡ	40,000	11	137500	177500
30.	ಯಾದಗಿರಿ	40,000	3	37500	77500
ಒಟ್ಟು ಮೊತ್ತ		ರೂ. 12,00,000	176	ರೂ. 22,00,000	ರೂ.34,00,000

ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಬೆಂಗಳೂರು

ಅನುಬಂಧ–3

2010–11ನೇ ಸಾಲಿನ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಯೋಜನೆ ಅಡಿ ರಾಜ್ಯ ಮಟ್ಟದ ಕ್ರೀಡೆಗಳನ್ನು ಸಂಘಟಿಸಲು ಬಿಡುಗಡೆಗೊಳಿಸುವ ಶೇಕಡ 25ರ ಅನುದಾನದ ವಿವರ

ಕ್ರ.ಸಂ.	ಗುಂಪು	ಕ್ರೀಡೆಗಳ ಹೆಸರು	ಸ್ಪರ್ಧೆಗಳ ಸಂಘಟಿಸುವ ಜಿಲ್ಲೆ	ಮೊತ್ತ ರೂ.ಗಳಲ್ಲಿ
1.	I	ಅಥ್ಲೆಟಿಕ್ಸ್, ಬ್ಯಾಸ್ಕೆಟ್‌ಬಾಲ್, ಕುಸ್ತಿ, ಭಾರ ಎತ್ತುವ ಸ್ಪರ್ಧೆ	ಬೆಳಗಾಂ	50,000
2.	II	ಫುಟ್‌ಬಾಲ್, ಜಿಮ್ನಾಸ್ಟಿಕ್ಸ್, ಟೇಬಲ್ ಟೆನ್ನಿಸ್	ಚಾಮರಾಜನಗರ	50,000
3.	III	ವಾಲಿಬಾಲ್, ಕಬ್ಬಡಿ, ಖೋ–ಖೋ–, ಆರ್ಚರಿ	ಬೆಂಗಳೂರು ಗ್ರಾಮಾಂತರ	50,000
4.	IV	ಹಾಕಿ, ಹ್ಯಾಂಡ್‌ಬಾಲ್, ಜುಡೋ, ಸೈಕ್ಲಿಂಗ್, ಸ್ವಿಮ್ಮಿಂಗ್	ಮೈಸೂರು	50,000

ಪಿ.ಆರ್. 2790

ಎಂ.ಎಸ್. ಶಿವರಾಮ್
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ
ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ, ಬೆಂಗಳೂರು

ಕಂದಾಯ ಸಚಿವಾಲಯ

ವಿಷಯ : ಶ್ರೀ ಕೆ. ನರಸಿಂಹ, ವಜಾಗೊಂಡಿರುವ ಶಿರಸ್ತೇದಾರ್, ಸಿಂಧನೂರು ರವರು ಸಲ್ಲಿಸಿರುವ ಮೇಲ್ಮನವಿ ಕುರಿತು.

ಓದಲಾಗಿದೆ:
1. ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ ಇವರ ಆದೇಶ ಸಂಖ್ಯೆ:ಕಂದಾಯ/ಶಿಸ್ತು/101/2003–04, ದಿನಾಂಕ:17–01–2004.
2. ವಿಚಾರಣಾಧಿಕಾರಿಗಳು ಹಾಗೂ ಸಹಾಯಕ ಆಯುಕ್ತರು, ಲಿಂಗಸಗೂರು ಇವರ ವರದಿ ದಿನಾಂಕ:0–09–2004.
3. ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ಇವರ ಆದೇಶ ಸಂಖ್ಯೆ: ಕಂ/ಪ್ರಾಆಗು/ಶಿಸ್ತು/02/2006–07, ದಿನಾಂಕ:25–09–2007
4. ಶ್ರೀ ನರಸಿಂಹ, ವಜಾಗೊಂಡಿರುವ ಶಿರಸ್ತೇದಾರ್ ಇವರ ಮೇಲ್ಮನವಿ ದಿನಾಂಕ:23–10–2007.
5. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ ಇವರ ಪತ್ರ ಸಂಖ್ಯೆ:ಪಿಎಸ್‌ಸಿ/95/ಸಿಎನ್‌ಎಸ್/ 2009, ದಿನಾಂಕ:09–07–2010.

ಪ್ರಸ್ತಾವನೆ :

ಗುಲಬರ್ಗಾ ಕಂದಾಯ ವಿಭಾಗದ ಶಿರಸ್ತೇದಾರ್/ಉಪ ತಹಶೀಲ್ದಾರ್ ವೃಂದದ ನೌಕರರಾದ ಶ್ರೀ ಕೆ.ನರಸಿಂಹ ಇವರು [illegible] ತಾಲ್ಲೂಕು ಮತ್ತು ಜಿಲ್ಲೆಯ ರೂಪನಗೂಡಿ ನಾಡಕಛೇರಿಯಲ್ಲಿ ಉಪತಹಶೀಲ್ದಾರ್‌ರಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಕಾನೂನು [illegible] ಜರುಗಿಸಿ ಅಪರಾಧ ಹಾಗೂ ಕರ್ತವ್ಯ ಲೋಪಗಳನ್ನು ಎಸಗಿದ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ [illegible])

ನಿಯಮಗಳು 1957ರನ್ವಯ ಹಿಂದಿನ ಗುಲ್ಬರ್ಗ ವಿಭಾಗಾಧಿಕಾರಿಗಳು ದಿನಾಂಕ 04-09-2002 ರಂದು ಶ್ರೀ ಕೆ.ನರಸಿಂಹ ಇವರ ಮೇಲೆ 13 ಗುರುತರ ಆರೋಪಗಳನ್ನು ಹೊರಿಸಿ ಅನುಬಂಧ-1 ರಿಂದ 4 ರವರೆಗೆ ದೋಷಾರೋಪಣೆ ಪಟ್ಟಿ ಜಾರಿ ಮಾಡಿ, ಆರೋಪಿತರ ವಿರುದ್ದದ ಆರೋಪಗಳ ಸತ್ಯಾಸತ್ಯತೆ ಬಗ್ಗೆ ವಿಚಾರಣೆ ನಡೆಸಲು ಮೇಲೆ ಕ್ರಮ ಸಂಖ್ಯೆ 1ರಲ್ಲಿ ಓದಲಾದ ಆದೇಶದಲ್ಲಿ ಗುಲ್ಬರ್ಗ ಜಿಲ್ಲಾಧಿಕಾರಿಗಳು ತಮಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ನಾಗರೀಕ ಸೇವೆ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11(2)ರನ್ವಯ ಸಹಾಯಕ ಆಯುಕ್ತರು, ಲಿಂಗಸಗೂರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಮತ್ತು ಅದೇ ನಿಯಮಗಳ ನಿಯಮ 11(5)(ಸಿ) ರನ್ವಯ ಲಿಂಗಸಗೂರು ಸಹಾಯಕ ಆಯುಕ್ತರ ಕಛೇರಿಯ ಶಿರಸ್ತೇದಾರರನ್ನು "ಮಂಡನಾಧಿಕಾರಿ" ಯನ್ನಾಗಿ ನೇಮಕಗೊಳಿಸಿರುತ್ತಾರೆ. ಶ್ರೀ ಕೆ.ನರಸಿಂಹ ಇವರ ಮೇಲಿನ 13 ಆರೋಪಗಳು ಈ ಕೆಳಕಂಡಂತಿರುತ್ತವೆ.

ಆರೋಪ 1: ಬಳ್ಳಾರಿ ತಾಲ್ಲೂಕು, ಶಿಡಿಗಿನಮೊಳ ಗ್ರಾಮದ ಸ.ನಂ.602 ಹೆಚ್ ವಿಸ್ತೀರ್ಣ 2-49 ಎಕರೆ ಭೂಮಿ ಮ್ಯುಟೇಶನ್ ಮಾಡಲು ಪಿ.ಟಿ.ಸಿ.ಎಲ್. ಕಾಯ್ದೆ 1978 ಉಲ್ಲಂಘಿಸಿ ಆದೇಶಿಸಿರುವುದು.

ಆರೋಪ 2: ಬಳ್ಳಾರಿ ತಾಲ್ಲೂಕು, ಶಿಡಿಗಿನಮೊಳ ಗ್ರಾಮದ ಸ.ನ.616(ಎ)ನ ವಿಸ್ತೀರ್ಣ 1-50 ಎಕರೆ ರಸ್ತೆ ಪರಂಪೋಕ ಇದ್ದು, ಕಾಯ್ದೆ ಬಾಹಿರವಾಗಿ ಶ್ರೀ ಹೊನ್ನೂರವಲಿ ಎಂಬುವವರ ಹೆಸರು ಪಹಣಿ ಕಲಂ 12(2)ರಲ್ಲಿ ನೋಂದಾಯಿಸಲು ಆದೇಶಿಸಿರುವುದು.

ಆರೋಪ 3: ಬಳ್ಳಾರಿ ತಾಲ್ಲೂಕು, ಪಿಡಿಹಳ್ಳಿ ಗ್ರಾಮದ ಸ.ನಂ. 152ಬಿ ವಿಸ್ತೀರ್ಣ 0-80 ಎಕರೆ ಡಿಸ್ಟ್ರಿಕ್ಟ್ ಬೋರ್ಡ್ ಲ್ಯಾಂಡರ್ಸ್ ಜಮೀನಿನಲ್ಲಿ ಕಾಯ್ದೆ ಬಾಹಿರವಾಗಿ ವಾಲ್ಮೀಕಿ ಗೋಪಾಲ ಮತ್ತು ಬೈರಪ್ಪ ಇವರಿಗೆ ಹಕ್ಕು ಬದಲಾವಣೆಗೆ ಆದೇಶಿಸಿರುವುದು.

ಆರೋಪ 4: ಬಳ್ಳಾರಿ ತಾಲ್ಲೂಕು, ಚಂಡೂರು ಗ್ರಾಮದ ಸ.ನ.22(ಎ) ವಿಸ್ತೀರ್ಣ 2-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸ್ವೀಕರಿಸಿದ "ಜೆ" ಫಾರ್ಮನ್ನು ಸ್ಟ್ಯಾಂಪ್ ಡ್ಯೂಟಿ ಕಡಿಮೆ ಕಟ್ಟಿದ್ದಾರೆಂಬ ಕಾರಣ ನೀಡಿ ಅಧಿಕಾರ ದುರುಪಯೋಗಪಡಿಸಿಕೊಂಡು "ಜೆ" ಫಾರ್ಮ ಪ್ರಕಾರ ಹಕ್ಕು ಬದಲಾವಣೆ ತಿರಸ್ಕರಿಸಿರುವುದು.

ಆರೋಪ 5: ಬಳ್ಳಾರಿ ತಾಲ್ಲೂಕಿನ ಕುಂಟಿನಹಾಳ ಗ್ರಾಮದ ಸ.ನಂ.265 ವಿಸ್ತೀರ್ಣ 0-16 ಎಕರೆ ವಿ.ಎಸ್. ಇನಾಂ ಭೂಮಿ ಇದ್ದುದನ್ನು ಇನಾಂ ರದ್ದತಿಗೊಳಿಸದೇ ಕಾಯ್ದೆಬಾಹಿರವಾಗಿ ಹಕ್ಕು ಬದಲಾವಣೆಗೆ ಆದೇಶಿಸಿರುವುದು.

ಆರೋಪ 6: ಬಳ್ಳಾರಿ ತಾಲ್ಲೂಕಿನ ಅಸುಂಡಿ ಗ್ರಾಮದ ಸ.ನಂ.231, 232, ವಿಸ್ತೀರ್ಣ 1-11 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸ್ವೀಕರಿಸಿದ "ಜೆ" ಫಾರ್ಮನ್ನು ದಿನಾಂಕ 25-08-1996 ರಂದು ತಿರಸ್ಕರಿಸಿ ಮತ್ತು ದಿನಾಂಕ 30-03-1997ರಂದು ಮ್ಯುಟೇಷನ್ ಮಂಜೂರು ಆದೇಶ ನೀಡುವಾಗ ಕರ್ನಾಟಕ ಭೂಸುಧಾರಣೆ ಕಾಯ್ದೆ 1961ರ ಕಲಂ 80ರಡಿ ಸಹಾಯಕ ಆಯುಕ್ತರಿಗಿದ್ದ ಅಧಿಕಾರ ವ್ಯಾಪ್ತಿ ಮೀರಿ ಸದರಿ ಕಾಯ್ದೆ ಉಲ್ಲಂಘಿಸಿರುವುದು.

ಆರೋಪ 7: ಬಳ್ಳಾರಿ ತಾಲ್ಲೂಕು, ಅಸುಂಡಿ ಗ್ರಾಮದ ಸ.ನಂ.229 ವಿಸ್ತೀರ್ಣ 2-16 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೊದಲು ವರ್ಗಾವಣೆ ಅರ್ಜಿ ತಿರಸ್ಕರಿಸಿ ನಂತರ ದಿನಾಂಕ 30-03-1999ರಂದು ಆದೇಶ ನೀಡಿ ಮಂಜೂರಿ ಆದೇಶ ನೀಡಿ ಮಂಜೂರಿ ಮಾಡಿ ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು.

ಆರೋಪ 8: ಬಳ್ಳಾರಿ ತಾಲ್ಲೂಕು, ಶಿಡಿಗಿನಮೊಳ ಗ್ರಾಮದ ಸ.ನಂ.319 ವಿಸ್ತೀರ್ಣ 4-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಭೂನ್ಯಾಯ ಮಂಡಳಿ ಮುಂದು ನಮೂನೆ-11ರಲ್ಲಿ ಸಲ್ಲಿಸಿದ ಘೋಷಣೆ ಪತ್ರ ವಿಲೇ ಆಗುವವರೆಗೂ ಸ್ಥಗಿತಗೊಳಿಸಬೇಕಾದ ಹಕ್ಕುಬದಲಾವಣೆಯನ್ನು ಮಂಜೂರಿ ಮಾಡಿ ಕರ್ತವ್ಯಲೋಪ ಎಸಗಿರುವುದು.

ಆರೋಪ 9: ಬಳ್ಳಾರಿ ತಾಲ್ಲೂಕು, ಚೆಳ್ಳಗುರ್ಕಿ ಗ್ರಾಮದ ಸ. ನಂ. 41ಡಿ ವಿಸ್ತೀರ್ಣ 16-80 ಎಕರೆ ಜಮೀನನ್ನು ದಿನಾಂಕ 25-03-1999ರ ನಡವಳಿ ಪ್ರಕಾರ ಟಿ. ಮಲ್ಲನಗೌಡ ಇವರಿಗೆ ಹಕ್ಕುಬದಲಾವಣೆ ಪತ್ರ ಪರಿಶೀಲಿಸದೇ ಮಂಜೂರು ಮಾಡಿದ್ದು, ಇದೊಂದು ಕಾನೂನು ಬಾಹಿರ ಪ್ರಕರಣವಿದ್ದು, ಭೂಸುಧಾರಣೆ ಕಾಯ್ದೆ 1961ರ ಕಲಂ 80 ರನ್ವಯ ಸಹಾಯಕ ಆಯುಕ್ತರಿಗಿದ್ದ ಅಧಿಕಾರವನ್ನು ಉಲ್ಲಂಘಿಸಿರುತ್ತೀರೆಂದು ಆಪಾದಿಸಲಾಗಿದೆ.

ಆರೋಪ 10: ಬಳ್ಳಾರಿ ತಾಲ್ಲೂಕಿನ ಚೆಳ್ಳಗುರ್ಕಿ ಗ್ರಾಮದ ಸ. ನಂ. 10 ಬಿ, 54 ಬಿ, 65, 66, 81ಎ, 84ಎ, 85, 86ಎ, 88ಬಿ/2, 89ಬಿ/2,89ರ ವಿಸ್ತೀರ್ಣ 86-79 ಎಕರೆ ಜಮೀನು ಶ್ರೀ ಮೋಕಾ ದೊಡ್ಡರುದ್ರಣ್ಣ ತಂದೆ ವೀರಭದ್ರಪ್ಪ ಚೆಳ್ಳಗುರ್ಕಿ, ಇವರ ಪತ್ನಿಯರ ಹೆಸರಿನಲ್ಲಿರುವುದರಿಂದ ಸದರಿಯವರು ಏಕೈಕ ಕುಟುಂಬದವರೆಂದು ಪರಿಗಣಿಸಿ ಹಿಡುವಳಿಯ ಘೋಷಣಾ ಅರ್ಜಿಯನ್ನು ಭೂ ನ್ಯಾಯ ಮಂಡಳಿಗೆ ಸಲ್ಲಿಸಲಾರದಕ್ಕೆಂದು ಮೇಲಾಧಿಕಾರಿಗಳಿಗೆ ವರದಿಯನ್ನು ಸಲ್ಲಿಸಬಾರದೇಕೆಂಬ ಅಂಶಕ್ಕೆ ವಿವರಣೆ ಕೇಳಿ ದಿ: 2-12-98 ಮತ್ತು ದಿ: 28-01-1999 ನೋಟೀಸು ನೀಡಿದ್ದಕ್ಕೆ ವಿವರಣೆ ಒಪ್ಪಿಕೊಂಡು ಪರಿಶೀಲನೆಯನ್ನು ರದ್ದುಪಡಿಸಿ ಸಹಾಯಕ ಆಯುಕ್ತರು, ಬಳ್ಳಾರಿ ಇವರ ಅಧಿಕಾರ ಚಲಾಯಿಸಿ ಅಧಿಕಾರ ದುರುಪಯೋಗವಾಗಿದೆ.

ಆರೋಪ 11: ಶ್ರೀ [illegible]ದ್ರರೆಡ್ಡಿ, ತಂದೆ ದಿವಂಗತ ವೆಂಕನಗೌಡ ಜೋಳದರಾಶಿ ಗ್ರಾಮ ಇವರ ಕುಟುಂಬದ ಎಲ್ಲಾ ಸದಸ್ಯರು ಭಾಗ ಮಾಡಿಕೊಂಡ ದಸ್ತಾವೇಜು ಸಂಖ್ಯೆ : 5672/91, ದಿನಾಂಕ 05-02-2001ನ್ನು ಭೂನ್ಯಾಯ ಮಂಡಳಿ ಬಳ್ಳಾರಿಗೆ [illegible] ಉಲ್ಲಂಘನೆ ಮಾಡಿರುವುದು ಮತ್ತು ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು

ಆರೋಪ 12: ಶ್ರೀಮತಿ ಪಾರ್ವತಮ್ಮ ಗಂಡ ಕರಣಂ ವೀರಭದ್ರಗೌಡ ಇವರ ಪುತ್ರಿಯರಾದ ಶ್ರೀಮತಿ ಲಕ್ಷ್ಮಿದೇವಮ್ಮ, ಗಂಡ ಭೀಮನಗೌಡ ಹಾಗೂ ಶ್ರೀಮತಿ ಮಹಾದೇವಮ್ಮ ಗಂಡ ಶಂಕರಗೌಡ, ಇವರ ಹೆಸರಿನಲ್ಲಿ ಸ. ನಂ. 220ಎ/1 ವಿಸ್ತೀರ್ಣ 6-97 ಎಕರೆ ಜಮೀನನ್ನು ದಿನಾಂಕ 21-09-2001 ರಂದು ಆದೇಶ ನೀಡಿ ವರ್ಗಾವಣೆ ಮಾಡಿದ್ದು, ಸದರಿ ಭೂಮಿ ಆಶ್ರಯ ಯೋಜನೆ ಅಡಿ ಭೂಸ್ವಾಧೀನವಾಗಿದ್ದ ಬಗ್ಗೆ ತಿಳುವಳಿಕೆ ಇದ್ದೂ, ಹಕ್ಕು ಬಿಡುಗಡೆ ಪತ್ರದಂತೆ ಕ್ರಮ ವಹಿಸಿ ಕರ್ತವ್ಯಲೋಪವೆಸಗಿರುವುದು.

ಆರೋಪ 13: ಬಳ್ಳಾರಿ ಸಹಾಯಕ ಆಯುಕ್ತರು ಹೊರಡಿಸಿದ ಆದೇಶ ಸಂಖ್ಯೆ : ಕಂ/ಅಪೀಲು/18/2001-02, ದಿನಾಂಕ 23-03-2002 ರಲ್ಲಿ ಉಪತಹಶೀಲ್ದಾರರು, ದಿನಾಂಕ 5-01-1998 ರಂದು ಚಂಡೂರು ಗ್ರಾಮದ ಸ. ನಂ. : 22ಎ ವಿಸ್ತೀರ್ಣ 2-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮಾಡಿದ ಆದೇಶ ರದ್ದುಪಡಿಸಿ ವಿವಾದಿತ ಜಮೀನಿನ ಹಕ್ಕು ಬದಲಾವಣೆಯನ್ನು ಅರ್ಜಿದಾರರಾದ ಶ್ರೀ ಎಂ. ತಿಪ್ಪಾರೆಡ್ಡಿ ಇವರ ಹೆಸರಿಗೆ ಮಾಡಿದ ಆದೇಶ ರದ್ದುಪಡಿಸಲು ಕೋರಿ ಕರ್ನಾಟಕ ಭೂ ಕಂದಾಯ ಕಾಯಿದೆ ಕಲಂ 128 ಮತ್ತು 129 ರಂತೆ ವಿಚಾರಣೆ ನಡೆಸದೇ ಅಧಿಕಾರ ವ್ಯಾಪ್ತಿ ಮೀರಿ ನಡೆದುಕೊಂಡಿರುವುದು.

ಶ್ರೀ ಕೆ.ನರಸಿಂಹ ಇವರ ಮೇಲಿನ ಆರೋಪಗಳು ಕುರಿತು ವಿಚಾರಣೆ ನಡೆಸಿ ಮೇಲೆ ಕ್ರಮ ಸಂಖ್ಯೆ 2 ರಲ್ಲಿ ಓದಲಾದ ವಿಚಾರಣಾ ವರದಿ ಸಲ್ಲಿಸಿದ ವಿಚಾರಣಾಧಿಕಾರಿಗಳು ಆರೋಪಿತರ ಮೇಲಿನ ಎಲ್ಲಾ ಆರೋಪಗಳು ಸಾಬೀತಾಗಿವೆಂದು ಅಭಿಪ್ರಾಯ ಪಡುತ್ತಾ, ಸದರಿ ನೌಕರರು ತಮ್ಮ ಅಧಿಕಾರದ ವ್ಯಾಪ್ತಿ ಮೀರಿ ಪಿಟಿಸಿಎಲ್ ಕಾಯ್ದೆ ಕಲಂ 5, ಕರ್ನಾಟಕ ಭೂ ಕಂದಾಯ ಕಲಂ 108ಡಿ, ಕರ್ನಾಟಕ ಮುದ್ರಾಂಕ ಕಾನೂನು 1957, ಕರ್ನಾಟಕ ಗ್ರಾಮಾಧಿಕಾರಿಗಳ ಹುದ್ದೆ ರದ್ದತಿ ಕಾಯ್ದೆ 1961, ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಹಾಗೂ ಕರ್ನಾಟಕ ಭೂ ಕಂದಾಯ ಕಾನೂನು 1964 ಮತ್ತು ನಿಯಮಗಳು 1966ರ ವಿವಿಧ ಕಲಂಗಳಡಿಯಲ್ಲಿ ಅವಕಾಶವಿರದ ಅಧಿಕಾರಗಳನ್ನು ಚಲಾಯಿಸಿ ನಿಯಮಗಳ ಸ್ಪಷ್ಟ ಉಲ್ಲಂಘನೆ ಮಾಡುವ ಮೂಲಕ ಕರ್ತವ್ಯಲೋಪ ಎಸಗಿ ಅಧಿಕಾರ ದುರುಪಯೋಗಿಸಿಕೊಂಡಿರುವುದು ಸಾಬೀತಾಗಿರುವುದಾಗಿ ದೃಢಪಡಿಸಿರುತ್ತಾರೆ.

ವಿಚಾರಣಾಧಿಕಾರಿಗಳ ವಿಚಾರಣಾ ವರದಿಯ ನಿರ್ಣಯಗಳ ಬಗ್ಗೆ ಆರೋಪಿ ನೌಕರರಾದ ಶ್ರೀ ಕೆ.ನರಸಿಂಹ ಇವರಿಗೆ 2ನೇ ಕಾರಣ ಕೇಳುವ ನೋಟೀಸ್ ನೀಡಿ ಅವರಿಂದ ಪಡೆಯಲಾದ ಸಮಜಾಷಿಯಡಿಯಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುವಂತೆ ಯಾವುದೇ ಅಂಶಗಳನ್ನು ಆರೋಪಿತ ನೌಕರರು ಪ್ರಸ್ತುತ ಪಡಿಸದಿರುವುದನ್ನು ಅವಲೋಕಿಸಿ, ವಿವಿಧ ಕಾನೂನುಗಳನ್ನು ಉಲ್ಲಂಘಿಸಿ ಗುರುತರ ಕರ್ತವ್ಯಲೋಪ ಎಸಗುವ ಮೂಲಕ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಶ್ರೀ ಕೆ.ನರಸಿಂಹ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ 8(ಝು) ರನ್ವಯ ಸರ್ಕಾರಿ ಸೇವೆಯಿಂದ ವಜಾಗೊಳಿಸಿ ಮೇಲೆ ಕ್ರಮ ಸಂಖ್ಯೆ 3ರಲ್ಲಿ ಓದಲಾದ ಆದೇಶದಲ್ಲಿ ಗುಲ್ಬರ್ಗಾ ಪ್ರಾದೇಶಿಕ ಆಯುಕ್ತರು (ಪ್ರಭಾರ) ಆದೇಶಿಸಿರುತ್ತಾರೆ.

ಸರ್ಕಾರಿ ಸೇವೆಯಿಂದ ವಜಾಗೊಳಿಸಲಾದ ಗುಲ್ಬರ್ಗ ಪ್ರಾದೇಶಿಕ ಆಯುಕ್ತರ ಆದೇಶದ ವಿರುದ್ಧ ವಜಾಗೊಂಡ ನೌಕರರಾದ ಶ್ರೀ ಕೆ. ನರಸಿಂಹ ಇವರು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ-18ರನ್ವಯ ಸರ್ಕಾರಕ್ಕೆ ಸಲ್ಲಿಸಿರುವ ಮೇಲೆ ಕ್ರಮ ಸಂಖ್ಯೆ 4ರಲ್ಲಿ ಓದಲಾದ ಮೇಲ್ಮನವಿಯಲ್ಲಿ ಶ್ರೀ ಕೆ.ನರಸಿಂಹ ಇವರು ಶಿರಸ್ತೇದಾರ ವೃಂದದ ನೌಕರರಿಗೆ ಶಿಸ್ತು ಪ್ರಾಧಿಕಾರಿಯಾದ ಗುಲ್ಬರ್ಗ ಪ್ರಾದೇಶಿಕ ಆಯುಕ್ತರ ಪ್ರಭಾರದಲ್ಲಿದ್ದ ಅಧಿಕಾರಿಗೆ ದಂಡನೆ ವಿಧಿಸಲು ಅಧಿಕಾರವಿರುವುದಿಲ್ಲವೆಂದು ಆಕ್ಷೇಪಿಸಿದ್ದನ್ನು ಪರಿಶೀಲಿಸಲಾಯಿತು. ಈ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಸೇವಾ ನಿಯಮಗಳ ಅಭಿಪ್ರಾಯ ಪಡೆಯಲಾಗಿ ಈ ಕೆಳಕಂಡಂತಿದೆ.

"ಈ ಕುರಿತಂತೆ ನ್ಯಾಯಮೂರ್ತಿ ಶ್ರೀ ಎಂ. ರಾಮಾಜೋಯ್ಸ್ ಅವರ "ಖಜಡಿತುಛಿಜ ಣಟಿಜಜಡಿ ಣುಜ ಖಣಚಿಣಜ" ನ (೨೩) ನೇ ಅಧ್ಯಾಯದಲ್ಲಿ ಕೆಳಕಂಡಂತೆ ವಿವರಿಸಲಾಗಿದೆ.

> "Power to act as a disciplinary authority is a statutory power. An officer placed in current charge of the duties of a post cannot exercise the statutory power vested in the disciplinary authority and therefore is not competent to act as the disciplinary authority"

ಈ ಕಾರಣಕ್ಕಾಗಿ ಪ್ರಸ್ತುತ ಪ್ರಕರಣದಲ್ಲಿ ಹೊರಡಿಸಿರುವ ದಂಡನಾದೇಶವು ಲೀಗಲಿ ವ್ಯಾಲಿಡ್ (ಐಜಗಿಚಿಟಟಥಿ ತಿಚಿಟಜ) ಆಗಿರುವುದಿಲ್ಲ. ಆದ್ದರಿಂದ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಾವಳಿಯ ನಿಯಮ 26ರಡಿಯಲ್ಲಿ ಈ ದಂಡನಾದೇಶವನ್ನು ಪುನರ್ ಪರಿಶೀಲಿಸಬಹುದಾಗಿದೆ".

ಈ ಕಾರಣಕ್ಕಾಗಿ ಪ್ರಸ್ತುತ ಪ್ರಕರಣದಲ್ಲಿ ಶ್ರೀ ಕೆ.ನರಸಿಂಹ ಇವರಿಗೆ ಪ್ರಾದೇಶಿಕ ಆಯುಕ್ತರು (ಪ್ರಭಾರ) ಗುಲ್ಬರ್ಗ ಇವರು ವಿಧಿಸಿದ ದಂಡನಾದೇಶವು ಕಾನೂನಿನ ಅನುಸಾರ ಅಸಿಂಧು ಆದೇಶವಾಗಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ನೌಕರರ ವಿರುದ್ಧ ಮಾಡಲಾದ ಎಲ್ಲಾ ಗುರುತರ ಆರೋಪಗಳು ಸಾಬೀತಾಗಿರುವುದು ಸ್ಪಷ್ಟವಾಗಿರುವ ಮೇರೆಗೆ ಶ್ರೀ ಕೆ.ನರಸಿಂಹ ಇವರು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ-18 ರಡಿಯಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ಸರ್ಕಾರಕ್ಕೆ ಸ್ವಾಭಾವಿಕವಾಗಿ ಪ್ರದತ್ತವಾದ ಅಧಿಕಾರದನ್ವಯ ಅದೇ ನಿಯಮಗಳ ನಿಯಮ-26ರಡಿಯಲ್ಲಿ ಪುನರ್ ಪರಿಶೀಲಿಸಿ, ರಾಜ್ಯ ಸರ್ಕಾರ ಒಂದು ಮೇಲ್ಮನವಿ ಬಗ್ಗೆ ಆದೇಶ ಮಾಡುವ ಅಥವಾ ನಿರೀಕ್ಷಣೆಯಲ್ಲಿರುವ ಅಥವಾ ಪುನರಾವಲೋಕನೆಯಲ್ಲಿರುವ ಆದೇಶವನ್ನು ಮಾರ್ಪಡಿಸುವ ಬಗೆಗಿನ ಪ್ರಸ್ತಾವನೆಗೆ ಕರ್ನಾಟಕ ಲೋಕಸೇವಾ ಆಯೋಗ (ಸಮಾಲೋಚನಾ) ವಿನಿಮಯಗಳು 2000ರ ವಿನಿಯಮ 5(1)(ಎ)ರಂತೆ ಅವಶ್ಯಕವಾದ ಸಹಮತಿಯನ್ನು ಕೋರಿ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾದ ಪ್ರಸ್ತಾವನೆಯನ್ನು ಆಯೋಗವು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರದ ಪ್ರಸ್ತಾವನೆಗೆ ಸಹಮತಿ ನೀಡಿದೆ ಎಂದು ಮೇಲೆ ಕ್ರಮ ಸಂಖ್ಯೆ 5ರ ಪತ್ರದಲ್ಲಿ ತಿಳಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 590 ಬಿಎಂಎಂ 2007, ಬೆಂಗಳೂರು, ದಿನಾಂಕ:18ನೇ ಅಕ್ಟೋಬರ್ 2010

ಪ್ರಸ್ತಾವನೆ ಭಾಗದಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ.ನರಸಿಂಹ, ವಜಾಗೊಂಡ ಶಿರಸ್ತೇದಾರ ಇವರು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ-18ರನ್ವಯ ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ 23-10-2007ರ ಮೇಲ್ಮನವಿಯನ್ನು ಅದೇ ನಿಯಮಗಳ ನಿಯಮ-26 ರಡಿಯಲ್ಲಿ ಪುನರ್ ಪರಿಶೀಲಿಸಿ, ಗುಲ್ಬರ್ಗ ಪ್ರಾದೇಶಿಕ ಆಯುಕ್ತರು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು-1957ರ ನಿಯಮ 8(iii)ರಂತೆ ತಮ್ಮ ಆದೇಶ ಸಂಖ್ಯೆ:ಕಂ/ಪ್ರಾಆಗು/ಶಿಸ್ತು/02-06-07, ದಿನಾಂಕ 25-09-2007 ರನ್ವಯ ಶ್ರೀ ನರಸಿಂಹ, ಶಿರಸ್ತೇದಾರ ಇವರನ್ನು ಸರ್ಕಾರಿ ಸೇವೆಯಿಂದ ವಜಾಗೊಳಿಸಿ ವಿಧಿಸಿದ ದಂಡನಾದೇಶವನ್ನು ಪುನರಾವಲೋಕಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು-1958ರ ನಿಯಮ 214(1)(ಎ) ರನ್ವಯ ಸದರಿ ನೌಕರರ ಪೂರ್ಣ ನಿವೃತ್ತಿ ವೇತನವನ್ನು ಶಾಶ್ವತವಾಗಿ ತಡೆಹಿಡಿದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ಲೀಲಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-ಎ)

ಪಿ.ಆರ್.2791

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಒಂದು ಸಂಖ್ಯಾತಿರಿಕ್ತ (ಸೂಪರ್ ನ್ಯೂಮರರಿ) ನಿರ್ದೇಶಕರ ಹುದ್ದೆಯನ್ನು ಸೃಜಿಸುವ ಬಗ್ಗೆ.

ಓದಲಾಗಿದೆ: 1. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:9031/2005ರಲ್ಲಿ ದಿನಾಂಕ: 23-11-2009ರಂದು ಮಾಡಿರುವ ಆದೇಶ

2. ಡಾ: ಆರ್. ಶ್ರೀರಂಗಮ್ಮ, ಇವರ ಮನವಿ ದಿನಾಂಕ:08-01-2010

ಪ್ರಸ್ತಾವನೆ :

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಸಂಖ್ಯೆ ಆಕುಕ 57 ಎಂಎಂಸಿ 99 ದಿನಾಂಕ 30-07-1999ರಲ್ಲಿ, ಡಾ: ಆರ್. ಶ್ರೀರಂಗಮ್ಮ, ನಿವೃತ್ತ ಪ್ರಾಂಶುಪಾಲರು, ಬೆಂಗಳೂರು ವೈದ್ಯಕೀಯ ಮಹಾ ವಿದ್ಯಾಲಯ, ಬೆಂಗಳೂರು ಇವರಿಗೆ ಜೇಷ್ಠತೆಯಲ್ಲಿ ಇವರಿಗಿಂತ ಕಿರಿಯರಾಗಿರುವ ಡಾ:ಎಂ.ವಿ. ರಾಮಣ್ಣ ನಿವೃತ್ತ ವೈದ್ಯಕೀಯ ಶಿಕ್ಷಣ ನಿರ್ದೇಶಕರು ಹಾಗೂ ಸರ್ಕಾರದ ಅಪರ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ ಇವರಿಗೆ ಪ್ರಾಂಶುಪಾಲರ ಹುದ್ದೆಗೆ ಮುಂಬಡ್ತಿ ನೀಡಿರುವ ದಿನಾಂಕ ಅಂದರೆ 29-07-1991 ರಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸೇವಾ (ಆರ್‌ಪಿಪಿ) ನಿಯಮಾವಳಿ 1978ರ ನಿಯಮ 2(2)ರ ಮೇರೆಗೆ ಪ್ರಾಂಶುಪಾಲರ ಹುದ್ದೆಗೆ ಸ್ಥಾನಾಪನ್ನ ಬಡ್ತಿ ನೀಡಲಾಗಿದೆ. ಡಾ: ಆರ್. ಶ್ರೀರಂಗಮ್ಮ ಇವರಿಗಿಂತ ಡಾ: ಎಂ.ವಿ. ರಾಮಣ್ಣ ಇವರು ಜೇಷ್ಠತೆಯಲ್ಲಿ ಕಿರಿಯರಾಗಿದ್ದು, ಸದರಿಯವರನ್ನು ದಿನಾಂಕ 01-11-1992 ರಿಂದ ಜಾರಿಗೆ ಬರುವಂತೆ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ನೇಮಕಾತಿ ಮಾಡಲಾಗಿದೆ. ಅದರಂತೆ ತಮಗೂ ಸಹ ನಿರ್ದೇಶಕರ ಹುದ್ದೆಗೆ ಪೂರ್ವಾನ್ವಯವಾಗಿ ಬಡ್ತಿ ನೀಡುವಂತೆ ಕೋರಿದ್ದುದನ್ನು ಪರಿಗಣಿಸದೇ ಇದ್ದುದರಿಂದ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ 9031/2005 ಸಲ್ಲಿಸಿ ಪ್ರಶ್ನಿಸಿದ್ದರು.

ಕರ್ನಾಟಕ ಆಡಳಿತ ನ್ಯಾಯಮಂಡಳಿಯು, ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಡಾ: ಆರ್. ಶ್ರೀರಂಗಮ್ಮ ಇವರಿಗೆ ಡಾ: ಎಂ.ವಿ. ರಾಮಣ್ಣ ಇವರಿಗೆ ವೈದ್ಯಕೀಯ ಶಿಕ್ಷಣ ನಿರ್ದೇಶಕರಾಗಿ ಬಡ್ತಿ ನೀಡಿದ ದಿನಾಂಕದಿಂದಲೇ ಪೂರ್ವಾನ್ವಯವಾಗಿ ನಿರ್ದೇಶಕರ ಹುದ್ದೆಗೆ ಬಡ್ತಿಯನ್ನು ನೀಡುವಂತೆ ಆದೇಶಿಸಿದೆ. ಮೇಲೆ (2)ರಲ್ಲಿ ಓದಲಾದ ಮನವಿಯಲ್ಲಿ, ಡಾ: ಆರ್. ಶ್ರೀರಂಗಮ್ಮ ಇವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶ ಉಲ್ಲೇಖಿಸಿ ತಮಗೂ ವೈದ್ಯಕೀಯ ಶಿಕ್ಷಣ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡುವಂತೆ ಕೋರಿರುತ್ತಾರೆ. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ, ಡಾ: ಎಂ. ವಿ. ರಾಮಣ್ಣ ಅವರಿಗೆ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ನೇಮಕಾತಿಯನ್ನು ಮಾಡಿದ ದಿನಾಂಕ:01-11-1992 ರಿಂದ ಡಾ: ಆರ್. ಶ್ರೀರಂಗಮ್ಮ ಇವರಿಗೂ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಿ ನೇಮಕಾತಿ ಮಾಡಬೇಕಾದ ಅವಶ್ಯಕತೆ ಉದ್ಭವಿಸಿರುವುದರಿಂದ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ರೂ.4550-5600ಗಳ ವೇತನ ಶ್ರೇಣಿಯ ಒಂದು ಸಂಖ್ಯಾತಿರಿಕ್ತ ನಿರ್ದೇಶಕರ ಹುದ್ದೆಯನ್ನು ದಿನಾಂಕ 01-11-1992 ರಿಂದ ಡಾ: ಆರ್. ಶ್ರೀರಂಗಮ್ಮ ವಯೋನಿವೃತ್ತಿಯ ಮೇರೆಗೆ ನಿವೃತ್ತಿ ಹೊಂದಿದ ದಿನಾಂಕ 31-12-1994ರವರೆಗೆ ಸೃಜಿಸಬೇಕಾಗಿರುತ್ತದೆ.

ಈ ವಿಷಯವನ್ನು ಕೂಲಂಕಶವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 28 ಸೇಇಮು 2010 ಬೆಂಗಳೂರು, ದಿನಾಂಕ: 27ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ದಿನಾಂಕ 01-11-1992 ರಿಂದ 31-12-1994 ರವರೆಗೆ ರೂ.4550-5600ಗಳ ವೇತನ ಶ್ರೇಣಿಯ ಒಂದು ಸಂಖ್ಯಾತಿರಿಕ್ತ ವೈದ್ಯಕೀಯ ಶಿಕ್ಷಣ ನಿರ್ದೇಶಕರ ಹುದ್ದೆಯನ್ನು ಸೃಜಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 1169 ಸೇವೆಗಳು-1 2010, ದಿನಾಂಕ 06-08-2010ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಪಿ.ಆರ್.2792

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
(ಸೇವೆಗಳು-3)

ವಸತಿ ಸಚಿವಾಲಯ

ವಿಷಯ : ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ವಇ 16 ಹೆಚ್‌ಎಹೆಚ್ 2010, ದಿನಾಂಕ 27-03-2010.

2) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/6069/2010, ದಿನಾಂಕ 05-10-2010.

ಪ್ರಸ್ತಾವನೆ :

ಕಳೆದ ವರ್ಷ ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ನೆರೆಹಾವಳಿಯಿಂದ ಮನೆಗಳನ್ನು ಕಳೆದುಕೊಂಡವರಿಗೆ "ಆಸರೆ" ಯೋಜನೆಯಡಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕು ನಂದಗೇರಿ ಗ್ರಾಮದಲ್ಲಿ 147 ಮನೆಗಳನ್ನು ನಿರ್ಮಿಸಲು ಕರ್ನಾಟಕ ಗೃಹ ಮಂಡಳಿಗೆ ವಹಿಸಲಾಗಿತ್ತು. ಉದ್ದೇಶಿತ ಆಸರೆ ಮನೆಗಳ ಕಾಮಗಾರಿಯ ಪ್ರದೇಶವು ಕರ್ನಾಟಕ ಗೃಹ ಮಂಡಳಿ, ಬಿಜಾಪುರ ಉಪ ವಿಭಾಗಕ್ಕೆ ದೂರದಲ್ಲಿರುವುದರಿಂದ, ಕಾರ್ಯ ನಿರ್ವಾಹಣಾಧಿಕಾರಿಗಳು, ಗ್ರಾಮೀಣ ನಿರ್ಮಿತಿ ಕೇಂದ್ರ ಸಿಂಧಗಿ ಇವರಿಗೆ ವರ್ಗಾಯಿಸಿಕೊಡುವಂತೆ ಆಯುಕ್ತರು ಕರ್ನಾಟಕ ಗೃಹ ಮಂಡಳಿ ಇವರು ಕೋರಿರುತ್ತಾರೆ. ಮನೆಗಳ ನಿರ್ಮಾಣ ಕೈಗೊಳ್ಳಲು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ವಇ 16 ಹೆಚ್‌ಎಹೆಚ್2010, ಬೆಂಗಳೂರು, ದಿನಾಂಕ: 28ನೇ ಅಕ್ಟೋಬರ್ 2010

ನೆರೆಹಾವಳಿ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸುವುದಕ್ಕಾಗಿ ಕರ್ನಾಟಕ ಗೃಹ ಮಂಡಳಿಗೆ ವಹಿಸಿಕೊಟ್ಟ ಬಿಜಾಪುರ ಸಿಂಧಗಿ ತಾಲ್ಲೂಕು ನಂದಗೇರಿ ಗ್ರಾಮದ 147 ಆಸರೆ ಮನೆಗಳ ನಿರ್ಮಾಣ ಕಾರ್ಯವನ್ನು ಕಾರ್ಯನಿರ್ವಾಹಣಾಧಿಕಾರಿಗಳು, ಗ್ರಾಮೀಣ ನಿರ್ಮಿತಿ ಕೇಂದ್ರ ಸಿಂಧಗಿ ಇವರಿಂದ ನಿರ್ವಹಿಸಲು, ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ತಕ್ಷಣದಿಂದ ಜಾರಿಗೆ ಬರುವಂತೆ ವರ್ಗಾಯಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ

ಪಿ.ಆರ್. 2793

ಯುವಜನ ಸೇವಾ ಸಚಿವಾಲಯ

ವಿಷಯ : ಶ್ರೀ ಕೆ. ಶ್ರೀಧರ್, ಏರ್‌ಕ್ರಾಫ್ಟ್‌ಹ್ಯಾಂಡ್, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು, ಇವರ ಪತ್ನಿಯ ವೈದ್ಯಕೀಯ ವೆಚ್ಚವನ್ನು ಹಿಂಬರಿಸುವ ಬಗ್ಗೆ.

ಓದಲಾಗಿದೆ : 1) ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು, ಅವರ ಪತ್ರಸಂಖ್ಯೆ: ಎಫ್‌ಟಿಎಸ್ 7 ಇಎಸ್‌ಟಿ/90-91, ದಿನಾಂಕ: 27-04-2010.

2) ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಅವರ ಪತ್ರ ಸಂಖ್ಯೆ: ಎಂಡಿಎ (ಬೆಂ1) 1112/09-10, ದಿನಾಂಕ: 19-04-2010.

ಪ್ರಸ್ತಾವನೆ :

ನಿರ್ದೇಶಕರು, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು, ಇವರು ಮೇಲೆ ಓದಲಾದ ದಿನಾಂಕ: 27-04-2010 ಪತ್ರದಲ್ಲಿ ಶ್ರೀ ಕೆ. ಶ್ರೀಧರ್, ಏರ್‌ಕ್ರಾಫ್ಟ್ ಹ್ಯಾಂಡ್, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು, ಇವರ ಪತ್ನಿ ಶ್ರೀಮತಿ ಪ್ರಭಾವತಿರವರು ಹೆರಿಗೆಗಾಗಿ ಸರ್ಕಾರದಿಂದ ಮಾನ್ಯತೆ ಪಡೆಯದ ಮೆಡಿಸ್ಕೋಪ್ ಆಸ್ಪತ್ರೆ ಪ್ರೈವೇಟ್ ಲಿಮಿಟೆಡ್, ನಂ 11, ಪಿಳ್ಳಣ ಗಾರ್ಡನ್, 3ನೇ ಹಂತ, ಬೆಂಗಳೂರು, ಇಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದು, ಈ ಬಗ್ಗೆ ಸಂಪರ್ಕಿಸಲ್ಪಟ್ಟ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಅವರು ಈ ಪ್ರಕರಣದಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಪಕ್ಷದಲ್ಲಿ ರೂ. 4,000/- ವೆಚ್ಚವಾಗುತ್ತಿತ್ತೆಂದು ತಿಳಿಸಿ, ಸದರಿ ಮೊತ್ತವನ್ನು ಮರುಪಾವತಿಸಲು ಶಿಫಾರಸ್ಸು ಮಾಡಿರುವುದರಿಂದ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿ 1963ರ ನಿಯಮ 14 ಅನ್ನು ಸಡಿಲಿಸಿ, ಸದರಿ ಮೊತ್ತವನ್ನು ಹಿಂಬರಿಸಲು ಸರ್ಕಾರದ ಮಂಜೂರಾತಿ ಕೋರಿದ್ದಾರೆ. ಈ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 14 ಯುರಾಸೇ 10, ಬೆಂಗಳೂರು, ದಿನಾಂಕ: 28ನೇ ಅಕ್ಟೋಬರ್ 2010

ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು 1963ರ ನಿಯಮ 31ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅದೇ ನಿಯಮಾವಳಿಯ ನಿಯಮ 14ನ್ನು ಸಡಿಲಿಸಿ ಶ್ರೀ ಕೆ. ಶ್ರೀಧರ್, ಏರ್‌ಕ್ರಾಫ್ಟ್ ಹ್ಯಾಂಡ್, ಸರ್ಕಾರಿ ವೈಮಾನಿಕ ತರಬೇತಿ ಶಾಲೆ, ಬೆಂಗಳೂರು, ಇವರ ಪತ್ನಿ ಶ್ರೀಮತಿ ಪ್ರಭಾವತಿರವರು ಹೆರಿಗೆಗಾಗಿ ಸರ್ಕಾರದಿಂದ ಮಾನ್ಯತೆ ಪಡೆಯದ ಮೆಡಿಸ್ಕೋಪ್ ಆಸ್ಪತ್ರೆ ಪ್ರೈವೇಟ್ ಲಿಮಿಟೆಡ್, ನಂ 11, ಪಿಳ್ಳಣ್ಣ ಗಾರ್ಡನ್, 3ನೇ ಹಂತ, ಬೆಂಗಳೂರು, ಇಲ್ಲಿ ಒಳರೋಗಿಯಾಗಿ ಪಡೆದ ಚಿಕಿತ್ಸೆಗೆ ವೆಚ್ಚ ಮಾಡಿದ ಮೊತ್ತದ ಪೈಕಿ ರೂ. 4,000/- (ನಾಲ್ಕು ಸಾವಿರ ರೂಪಾಯಿಗಳು) ಗಳನ್ನು ಮಾತ್ರ ವೈದ್ಯಕೀಯ ವೆಚ್ಚವಾಗಿ ಮರು ಪಾವತಿಸಲು ಈ ಮೂಲಕ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಸದರಿ ಮೊತ್ತವನ್ನು ಪಾವತಿ ಮಾಡುವ ಮುನ್ನ ಈ ವೆಚ್ಚವನ್ನು ಹಿಂಪಡೆಯಲು ಹಿಂದೆ ಅರ್ಜಿ ಸಲ್ಲಿಸದಿರುವ, ಸದರಿ ವೈದ್ಯಕೀಯ ವೆಚ್ಚವನ್ನು ವಿಮಾ ಸಂಸ್ಥೆ, ಇತ್ಯಾದಿ ಇತರ ಯಾವುದೇ ಮೂಲದಿಂದ ಹಿಂಪಾವತಿ ಪಡೆದಿರುವುದಿಲ್ಲವೆಂಬ ಕುರಿತು ನೌಕರರಿಂದ ಲಿಖಿತವಾಗಿ ಘೋಷಣೆಯನ್ನು ಪಡೆಯತಕ್ಕದ್ದು.

ಈ ಆದೇಶವನ್ನು ಸಂಖ್ಯೆ: ಸಿಆಸುಇ 496 ಸೇನಿಎಫ್ 2010, ದಿನಾಂಕ: 20-09-2010 ಹಾಗೂ ಸಂಖ್ಯೆ: ಆಇ 1486 ಸೇ-1/10, ದಿನಾಂಕ: 04-10-2010 ರಲ್ಲಿ ಸಿ.ಆಸು.ಇ. (ಸೇವಾ ನಿಯಮಗಳು) ಹಾಗೂ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ.ಎಸ್. ಶಿವರಾಮ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಯುವಜನ ಸೇವಾ ಇಲಾಖೆ

ಪಿ.ಆರ್. 2794

ಜಲಸಂಪನ್ಮೂಲ ಸಚಿವಾಲಯ

ವಿಷಯ : ರಾಯಚೂರು ಜಿಲ್ಲೆ, ಲಿಂಗಸಗೂರ ತಾಲ್ಲೂಕಿನ ಬುದ್ದಿನ್ನಿ ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜನೀಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ/ 2010-11/3975, ದಿನಾಂಕ 12-07-10.

ಪ್ರಸ್ತಾವನೆ :

ರಾಯಚೂರು ಜಿಲ್ಲೆ, ಲಿಂಗಸಗೂರ ತಾಲ್ಲೂಕಿನ ಬುದ್ದಿನ್ನಿ ಸಣ್ಣ ನೀರಾಪರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಕೊಳ್ಳಲಾದ ತೆರೆಭಾವಿ ಮತ್ತು ಬುದ್ದಿನ್ನಿ ಗ್ರಾಮಗಳ ಜಮೀನುಗಳಿಗೆ ಲಿಂಗಸಗೂರ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ಆದೇಶಾನುಸಾರ ಹೆಚ್ಚಿನ ಪರಿಹಾರ ಪಾವತಿಸಲು ರೂ. 22,13,629-00 ಗಳ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯ ಇಂಜನೀಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ ಓದಲಾದ ದಿನಾಂಕ 12-07-10ರ ಪತ್ರದಲ್ಲಿ ಕೋರಿದ್ದಾರೆ.

ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರ ಅಧಿಸೂಚನೆ ದಿನಾಂಕ 19-12-2002ರ ಪ್ರಕಾರ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ದಿನಾಂಕ 26-02-04ರಂದು ರಚಿಸಿದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಲಿಂಗಸಗೂರು ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ)ದಲ್ಲಿ ಕೆಳಕಂಡ ಎಲ್.ಎ.ಸಿ. ಪ್ರಕರಣಗಳನ್ನು ಸಲ್ಲಿಸಿದ್ದಾರೆ. ಸಿವಿಲ್ ನ್ಯಾಯಾಲಯವು ದಿನಾಂಕ 08-01-08 ರಂದು ನೀಡಿರುವ ಆದೇಶದಲ್ಲಿಹೆಚ್ಚಿನ ಪರಿಹಾರಧನ ನಿಗದಿಪಡಿಸಿದೆ. ಪಾವತಿಸಬೇಕಾದ ಮೊತ್ತದ ವಿವರ ಕೆಳಕಂಡಂತಿದೆ.

ಕ್ರ ಸಂ	ಎಲ್‌ಎಸಿ	ಸ.ನಂ.	ಗ್ರಾಮ	ವಿಸ್ತೀರ್ಣ ಎ-ಗುಂ	ಪರಿಹಾರ ಮೊತ್ತ (ರೂ. ಗಳಲ್ಲಿ)
1	198/06	22/3	ತೆರೆಭಾವಿ	1-10	157122
2	202/6	21/3/1/ 21/3/2/	ತೆರೆಭಾವಿ	1-12	163386
3	199/06	1/1	ತೆರೆಭಾವಿ	1-10	18262
4	200/06	4 5 4 5	 ಬುದ್ದಿನ್ನಿ	2-12 5-37 1-30 0-25	1031070 183339
5	201/06	113/೦,ಅ 11/ ೦,ಅ	ಬುದ್ದಿನ್ನಿ	1-00 1-20	125796 176002
6	203/06	6/ ೦, 6/ಃ 6/ಅ	ಬುದ್ದಿನ್ನಿ	2-20	313745
7	205/06	10/ 3೦, 10/3ಃ	ಬುದ್ದಿನ್ನಿ	0-25	44907
				ಒಟ್ಟು	2213629

ಈ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅರ್ಹವಲ್ಲವೆಂದು ಕಂದಾಯ ಇಲಾಖೆಯು ಪತ್ರ ಸಂಖ್ಯೆ: ಆರ್‌ಡಿ 1225 ಎಲ್‌ಎಕ್ಯೂ 2008, ದಿನಾಂಕ 06-03-09ರಲ್ಲಿ ಅಭಿಪ್ರಾಯ ನೀಡಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಮತ್ತು ಭೂಸ್ವಾಧೀನ ಕಾಯ್ದೆಯ ವಿಧಿವಿಧಾನಗಳಂತೆ ಪರಿಶೀಲಿಸಿ, ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 105 ಭೂಸ್ವಾಪ್ರ 2010, ಬೆಂಗಳೂರು, ದಿನಾಂಕ: 30ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ರಾಯಚೂರು ಜಿಲ್ಲೆ, ಲಿಂಗಸಗೂರ ತಾಲ್ಲೂಕಿನ ಬುದ್ದಿನ್ನಿ ಸಣ್ಣ ನೀರಾವರಿ ಕೆರೆಯ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ತೆರೆಭಾವಿ ಮತ್ತು ಬುದಿನ್ನಿ ಗ್ರಾಮಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಸಂಖ್ಯೆ 198, 202, 199, 200, 201, 203, 205/06ರಲ್ಲಿ ನೀಡಿರುವ ಆದೇಶದಂತೆ ಪರಿಹಾರ ರೂ. 22,13,629-00 ಗಳನ್ನು (ಇಪ್ಪತ್ತೆರಡು ಲಕ್ಷ ಹದಿಮೂರು ಸಾವಿರದ ಆರುನೂರ ಇಪ್ಪತ್ತೊಂಭತ್ತು ರೂ. ಗಳು ಮಾತ್ರ) ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಸರ್ಕಾರದ [illegible]

1. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ [illegible] ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.
2. ಹೆಚ್ಚುವರಿ ಪರಿಹಾರಧನದ ಪಾವತಿಗೆ ಮೊದಲು ಜಮೀನಿನ ಹಕ್ಕುದಾರಿಕೆ ಬಗ್ಗೆ ಖಚಿತಪಡಿಸಿಕೊಂಡು ಪಾವತಿಸತಕ್ಕದ್ದು.
3. ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ [illegible] ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ವರ್ಗಾವಣೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00– ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಗೋಪಾಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2795

DEPARTMENT OF PESONNEL ADMINISTRATIVE & REFORMS SECRETARIAT

Sub :- Nomination if additional members to the Non-Resident Indian's Committee Karnataka, Bangalore -regarding

Read :- 1) G.O. No. DPAR 68 GAM 2008, dated : 05.08.2008

2) G.O. No. DPAR 58 GAM 2009, dated : 23-06-2009

3) G.O. No. DPAR 74 GAM 2009, dated : 27-08-2009

4) Note No. NRIK/MS/25/2010, dated 13-09-2010

***

Preamble:

In the Government order dated, 05-08-2008, read at (1) above, sanction was accorded for the establishment of Non-Resident Indian's Committee, Karnataka, Bangalore, and to the said Committee 16 members were nominated.

In the Government Order, dated 23-06-2009, read at (2) above, 3 Non-Resident Indians and 6 Officers were nominated as members of NRI Committee in addition to the existing members.

In the Government Order, dated 27-08-2010, read at (3) above, Sri Arvind Patil has been nominated to the above Committee as " Special Representative to represent the Kannadigas of Doha-Qatar (UAE).

The Member-Secretary, NRI's Committee, Karnataka, Bangalore, in his note dated 13-09-2010, cited at (4) above, has requested to nominate the Officers working against the following designated posts as permanent members of the NRIs Committee, Karnataka, Bangalore, for smooth functioning of the Committee and in order to get assistance for the development of State's Primary and Secondary education through NRIs/returned NRIs.

1. Principal Secretary to Government/Secretary to Government (Primary and Secondary), Education Department. Government of Karnataka.
2. Joint Secretary to Government of India (Financial Services) Ministry of Overseas Indian Affairs.

The Government, after considering the above proposal, in order to facilitate the NRI Committee, Karnataka, to function more effectively has decided to include Officers working against the above said designated posts as members in the NRI Committtee, Karnataka Bangalore, Hence this Order.

Government Order No. No. DPAR 85 GAM 2009, Bangalore, dated : 11th November, 2010

In view of the reasons explained in the proposal of the NRI Committee, Karnataka, Bangalore, Government hereby nominate the officers working against the following designated posts as permanent members of the NRIs Committee, Karnataka, Bangalore, with immediate effect and until further Orders.

1. Principal Secretary to Government/Secretary to Government (Primary and Secondary), Education Department. Government of Karnataka.
2. Joint Secretary to Government of India (Financial Services) Ministry of Overseas Indian Affairs.

By Order and in the name of the Governor of Karnataka
K.RAHAMATHULLA
Under Secretary to Government
DPAR (State Protocal)

P.R. 2796

INFRASTRUCTURE DEVELOPMENT SECRETARIAT

Sub :- Release of State Share towards Bidar Gulbarga New Railway Line Project.

Read :- 1) G.O. No. IDD 12 NSW 2004, dated : 05.09.2007

2) G.O. No. IDD 12 NSW 2004, dated : 28.09.2007

3) G.O. No. IDD 12 NSW 2004, dated : 21-01.2008

4) G.O. No. IDD 12 NSW 2008, dated : 13.05.2008

5) G.O. No. IDD 12 NSW 2008, dated : 26.06.2009

6) G.O. No. IDD 13 NSW 2008, dated : 21-08.2010

7) Letter No. W. Con/352/C/368 dated 04-10-2010 from the Chief Engineer/Constn.-1, South Central Railway, Secundrabad.

***

Preamble:

In the Government order read at Sl. No. (1) above, the State Government has accorded sanction for taking up Bidar-Gulabarga new railway project on 50:50 cost sharing basis between the Ministry of Railways and Government of Karnataka and for releasing 50% of the cost required for completion of the project within a period of 3 years.

2. In the GO. Read at Sl. No. (2) to (6) above the State Government has released so far an amount of Rs. 95.00 crore towards the share of the State Government for Bidar-Gulbarga New railway project.

3. The South Central Railway vide their letter read at Sl. No. (7) above, has stated that an amount of Rs. 30 crore is very much essential to finalise the aove railway line. South Cental Railway also provide Rs 30 crores towards construction of new line is targeted during 2010-11 and have requested to take up these works at a fast pace, it is necessary that Government of Karnataka deposit at least Rs. 30.00 crore in the current year to meet the current liabilities and to call for additional tenders.

4. The request has been examined in detail and hence this Order.

Government Order No. IDD 13 NSW 2008, Bangalore, dated : 12th November, 2010

After careful examination of the request of railways, Government of Karnataka is pleased to release an amount of Rs. 20.00 crores (Rupees Twenty crores only) towards the share of the State Government for the Bidar-Gulbarga new railway project.

2 The expenditure shall be met under the Head of Account 5465-01-190-3-10- (Plan) 133-Bidar-Gulbarga Railway line SDP Rs. 12.50 crores and Head of Account 5465-01-190-3-10-422 Special Component Plan Rs. 5.00 crores and Head of Account 5465-01-190-3-10-423 tribal sub-plan Rs. 2.50 crores, total an amount of Rs. 20.00 crore during 2010-11.

3 The Chief Executive Officer, K.RIDE is authorized to draw the amount on a payee's receipt duly countersigned by the Under Secretary to Government, Infrastructure Development Department and K-RIDE shall in turn deposit the same with the financial Advisor and Chief Accounts Officer (Construction), South Central Railway, Secunderabad.

4 This order is issued with concurrence of Finance Department vide U.O. Note. No. FD 1732 Exp-[illegible] dated 29-10-2010

By Order and in the name of the Governor of Karnataka.

C.A. BABURAVINDRANATH PATEL

Under Secretary to Government

Infrastructure Development Department.

P.R. 2797

ಸಹಕಾರ ಸಚಿವಾಲಯ

ವಿಷಯ : ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ [illegible] ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : ಸಹಕಾರ ಸಂಘಗಳ ನಿಬಂಧಕರು ಇವರ ಪತ್ರ ಸಂಖ್ಯೆ : ಎಂಕೆಟಿ-1/ಎಂಸಿಎಸ್-49/2010-11. ದಿನಾಂಕ: 8-10-2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ : 8-10-2010 ರ [illegible] ಸಭೆಯು ದಿನಾಂಕ : 31-7-2010 ರಂದು ಜರುಗಿದ್ದು, ಮಹಾಸಭೆಯಲ್ಲಿ [illegible] ನಿರ್ಣಯ ಕೈಗೊಳ್ಳಲಾಗಿದೆ.

ಕರ್ನಾಟಕ [illegible] ಸಹಕಾರ ಸಂಘಗಳ [illegible]

ಅಧಿಕಾರ ಚಲಾಯಿಸಿ ವಿಶೇಷಾಧಿಕಾರಿಯವರನ್ನು ನೇಮಿಸಬೇಕಾಗಿದೆ. ಆದ್ದರಿಂದ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಇವರ ಪ್ರಸ್ತಾವನೆಯನ್ನು ಪರಿಗಣಿಸಿ ಸಂಘದ ವಿಶೇಷಾಧಿಕಾರಿಯವರ ಅವಧಿಯನ್ನು ದಿನಾಂಕ : 31-3-2011ರ ವರೆಗೆ ವಿಸ್ತರಿಸುವಂತೆ ಸಹಕಾರ ಸಂಘಗಳ ನಿಬಂಧಕರು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 159 ಸಂಮಾಸ 2010, ಬೆಂಗಳೂರು, ದಿನಾಂಕ : 3-11-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 31(1) ರನ್ವಯ ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಮಂಡ್ಯ ಇದರ ವಿಶೇಷಾಧಿಕಾರಿಗಳ ಅವಧಿಯನ್ನು ದಿನಾಂಕ : 31-3-2011 ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 31(1)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ : 31-3-2011 ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ 31(1)ರ ಕಲಂ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್.ಎಸ್. ನೂಲಿ
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ. ಆರ್. 2811

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಕಟ್ಟಡದಲ್ಲಿ ಖಾಲಿಯಿರುವ ಕೊಠಡಿಗಳನ್ನು ಕಾವಾ ಸಂಸ್ಥೆಯ ಉಪಯೋಗಕ್ಕೆ ನೀಡಿರುವುದನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ವಾಕೈ 12 ಕೈಯೋವಿ 2007, ದಿನಾಂಕ : 4-10-2007.
2. ಅಧಿಕ ನಿರ್ದೇಶಕರು, ಜಿಕೈಕೇರವರ ಪತ್ರ ಸಂಖ್ಯೆ : ಜಿಕೈಕೇ/ಸಿ2/ಚಾ.ತಾ.ಸಂ/ಕಾವಾ/37/2010-11, ದಿನಾಂಕ :26-10-2010.
3. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಕಸಂವಾಪ್ರ 108 ಕರಅ 2010, ದಿನಾಂಕ : 27-10-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ (ಸಿ.ಟಿ.ಐ.)ಯ ಕಟ್ಟಡದಲ್ಲಿನ ಮೂರು ಕೊಠಡಿಗಳನ್ನು ಹಲವು ಷರತ್ತಿಗೊಳಪಟ್ಟು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿರುವ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ) ಸಂಸ್ಥೆಯ ತರಬೇತಿಗಳ ಉಪಯೋಗಕ್ಕಾಗಿ ಎರಡು ವರ್ಷಗಳ ಅವಧಿಗೆ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ಷರತ್ತಿಗೊಳಪಟ್ಟು ಸರ್ಕಾರದ ಅನುಮತಿಯನ್ನು ನೀಡಲಾಗಿರುತ್ತದೆ. ಈ ಅವಧಿಯು ದಿನಾಂಕ : 3-10-2009 ಕ್ಕೆ ಅಂತ್ಯಗೊಂಡಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಕಾವಾ ಸಂಸ್ಥೆಯ ಸ್ವಂತ ಕಟ್ಟಡ ನಿರ್ಮಾಣಗೊಳ್ಳುವವರೆಗೆ ಈಗಾಗಲೇ ನೀಡಿರುವ ಮೂರು ಕೊಠಡಿಗಳನ್ನು ಮುಂದುವರೆಸಲು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕೆ ಕೇಂದ್ರ, ಮೈಸೂರು, ರವರು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಎರಡು (2) ವರ್ಷಗಳ ಅವಧಿಗೆ ಹಾಲಿ ಇರುವ ಕೊಠಡಿಗಳನ್ನು ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿನ ಷರತ್ತಿಗೊಳಪಟ್ಟು ಕಾವಾ ಸಂಸ್ಥೆಗೆ ನೀಡುವ ಸಲುವಾಗಿ ಸರ್ಕಾರಿ ಆದೇಶ ಹೊರಡಿಸುವಂತೆ ಅಪರ ನಿರ್ದೇಶಕರು (ಜಿಕೈಕೇ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು, ರವರು ಕೋರಿರುತ್ತಾರೆ.

ಮೇಲೆ ಓದಲಾದ (3)ರ ಅನಧಿಕೃತ ಟಿಪ್ಪಣಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೂ ಸಹ ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ (ಕಾವಾ), ಮೈಸೂರು, ಈ ಸಂಸ್ಥೆಗೆ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಈಗಾಗಲೇ 4.40 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಕಟ್ಟಡ ವಿನ್ಯಾಸ ಹಾಗೂ ಅಂದಾಜು ಪಟ್ಟಿಯನ್ನು ಸಲ್ಲಿಸಲು ಈಗಾಗಲೇ ಕಾವಾ ಸಂಸ್ಥೆಗೆ ನಿರ್ದೇಶನ ನೀಡಲಾಗಿದ್ದು, ಕಟ್ಟಡ ಕಾಮಗಾರಿಯನ್ನು ನಿರ್ಮಿಸಲು ಕಾಲಾವಕಾಶದ ಅಗತ್ಯ ಇರುವುದರಿಂದ ಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿಯ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಮೈಸೂರಿನ ಸಿ.ಟಿ.ಐ. ಕಟ್ಟಡದಲ್ಲಿರುವ ಮೂರು ಕೊಠಡಿಗಳನ್ನು ದಿನಾಂಕ : 4-10-2009 ರಿಂದ 5 ವರ್ಷಗಳ ಅವಧಿಗೆ ಅಥವಾ ಸಂಸ್ಥೆಯು ಸ್ವಂತ ಕಟ್ಟಡ ಹೊಂದುವವರೆಗೆ ಉಪಯೋಗಿಸಿಕೊಳ್ಳಲು ಅನುಮತಿ ನೀಡುವಂತೆ ಕೋರಿರುತ್ತದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ವಾಕೈ 18 ಕೈಯೋವಿ 2010, ಬೆಂಗಳೂರು, ದಿನಾಂಕ : 11-11-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ (ಸಿ.ಟಿ.ಐ.)ಯ ಕಟ್ಟಡದಲ್ಲಿನ ಮೂರು ಕೊಠಡಿಗಳನ್ನು ಈಗಾಗಲೇ ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿನ ಷರತ್ತಿಗೊಳಪಟ್ಟು 2 ವರ್ಷಗಳ ಅವಧಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿರುವ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ) ಸಂಸ್ಥೆಯ ತರಬೇತಿಗಳ ಉಪಯೋಗಕ್ಕಾಗಿ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮತಿಯನ್ನು ನೀಡಿರುವುದನ್ನು ಮುಂದುವರೆಸಿ, ದಿನಾಂಕ : 4-10-2009 ರಿಂದ 2 ವರ್ಷಗಳ ಅವಧಿಗೆ ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮತಿ ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ವಾಸನ್
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. (ಸೇವೆಗಳು)

ಪಿ.ಆರ್. 2812

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಬಿಬಿಎಸ್/ಬಿಡಿಎಸ್ ಹಾಗೂ ಇತರೆ ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯ ಪಡೆಯುತ್ತಿರುವ/ಪಡೆಯುವ ಸಂಸ್ಥೆಗಳಿಗೆ ಕ್ಲಿನಿಕಲ್ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ : ಪತ್ರ ಸಂಖ್ಯೆ : ವೈಶಿನಿ/ಎಂಇಪಿ 13/2008–09, ದಿನಾಂಕ : 22–8–2010.

ಪ್ರಸ್ತಾವನೆ :

ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮೇಲೆ (1) ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ದಿನಾಂಕ 1–8–2009 ರಂದು ಸರ್ಕಾರದ ಆಸ್ಪತ್ರೆಗಳಲ್ಲಿ ಕ್ಲಿನಿಕಲ್ ಸೌಲಭ್ಯವನ್ನು ಪಡೆಯಲು ಕ್ಲಿನಿಕಲ್ ಶುಲ್ಕವನ್ನು ಪರಿಷ್ಕರಿಸುವ ಬಗ್ಗೆ ನಡೆದ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ, ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ವೃತ್ತಿಪರ ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ ಸಂಸ್ಥೆಗಳಿಗೆ ಈ ಕೆಳಗೆ ಸೂಚಿಸಿರುವಂತೆ ಕ್ಲಿನಿಕಲ್ ಶುಲ್ಕವನ್ನು ಪರಿಷ್ಕರಿಸಿ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಕ್ರಮ ಸಂಖ್ಯೆ	ಶುಲ್ಕಗಳ ವಿವರ	ಜಾರಿಯಲ್ಲಿರುವ ಶುಲ್ಕದ ದರಗಳು (ರೂ.ಗಳಲ್ಲಿ)	ಪರಿಷ್ಕರಿಸಬೇಕಾದ ಶುಲ್ಕದ ದರಗಳು (ರೂ.ಗಳಲ್ಲಿ)
1	ಹೊಸ ವೈದ್ಯಕೀಯ ಕಾಲೇಜಿನ ತನಿಖಾ ಶುಲ್ಕ	50,000	50,000
2	ಹೊಸ ದಂತ ಕಾಲೇಜಿನ ತನಿಖಾ ಶುಲ್ಕ	25,000	25,000
3	ಸ್ನಾತಕೋತ್ತರ ವ್ಯಾಸಂಗದ ಪ್ರಾರಂಭಕ್ಕಾಗಿ ತನಿಖಾ ಶುಲ್ಕ	ಪ್ರತಿ ವಿಷಯಕ್ಕೆ 10,000	ಪ್ರತಿ ವಿಷಯಕ್ಕೆ 10,000
4	ಸ್ನಾತಕೋತ್ತರ ವೈದ್ಯ/ದಂತ ಸೀಟುಗಳ ಹೆಚ್ಚಳಕ್ಕಾಗಿ ತನಿಖಾ ಶುಲ್ಕ	ಪ್ರತಿ ವಿಷಯಕ್ಕೆ 5,000	ಪ್ರತಿ ವಿಷಯಕ್ಕೆ 5,000
5	ಹೊಸ ನರ್ಸಿಂಗ್ ಶಾಲೆ/ಕಾಲೇಜು ಮತ್ತು ಇತರೆ ಅರೆ ವೈದ್ಯಕೀಯ ಡಿಗ್ರಿ ಮತ್ತು ಡಿಪ್ಲೊಮೊ ಕೋರ್ಸುಗಳ ಪ್ರಾರಂಭ ಶುಲ್ಕ	ಡಿಗ್ರಿ 10,000 ಡಿಪ್ಲೊಮೊ 5,000	ಡಿಗ್ರಿ 25,000 ಡಿಪ್ಲೊಮೊ 5,000
6	ನರ್ಸಿಂಗ್ ಶಾಲೆ/ಕಾಲೇಜು ಮತ್ತು ಪಿಸಿಯೋಥೆರಪಿ ಮತ್ತು ಇತರೆ ಅರೆ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸುವುದಕ್ಕಾಗಿ ತನಿಖಾ ಶುಲ್ಕ	ಪ್ರತಿ ಸೀಟು 1,000	ಪ್ರತಿ ಸೀಟು 5,000
7	ಗೃಹ ವೈದ್ಯರು ನಿಗದಿತ ಸಮಯದಲ್ಲಿ ಅನುಮತಿ ಪಡೆಯದಿದ್ದಲ್ಲಿ ಅವರಿಗೆ ವಿಧಿಸುವ ದಂಡ	ಪ್ರತಿ ಅಭ್ಯರ್ಥಿಗೆ 1,000	ಪ್ರತಿ ಅಭ್ಯರ್ಥಿಗೆ 5,000
8	ಗೃಹ ವೈದ್ಯರಿಗೆ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗಾವಣೆ ಮಾಡಿದಾಗ ನೀಡುವ ಅನಾಕ್ಷೇಪಣಾ ಪತ್ರ	ಪ್ರತಿ ಅಭ್ಯರ್ಥಿಗೆ 1,000	ಪ್ರತಿ ಅಭ್ಯರ್ಥಿಗೆ 5,000
9	ಗೃಹ ವೈದ್ಯರಿಗೆ ಒಂದು ಕಾಲೇಜಿನಿಂದ ಹೊರದೇಶಕ್ಕೆ ಹೋಗಲು ಹಾಗೂ ಬರಲು ನೀಡುವ ಅನಾಕ್ಷೇಪಣಾ ಪತ್ರ	ಪ್ರತಿ ಅಭ್ಯರ್ಥಿಗೆ 5,000	ಪ್ರತಿ ಅಭ್ಯರ್ಥಿಗೆ 25,000
10	ಅರೆ ವೈದ್ಯಕೀಯ ಹಾಗೂ ಡಿಪ್ಲೊಮಾ ನರ್ಸಿಂಗ್ ಅಭ್ಯರ್ಥಿಗಳಿಗೆ ಒಂದು ಕಾಲೇಜಿನಿಂದ/ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮಾಡಿದಾಗ ನೀಡುವ ಅನಾಕ್ಷೇಪಣಾ ಪತ್ರ	ಪ್ರತಿ ಅಭ್ಯರ್ಥಿಗೆ 1,000	ಪ್ರತಿ ಅಭ್ಯರ್ಥಿಗೆ 5,000

ಕ್ಲಿನಿಕಲ್ ಶುಲ್ಕದ ಪರಿಷ್ಕೃತ ದರಗಳು

ಕ್ರಮ ಸಂಖ್ಯೆ	ಕೋರ್ಸಿನ ವಿವರ	ಜಾರಿಯಲ್ಲಿರುವ ಕ್ಲಿನಿಕಲ್ ಶುಲ್ಕ (ರೂ.ಗಳಲ್ಲಿ) ಪ್ರತಿವರ್ಷ/ಪ್ರತಿ ವಿದ್ಯಾರ್ಥಿಗೆ	ಪರಿಷ್ಕರಿಸಬೇಕಾದ ಕ್ಲಿನಿಕಲ್ ಶುಲ್ಕದ (ರೂ.ಗಳಲ್ಲಿ) ಪ್ರತಿ ವರ್ಷ/ಪ್ರತಿ ವಿದ್ಯಾರ್ಥಿಗೆ
1	ಎಂಬಿಬಿಎಸ್	9,000	32,500
2	ಬಿಡಿಎಸ್	12,000	36,000
3	ಸ್ನಾತಕೋತ್ತರ ಕೋರ್ಸುಗಳು 1. ಪದವಿ (ಡಿಗ್ರಿ) 2. ಡಿಪ್ಲೊಮಾ	 25,000 25,000	 1,10,000 1,30,000
4	ಐ.ಎಸ್.ಎಂ.ಹೆಚ್. ಪದವಿ	1,500	3,000
5	ನರ್ಸಿಂಗ್ ಡಿಗ್ರಿ ಸರ್ಟಿಫಿಕೇಟ್ ಕೋರ್ಸು	1,000	2,500
6	ಡಿಪ್ಲೊಮಾ ಫಾರ್ಮಸಿ	1,000	2,500
7	ಫಿಸಿಯೋಥೆರಪಿ 1. ಪದವಿ (ಡಿಗ್ರಿ) 2. ಡಿಪ್ಲೊಮಾ	 3,000 1,500	 6,000 3,000
8	ಟೆಕ್ನೀಷಿಯನ್ ಕೋರ್ಸುಗಳು (ಎಕ್ಸ್ ರೇ, ಲ್ಯಾಬ್, ಓಟಿ, ಇಸಿಜಿ, ಇಇಜಿ, ರೆಫ್ರಾಕ್ಷನಿಸ್ಟ್ ಮತ್ತು ಇತ್ಯಾದಿ)	1,500	3,000

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ತಾಂತ್ರಿಕ ಕೋರ್ಸುಗಳನ್ನು ಪ್ರಾರಂಭಿಸಲು ತಾಂತ್ರಿಕ ಅಭಿಪ್ರಾಯ ಪಡೆಯಲು ಇರುವ ತನಿಖಾ ಶುಲ್ಕ ಹಾಗೂ ಸರ್ಕಾರದ ಆಸ್ಪತ್ರೆಗಳಲ್ಲಿ ಎಂಬಿಬಿಎಸ್, ಬಿಡಿಎಸ್ ಹಾಗೂ ಇತರೆ ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ/ಪಡೆಯುವ ಸಂಸ್ಥೆಗಳಿಗೆ ಕ್ಲಿನಿಕಲ್ ಶುಲ್ಕವನ್ನು ಪರಿಷ್ಕರಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 546 ಎಂಪಿಎಸ್ 2010, ಬೆಂಗಳೂರು, ದಿನಾಂಕ : 11–11–2010

ತಾಂತ್ರಿಕ ಕೋರ್ಸುಗಳನ್ನು ಪ್ರಾರಂಭಿಸಲು ತಾಂತ್ರಿಕ ಅಭಿಪ್ರಾಯ ಪಡೆಯಲು ಇರುವ ತನಿಖಾ ಶುಲ್ಕ ಹಾಗೂ ಸರ್ಕಾರದ ಆಸ್ಪತ್ರೆಗಳಲ್ಲಿ ಎಂಬಿಬಿಎಸ್, ಬಿಡಿಎಸ್ ಹಾಗೂ ಇತರೆ ಕೋರ್ಸುಗಳಿಗೆ ಕ್ಲಿನಿಕಲ್ ಸೌಲಭ್ಯವನ್ನು ಪಡೆಯುತ್ತಿರುವ/ಪಡೆಯುವ ಸಂಸ್ಥೆಗಳಿಗೆ ಕ್ಲಿನಿಕಲ್ ಶುಲ್ಕವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

ಕ್ರಮ ಸಂಖ್ಯೆ	ಶುಲ್ಕಗಳ ವಿವರ	ಜಾರಿಯಲ್ಲಿರುವ ಶುಲ್ಕದ ದರಗಳು (ರೂ.ಗಳಲ್ಲಿ)	ಪರಿಷ್ಕರಿಸಬೇಕಾದ ಶುಲ್ಕದ ದರಗಳು (ರೂ.ಗಳಲ್ಲಿ)
1	ಹೊಸ ವೈದ್ಯಕೀಯ ಕಾಲೇಜಿನ ತನಿಖಾ ಶುಲ್ಕ	50,000	50,000
2	ಹೊಸ ದಂತ ಕಾಲೇಜಿನ ತನಿಖಾ ಶುಲ್ಕ	25,000	25,000
3	ಸ್ನಾತಕೋತ್ತರ ವ್ಯಾಸಂಗದ ಪ್ರಾರಂಭಕ್ಕಾಗಿ ತನಿಖಾ ಶುಲ್ಕ	ಪ್ರತಿ ವಿಷಯಕ್ಕೆ 10,000	ಪ್ರತಿ ವಿಷಯಕ್ಕೆ 10,000
4	ಸ್ನಾತಕೋತ್ತರ ವೈದ್ಯ/ದಂತ ಸೀಟುಗಳ ಹೆಚ್ಚಳಕ್ಕಾಗಿ ತನಿಖಾ ಶುಲ್ಕ	ಪ್ರತಿ ವಿಷಯಕ್ಕೆ 5,000	ಪ್ರತಿ ವಿಷಯಕ್ಕೆ 5,000
5	ಹೊಸ ನರ್ಸಿಂಗ್ ಶಾಲೆ/ಕಾಲೇಜು ಮತ್ತು ಇತರೆ ಅರೆ ವೈದ್ಯಕೀಯ ಡಿಗ್ರಿ ಮತ್ತು ಡಿಪ್ಲೊಮೊ ಕೋರ್ಸುಗಳ ಪ್ರಾರಂಭ ಶುಲ್ಕ	ಡಿಗ್ರಿ 10,000 ಡಿಪ್ಲೊಮಾ 5,000	ಡಿಗ್ರಿ 25,000 ಡಿಪ್ಲೊಮಾ 10,000
6	ನರ್ಸಿಂಗ್ ಶಾಲೆ/ಕಾಲೇಜು ಮತ್ತು ಪಿಸಿಯೋಥೆರಪಿ ಮತ್ತು ಇತರೆ ಅರೆ ವೈದ್ಯಕೀಯ ಸೀಟುಗಳನ್ನು ಹೆಚ್ಚಿಸುವುದಕ್ಕಾಗಿ ತನಿಖಾ ಶುಲ್ಕ	ಪ್ರತಿ ಸೀಟು 1,000	ಪ್ರತಿ ಸೀಟು 5,000
7	ಗೃಹ ವೈದ್ಯರು ನಿಗದಿತ ಸಮಯದಲ್ಲಿ ಅನುಮತಿ ಪಡೆಯದಿದ್ದಲ್ಲಿ ಅವರಿಗೆ ವಿಧಿಸುವ ದಂಡ	ಪ್ರತಿ ಅಭ್ಯರ್ಥಿಗೆ 1,000	ಪ್ರತಿ ಅಭ್ಯರ್ಥಿಗೆ 5,000
8	ಗೃಹ ವೈದ್ಯರಿಗೆ ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗಾವಣೆ ಮಾಡಿದಾಗ ನೀಡುವ ಅನಾಕ್ಷೇಪಣಾ ಪತ್ರ	ಪ್ರತಿ ಅಭ್ಯರ್ಥಿಗೆ 1,000	ಪ್ರತಿ ಅಭ್ಯರ್ಥಿಗೆ 5,000
9	ಗೃಹ ವೈದ್ಯರಿಗೆ ಒಂದು ಕಾಲೇಜಿನಿಂದ ಹೊರದೇಶಕ್ಕೆ ಹೋಗಲು ಹಾಗೂ ಬರಲು ನೀಡುವ ಅನಾಕ್ಷೇಪಣಾ ಪತ್ರ	ಪ್ರತಿ ಅಭ್ಯರ್ಥಿಗೆ 5,000	ಪ್ರತಿ ಅಭ್ಯರ್ಥಿಗೆ 25,000
10	ಅರೆ ವೈದ್ಯಕೀಯ ಹಾಗೂ ಡಿಪ್ಲೊಮಾ ನರ್ಸಿಂಗ್ ಅಭ್ಯರ್ಥಿಗಳಿಗೆ ಒಂದು ಕಾಲೇಜಿನಿಂದ/ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ವರ್ಗಾವಣೆ ಮಾಡಿದಾಗ ನೀಡುವ ಅನಾಕ್ಷೇಪಣಾ ಪತ್ರ	ಪ್ರತಿ ಅಭ್ಯರ್ಥಿಗೆ 1,000	ಪ್ರತಿ ಅಭ್ಯರ್ಥಿಗೆ 5,000

ಕ್ಲಿನಿಕಲ್ ಶುಲ್ಕದ ಪರಿಷ್ಕೃತ ದರಗಳು

ಕ್ರಮ ಸಂಖ್ಯೆ	ಕೋರ್ಸಿನ ವಿವರ	ಜಾರಿಯಲ್ಲಿರುವ ಕ್ಲಿನಿಕಲ್ ಶುಲ್ಕ (ರೂ.ಗಳಲ್ಲಿ) ಪ್ರತಿವರ್ಷ/ಪ್ರತಿ ವಿದ್ಯಾರ್ಥಿಗೆ	ಪರಿಷ್ಕರಿಸಬೇಕಾದ ಕ್ಲಿನಿಕಲ್ ಶುಲ್ಕದ (ರೂ.ಗಳಲ್ಲಿ) ಪ್ರತಿ ವರ್ಷ/ಪ್ರತಿ ವಿದ್ಯಾರ್ಥಿಗೆ
1	ಎಂಬಿಬಿಎಸ್	9,000	32,500
2	ಬಿಡಿಎಸ್	12,000	36,000
3	ಸ್ನಾತಕೋತ್ತರ ಕೋರ್ಸುಗಳು 1. ಪದವಿ (ಡಿಗ್ರಿ) 2. ಡಿಪ್ಲೊಮಾ	 25,000 25,000	 1,10,000 1,30,000
4	ಐ.ಎಸ್.ಎಂ.ಹೆಚ್. ಪದವಿ	1,500	3,000
5	ನರ್ಸಿಂಗ್ ಡಿಗ್ರಿ ಸರ್ಟಿಫಿಕೇಟ್ ಕೋರ್ಸು	1,000	2,500
6	ಡಿಪ್ಲೊಮಾ ಫಾರ್ಮಸಿ	1,000	2,500
7	ಫಿಸಿಯೋಥೆರಪಿ 1. ಪದವಿ (ಡಿಗ್ರಿ) 2. ಡಿಪ್ಲೊಮಾ	 3,000 1,500	 6,000 3,000
8	ಟೆಕ್ನೀಷಿಯನ್ ಕೋರ್ಸುಗಳು (ಎಕ್ಸ್ ರೇ, ಲ್ಯಾಬ್, ಓಟಿ, ಇಸಿಜಿ, ಇಇಜಿ, ರೆಫ್ರಾಕ್ಷನಿಸ್ಟ್ ಮತ್ತು ಇತ್ಯಾದಿ)	1,500	3,000

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಬಿ. ಧನಂಜಯಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

(ವೈದ್ಯಕೀಯ ಶಿಕ್ಷಣ)

ಪಿ. ಆರ್. 2813

ಕಂದಾಯ ಸಚಿವಾಲಯ

ವಿಷಯ : ಕಾವೇರಿ ಯೋಜನೆಯ ಉಸ್ತುವಾರಿ ಘಟಕ (KAVERI PROJJECT MONITORING UNIT) ಸ್ಥಾಪನೆ ಕುರಿತು.

ಉಲ್ಲೇಖ : 1) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ : COMP/47/2003-04, ದಿನಾಂಕ : 1–2–2007 ರಿಂದ ದಿನಾಂಕ : 22–6–2010 ರವರಿಗೆ ಕೊನೆಗೊಂಡ ಪತ್ರ ವ್ಯವಹಾರ

ಪ್ರಸ್ತಾವನೆ :

ಮೇಲೆ ಓದಲಾಗ (1)ರ ಪತ್ರಗಳಲ್ಲಿ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರವರು ನೋಂದಣಿ ಮತ್ತು ಮುದ್ರಾಂಕ ಇಲಾಖೆಯು 'ಕಾವೇರಿ ಯೋಜನೆ' ಯ ಮೂಲಕ ಎಲ್ಲಾ 242 ಉಪ–ನೋಂದಣಿ ಕಛೇರಿ ಹಾಗೂ 34 ಜಿಲ್ಲಾ ನೋಂದಣಿ ಕಛೇರಿಗಳ ಕಾರ್ಯಚಟುವಟಿಕೆಗಳನ್ನು ಹಾಗೂ ಸೇವೆಗಳನ್ನು 2003–04ನೇ ಸಾಲಿನಿಂದ ಗಣಕೀಕರಣಕ್ಕೊಳಪಡಿಸಿರುವ ಬಗ್ಗೆ ತಿಳಿಸುತ್ತಾ ಗಣಕೀಕರಣ ಯೋಜನೆಗಳನ್ನು ಸಮರ್ಪಕವಾಗಿ ಹಾಗೂ ಸುವ್ಯವಸ್ಥಿತವಾಗಿ ಮುನ್ನಡೆಸಿಕೊಂಡು ಹೋಗಲು 'ಕಾವೇರಿ ಯೋಜನೆ ಉಸ್ತುವಾರಿ ಘಟಕ' ಮಂಜೂರು ಮಾಡಲು ಕೋರಿರುತ್ತಾರೆ.

ಕಾವೇರಿ ಗಣಕೀಕರಣ ಯೋಜನೆಯನ್ನು BOT ಆಧಾರದನ್ವಯ ಮೆ॥ Electronic Corporation of India, ಮೆ॥ CMS ಕಂಪ್ಯೂಟರ್ಸ್ ಪ್ರೈ.ಲಿ ಸಂಸ್ಥೆಗಳು ಹಾಗೂ ಕಾವೇರಿ ತಂತ್ರಾಂಶದ ನಿರ್ವಹಣೆಯನ್ನು ಮೆ॥ C-DAC ಪುಣೆ ಸಂಸ್ಥೆಯು ನಿರ್ವಹಿಸುತ್ತಿದೆ. ಕಾವೇರಿ ಗಣಕೀಕರಣ ಯೋಜನೆಯ ಅಡಿಯಲ್ಲಿ ಇಲಾಖೆಯು ನೀಡುತ್ತಿರುವ ಸೇವೆಗಳ ವಿವರಗಳು ಈ ಕೆಳಕಂಡಂತಿರುತ್ತವೆ :–

1. ದಸ್ತಾವೇಜುಗಳ ನೋಂದಣಿ
2. ಪಾಲುದಾರಿಕೆ ಸಂಸ್ಥೆಗಳ ನೋಂದಣಿ
3. ವಿವಾಹ ನೋಂದಣಿ (ಹಿಂದೂ ವಿವಾಹ ಹಾಗೂ ವಿಶೇಷ ವಿವಾಹ)
4. ಋಣಭಾರ ಪ್ರಮಾಣ ಪತ್ರ ನೀಡಿಕೆ
5. ದಸ್ತಾವೇಜುಗಳ ದೃಢೀಕೃತ ನಕಲು ಪ್ರತಿ ನೀಡಿಕೆ
6. ವಿವಾಹ ಪ್ರಮಾಣ ಪತ್ರಗಳ ನೀಡಿಕೆ.
7. ಪಾಲುದಾರಿಕೆ ಸಂಸ್ಥೆಗಳ ದಾಖಲೆಗಳ ಪ್ರತಿ ನೀಡಿಕೆ–ಇತ್ಯಾದಿ.

ಇದಲ್ಲದೆ ಕಾವೇರಿ–ಭೂಮಿ ತಂತ್ರಾಂಶಗಳನ್ನು 2006ನೇ ಸಾಲಿನಿಂದ ಜೋಡಣೆ ಮಾಡಲಾಗಿರುತ್ತದೆ. ಇದರನ್ವಯ ಕೃಷಿ ಜಮೀನುಗಳ ನೋಂದಣಿ ದಸ್ತಾವೇಜುಗಳಿಗೆ ಸಂಬಂಧಿಸಿದ ಜೆ–ಫಾರ್ಮಗಳನ್ನು XML ಕಡತಗಳ ಮೂಲಕ ವಿದ್ಯುನ್ಮಾನ ದ್ವಾರಾ ಕಾವೇರಿಯಿಂದ ಭೂಮಿಗೆ ಪ್ರತಿ ನಿತ್ಯ ರವಾನಿಸಲಾಗುತ್ತಿದೆ. ಸಾರ್ವಜನಿಕರಿಗೆ ಹೆಚ್ಚಿನ ಸೇವೆಯನ್ನು ನೀಡುವ ಉದ್ದೇಶದಿಂದ ಕಾವೇರಿ ಗಣಕೀಕರಣ ಯೋಜನೆಯೊಂದಿಗೆ ಇಲಾಖೆಯು ಹಮ್ಮಿಕೊಂಡಿರುವ ಇತರೆ ಗಣಕೀಕರಣ ಯೋಜನೆಗಳ ವಿವರಗಳು ಈ ಕೆಳಕಂಡಂತಿರುತ್ತವೆ :–

1. ನೂತನ ವೆಬ್ ಆಧಾರಿತ ಗಣಕೀಕರಣ ಯೋಜನೆ
2. 2003–04ನೇ ಸಾಲಿಗಿಂತ ಹಿಂದಿನ ಋಣಭಾರ ಪ್ರಮಾಣ ಪತ್ರ ನೀಡಿಕೆ ಸಂಬಂಧ (ಇಂಡೆಕ್ಸ್–II ವಹಿಗಳ) ಡಾಟಾ ಎಂಟ್ರಿ ಯೋಜನೆ.
3. 2003–04ನೇ ಸಾಲಿಗಿಂತ ಹಿಂದಿನ ಸಾಲಿನಲ್ಲಿ ನೋಂದಾಯಿಸಿರುವ ದಸ್ತಾವೇಜುಗಳ ಸ್ಕ್ಯಾನಿಂಗ್ ಮತ್ತು ಮೈಕ್ರೋಫಿಲ್ಮಿಂಗ್ ಯೋಜನೆ
4. ಬೆಂಗಳೂರು–1 ಕೇಂದ್ರಗಳ ಮೂಲಕ ಋಣಭಾರ ಪ್ರಮಾಣ ಪತ್ರ, ದಸ್ತಾವೇಜುಗಳ ಹಾಗೂ ವಿವಾಹ ಪ್ರಮಾಣ ಪತ್ರಗಳ ದೃಢೀಕರಣ ನಕಲು ಪ್ರತಿ ನೀಡಿಕೆ ಯೋಜನೆ
5. ಇ–ಸ್ಟಾಂಪಿಂಗ್ ಯೋಜನೆ
6. ಇಲಾಖೆಯ ಎಲ್ಲಾ ಕಛೇರಿಗಳಿಗೆ KSWAN ಸಂಪರ್ಕ ನೀಡಿಕೆ ಹಾಗೂ ನಿರ್ವಹಣೆ

ಪ್ರಸ್ತುತ ಜಾರಿಯಲ್ಲಿರುವ ಕಾವೇರಿ ಯೋಜನೆ ಸೇರಿದಂತೆ ಮೇಲ್ಕಂಡ ಎಲ್ಲಾ ಯೋಜನೆಗಳನ್ನು ಸಮರ್ಪಕವಾಗಿ ಹಾಗೂ ಸುವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗಲು ಇಲಾಖೆಯಲ್ಲಿ ತಾಂತ್ರಿಕ ಪರಿಣಿತರು ಇಲ್ಲದಿರುವುದರಿಂದ ತಾಂತ್ರಿಕ ಪರಿಣಿತರನ್ನೊಳಗೊಂಡ ಕಾವೇರಿ ಯೋಜನೆ ಉಸ್ತುವಾರಿ ಘಟಕ (KAVERI Project Monitoring Unit) ಸ್ಥಾಪಿಸುವುದು ಅತ್ಯವಶ್ಯವಿದೆ.

ಕಾವೇರಿ ಯೋಜನೆ ಉಸ್ತುವಾರಿ ಘಟಕದಲ್ಲಿ ಇರಬೇಕಾದ ಅಧಿಕಾರಿ/ಸಿಬ್ಬಂದಿ ತಾಂತ್ರಿಕ ಸದಸ್ಯರ ವಿವರಣೆ ಈ ಕೆಳಕಂಡಂತೆ ನೀಡಲಾಗಿರುತ್ತವೆ :–

1. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕ ಆಯುಕ್ತರವರು– ಚೇರ್‌ಮನ್
2. ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ) – ಯೋಜನಾ ನಿರ್ದೇಶಕರು (Project Director)
3. ಪ್ರೋಗ್ರಾಮ್ ಮ್ಯಾನೇಜರ್–1 (ಶಾಶ್ವತ ಹುದ್ದೆ–ಕೇಂದ್ರ ಸ್ಥಾನ ಸಹಾಯಕರು–ಹೊಸ ಹುದ್ದೆ–ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ) ಗ್ರೂಪ್–ಎ ವೇತನ ಶ್ರೇಣಿ ರೂ. 14050–25050.
4. ಸಹಾಯಕ ಪ್ರೋಗ್ರಾಮ್ ಮ್ಯಾನೇಜರ್–1 (ಶಾಶ್ವತ ಹುದ್ದೆ–ಹಿರಿಯ ಉಪ–ನೋಂದಣಾಧಿಕಾರಿ–ಹೊಸ ಹುದ್ದೆ–(ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ) ಗ್ರೂಪ್–ಬಿ ವೇತನ ಶ್ರೇಣಿ ರೂ. 11400–21600.
5. [illegible] (ಹೊಸ ಹುದ್ದೆ) (ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ) ಗ್ರೂಪ್–ಸಿ ವೇತನ ಶ್ರೇಣಿ ರೂ. 5800–10500
6. [illegible]
7. Project Manager (New IT Initiatives) -1 ತಾಂತ್ರಿಕ ಸದಸ್ಯರು (ಹೊರ ಗುತ್ತಿಗೆಯಿಂದ ನೇಮಕ ಮಾಡಿಕೊಳ್ಳುವುದು)
8. ತಾಂತ್ರಿಕ ಸಲಹೆಗಾರರು (Technical Consultants) –2 ತಾಂತ್ರಿಕ ಸದಸ್ಯರು (ಹೊರಗುತ್ತಿಗೆಯಿಂದ ನೇಮಕ ಮಾಡಿಕೊಳ್ಳುವುದು)
9. ಡಾಟಾ ಬೇಸ್ ಅಡ್ಮಿನಿಸ್ಟ್ರೇಟರ್–1 ತಾಂತ್ರಿಕ ಸದಸ್ಯರು (ಹೊರಗುತ್ತಿಗೆಯಿಂದ ನೇಮಕ ಮಾಡಿಕೊಳ್ಳುವುದು)

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಗಣಕೀಕರಣ ಯೋಜನೆಗಳನ್ನು ಸಮರ್ಪಕವಾಗಿ ಹಾಗೂ ಸುವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗುವುದಕ್ಕಾಗಿ ಕಾವೇರಿ ಯೋಜನೆ ಉಸ್ತುವಾರಿ ಘಟಕ (KAVERI Project Monitoring Unit) ಸ್ಥಾಪಿಸುವುದು ಅತ್ಯವಶ್ಯವಿರುವುದೆಂದು ಮನಗಂಡು ಸದರಿ ಘಟಕ ಸ್ಥಾಪನೆ ಕುರಿತು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 292 ಮುನೋಮು 2008 (ಭಾ), ಬೆಂಗಳೂರು, ದಿನಾಂಕ : 25–10–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶಗಳ ಹಿನ್ನೆಲೆಯಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಗಣಕೀಕರಣ ಯೋಜನೆಗಳ ಸಮರ್ಪಕ ಹಾಗೂ ಸುವ್ಯವಸ್ಥಿತ ನಿರ್ವಹಣೆ ಹಾಗೂ ಉಸ್ತುವಾರಿಗಾಗಿ ಕೆಳಕಂಡಂತೆ ಕಾವೇರಿ ಯೋಜನೆ ಉಸ್ತುವಾರಿ ಘಟಕವನ್ನು (KAVERI Project Monitoring Unit) ಸ್ಥಾಪಿಸಲು ಸರ್ಕಾರವು ಅನುಮೋದನೆ ನೀಡಿದೆ. ಈ ಸಂಬಂಧ ಕೆಳಕಾಣಿಸಿದ ಹುದ್ದೆಗಳನ್ನು ಸೃಜಿಸಲು ಸಹ ಅನುಮೋದನೆ ನೀಡಿದೆ.

ಇಲಾಖಾ ಅಧಿಕಾರಿಗಳು

ಕ್ರ.ಸಂ.	ಹುದ್ದೆ/ಹೆಸರು	ಸಂಖ್ಯೆ	ವೇತನ ಶ್ರೇಣಿ	ನೇಮಕಾತಿ ವಿಧಾನ	ಹುದ್ದೆಯ ಸ್ವರೂಪ
1	ಪ್ರೋಗ್ರಾಮ್ ಮ್ಯಾನೇಜರ್–ಕೇಂದ್ರ ಸ್ಥಾನ ಸಹಾಯಕರು ಗ್ರೂಪ್–ಎ	1	ರೂ. 14050–25050	ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ	ಶಾಶ್ವತ
2	ಸಹಾಯಕ ಪ್ರೋಗ್ರಾಮ ಮ್ಯಾನೇಜರ್–ಹಿರಿಯ ಉಪ–ನೋಂದಣಾಧಿಕಾರಿ ಗ್ರೂಪ್–ಬಿ	1	ರೂ. 11400–21600	ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ	ಶಾಶ್ವತ
3	Typist CUM/Data Entry-Operator Group-C	1	ರೂ. 5800–10500	ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ	ಶಾಶ್ವತ

ತಾಂತ್ರಿಕ ಸದಸ್ಯರು

ಕ್ರ.ಸಂ.	ಹುದ್ದೆ ಹೆಸರು	ಸಂಖ್ಯೆ	ವೇತನ / ಸಂಭಾವನೆ	ನೇಮಕಾತಿ ವಿಧಾನ	ಹುದ್ದೆಯ ಸ್ವರೂಪ
1	Project Manager (O & M)	1	ಇ–ಆಡಳಿತ ಇಲಾಖೆಯ ದರಗಳ ಆಧಾರದ ಮೇಲೆ ನಿರ್ಧಾರ	ಹೊರಗುತ್ತಿಗೆ ಆಧಾರದನ್ವಯ	ಶಾಶ್ವತ
2	Project Manager (New IT Initiatives)	1	ಇ–ಆಡಳಿತ ಇಲಾಖೆಯ ದರಗಳ ಆಧಾರದ ಮೇಲೆ ನಿರ್ಧಾರ	ಹೊರಗುತ್ತಿಗೆ ಆಧಾರದನ್ವಯ	ಶಾಶ್ವತ
3	Technical Consultant	2	ಇ–ಆಡಳಿತ ಇಲಾಖೆಯ ದರಗಳ ಆಧಾರದ ಮೇಲೆ ನಿರ್ಧಾರ	ಹೊರಗುತ್ತಿಗೆ ಆಧಾರದನ್ವಯ	ಶಾಶ್ವತ
4	Data base Consultant	1	ಇ–ಆಡಳಿತ ಇಲಾಖೆಯ ದರಗಳ ಆಧಾರದ ಮೇಲೆ ನಿರ್ಧಾರ	ಹೊರಗುತ್ತಿಗೆ ಆಧಾರದನ್ವಯ	ಶಾಶ್ವತ

ಹೊರ ಗುತ್ತಿಗೆ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ಮತ್ತು ನಿಯಮಾವಳಿ ಪಾಲಿಸಿ ಭರ್ತಿಮಾಡಲು ಕ್ರಮವಹಿಸಬೇಕು. ಸದರಿ ಹುದ್ದೆಗಳಿಗೆ ಸಂಭಾವನೆ ನಿಗಧಿಪಡಿಸುವಾಗ ಇ–ಆಡಳಿತ ಇಲಾಖೆಯ ದರಗಳನ್ನು ಆಧಾರವಾಗಿಟ್ಟುಕೊಂಡು ನಿರ್ಧರಿಸಬೇಕು.

ಕಾವೇರಿ ಯೋಜನೆಯ ಉಸ್ತುವಾರಿ ಘಟಕಕ್ಕೆ ಸಂಬಂಧಿಸಿದ ವೆಚ್ಚವನ್ನು 2030–03–001–2–04 Charges of Supply of registered documents-051 General Expenses ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಭರಿಸಲು ಅನುಮತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : FD 480 Exp-7/2010, ದಿನಾಂಕ : 1–9–2010 ರನ್ವಯ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಕೆ. ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ.
(ನೋಂದಣಿ ಮತ್ತು ಮುದ್ರಾಂಕ)

ಪಿ. ಆರ್. 2814

ಕಂದಾಯ ಸಚಿವಾಲಯ

ವಿಷಯ : ಶ್ರೀ ವೈ.ಬಿ. ಕೃಷ್ಣ, ಹಿಂದಿನ ತಹಶೀಲ್ದಾರ್, ಕೋಲಾರ ತಾಲ್ಲೂಕು ಪ್ರಸ್ತುತ ಚುನಾವಣಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ ಇವರ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣ ಕುರಿತು–ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :

1. ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಎಲ್‌ಒಕೆ/ಐಎನ್‌ವಿ(ಜೆ)/ಬಿಡಿ–6/ಸಿಆರ್/4/2003/ಕೆಎಲ್‌ಆರ್, ದಿನಾಂಕ : 16–7–2003.
2. ಸರ್ಕಾರದ ಆದೇಶ ಸಂಖ್ಯೆ : ಕಂಇ 21 ಎಡಿಇ 2003, ದಿನಾಂಕ : 27–8–2003.
3. ಪೊಲೀಸ್ ಮಹಾ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಪತ್ರ ಸಂಖ್ಯೆ : ಲೋಅ/ತನಿಖೆ/ಪೊವಿ/ಬಿಡಿ/6/ಪ್ರಸಂ/4/03/ಕೆಎಲ್‌ಆರ್, ದಿನಾಂಕ : 8–9–2003.
4. ಸರ್ಕಾರದ ಆದೇಶ ಸಂಖ್ಯೆ : ಕಂಇ 21 ಎಡಿಇ 2003, ದಿನಾಂಕ : 28–1–2004.
5. ಸರ್ಕಾರದ ಆದೇಶ ಸಂಖ್ಯೆ : ಕಂಇ 21 ಎಡಿಇ 2003, ದಿನಾಂಕ : 5–4–2004.
6. Court of the Principal Sessions Judge at Kolar ಸಿ.ಸಿ. ಸಂಖ್ಯೆ : 3/2004, ದಿನಾಂಕ : 16–7–2005ರ ತೀರ್ಪು
7. ಮಾನ್ಯ ಉಚ್ಚನ್ಯಾಯಾಲಯದ ಕ್ರಿಮಿನಲ್ ಅಪೀಲು ಸಂಖ್ಯೆ : 2186/2005, ದಿನಾಂಕ : 6–4–2010ರ ತೀರ್ಪು
8. ಶ್ರೀ ವೈ.ಬಿ. ಕೃಷ್ಣ ತಹಶೀಲ್ದಾರ್, ಚುನಾವಣಾ ಶಾಖೆ, ಜಿಲ್ಲಾಧಿಕಾರಿಗಳ ಕಛೇರಿ, ರಾಮನಗರ ಇವರು ಸರ್ಕಾರಕ್ಕೆ ಸಲ್ಲಿಸಿರುವ ದಿನಾಂಕ : 5–5–2010ರ ಮನವಿ.
9. ಸರ್ಕಾರದ ಪತ್ರ ಸಂಖ್ಯೆ : ಕಂಇ 26 ಎಡಿಇ 2010, ದಿನಾಂಕ : 25–5–2010.
10. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ (ಜೆ) ಬಿಡಿ–6/ಸಿಆರ್–4/2003/ಕೋಲಾರ ದಿನಾಂಕ : 12–7–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ದಿನಾಂಕ : 16–7–2003 ರ ಪತ್ರದಲ್ಲಿ, ಕೋಲಾರ ತಾಲ್ಲೂಕಿನ ತಹಶೀಲ್ದಾರರಾದ ಶ್ರೀ ವೈ.ಬಿ. ಕೃಷ್ಣ ರವರು ಸದರಿ ತಾಲ್ಲೂಕಿನ ಜನ್ನಘಟ್ಟ ಗ್ರಾಮದ ಸರ್ವೆ ನಂ. 275 ರಲ್ಲಿ ಫಿರ್ಯಾದುದಾರರಾದ ಶ್ರೀ ಗೋಪಾಲಕೃಷ್ಣ ಎಂಬುವವರ ಚಿಕ್ಕಪ್ಪನ ಹೆಸರಿನಲ್ಲಿರುವ ಜಮೀನಿನಲ್ಲಿ ಇಟ್ಟಿಗೆ ಕಾರ್ಖಾನೆಯನ್ನು ಸ್ಥಾಪಿಸಲು ಭೂ ಪರಿವರ್ತನೆಗಾಗಿ ರೂ. 20,000/– ಗಳ ಅಕ್ರಮ ಸಂಭಾವನೆ ಒತ್ತಾಯಿಸಿದ್ದು, ಆ ಮೊತ್ತದಲ್ಲಿ ರೂ. 10,000/–ಗಳನ್ನು ದಿನಾಂಕ : 27–6–2003 ರಂದು ನೀಡುವಂತೆ ಹಾಗೂ ಉಳಿದ ರೂ. 10,000/–ಗಳನ್ನು ನಂತರ ನೀಡುವಂತೆ ಸೂಚಿಸಿರುತ್ತಾರೆಂದು, ಇಂತಹ ಅಕ್ರಮ ಸಂಭಾವನೆಯನ್ನು ತಹಶೀಲ್ದಾರ್‌ರಿಗೆ ಕೊಡಲು ಇಷ್ಟ ಪಡದ ಕಾರಣ ಫಿರ್ಯಾದುದಾರರಾದ ಶ್ರೀ ಗೋಪಾಲಕೃಷ್ಣ ರವರು ದಿನಾಂಕ : 27–6–2003 ರಂದು ಕೋಲಾರ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ಲಿಖಿತ ದೂರಿನನ್ವಯ ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್ ಕೋಲಾರ ತಾಲ್ಲೂಕು, ಕೋಲಾರ ಇವರ ವಿರುದ್ಧ 1988ರ ಭ್ರಷ್ಟಾಚಾರ ನಿರೋಧಕ ಕಾಯ್ದೆ ಕಲಂ 7,13(1) (ಡಿ) ಜೊತೆಯಲ್ಲಿ ಓದಲಾದ ಕಲಂ 13(2) ರ ಅಡಿಯಲ್ಲಿ ಮೊಕದ್ದಮೆ ಸಂಖ್ಯೆ : 4/2003 ನ್ನು ದಾಖಲಿಸಿಕೊಂಡು ತನಿಖೆಯನ್ನು ಪ್ರಾರಂಭಿಸಿದ್ದು, ಪಂಚ ಸಾಕ್ಷಿಗಳೊಡನೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿ ವರ್ಗದವರು ದಿನಾಂಕ : 27–6–2003 ರಂದು ಕೋಲಾರ ತಾಲ್ಲೂಕು ತಹಶೀಲ್ದಾರ ಕಛೇರಿಯಲ್ಲಿ ಬೀಸಿದ ಟ್ರಾಪ್ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು, ಕೋಲಾರ ಇವರು ಸುಗಮ ತನಿಖೆಗೆ ಅಡ್ಡಿ ಉಂಟು ಮಾಡಿ ಹಸ್ತಕ್ಷೇಪ ಮಾಡುವ ಹಾಗೂ ಅವರ ವಿರುದ್ಧ ಇರುವ ಸಾಕ್ಷಿ ಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಇವರನ್ನು ಈ ಕೂಡಲೇ ಅಮಾನತ್ತಿನಲ್ಲಿಡಬೇಕೆಂದು ಮತ್ತು ಅವರ ಲೀನ್ (ಸ್ಥಾನ)ವನ್ನು ಬೇರೆ ಕಡೆಗೆ ವರ್ಗಾಯಿಸಲು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (2) ರ ಸರ್ಕಾರದ ದಿನಾಂಕ : 27–8–2003ರ ಆದೇಶದಲ್ಲಿ, ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (3)ರ ದಿನಾಂಕ : 8–9–2003ರ ಪತ್ರದಲ್ಲಿ, ಆಪಾದಿತ ನೌಕರರಾದ ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಇವರನ್ನು ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ 1988 ರ ಕಲಂ 7,13(1) (ಡಿ) ಜತೆಯಲ್ಲಿ ಓದಲಾದ 13 (2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಭ್ರಷ್ಟಾಚಾರ ಕಾಯ್ದೆ 1988ರ ಕಲಂ 19(1) (ಬಿ) ರನ್ವಯ ಅಭಿಯೋಜನಾ ಮಂಜೂರಾತಿಯನ್ನು ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (4)ರ ದಿನಾಂಕ : 28–1–2004ರ ಸರ್ಕಾರದ ಆದೇಶದಲ್ಲಿ, ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಇವರನ್ನು ಲಂಚ ನಿರೋಧಕ ಕಾಯ್ದೆ ಕಲಂ 7, 13(1)(ಡಿ) ಜತೆಯಲ್ಲಿ ಓದಲಾದ 13(2) ರ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಗಗೊಳಿಸಲು ಮಂಜೂರಾತಿ ನೀಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ದಿನಾಂಕ : 5–4–2004 ರ ಸರ್ಕಾರದ ಆದೇಶದಲ್ಲಿ, ಶ್ರೀ ವೈ.ಬಿ.ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು, ಅಮಾನತ್ತಿನಿಂದ ತೆರವುಗೊಳಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (6) ರ ದಿನಾಂಕ : 16–7–2005ರ ತೀರ್ಪಿನಲ್ಲಿ, ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್ ಇವರ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣವು ವಿಶೇಷ ಸಿ.ಸಿ. ಸಂಖ್ಯೆ : 3/2004 ರಲ್ಲಿ ಕೋಲಾರ [illegible] ಮಾಡಲಾದ ಆರೋಪಗಳು ಸ್ಥಿರ [illegible] ಆರೋಪಿಯನ್ನು [illegible] (acquit) ಮಾಡಿ ತೀರ್ಪು ನೀಡಲಾಗಿರುತ್ತದೆ. ಈ ತೀರ್ಪಿನ ವಿರುದ್ಧ ಮಾನ್ಯ ಲೋಕಾಯುಕ್ತರು, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ : 2186/2005 ನ್ನು ದಾಖಲಿಸಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ : (7) ರ ದಿನಾಂಕ : 6–4–2010 [illegible] ಗುರಿಯಾಗಿಲ್ಲವೆಂದು ತೀರ್ಮಾನಿಸಿ ಸದರಿ ಮೇಲ್ಮನವಿಯನ್ನು ವಜಾಗೊಳಿಸಿ ತೀರ್ಪು ನೀಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (8) ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್ ರವರು ದಿನಾಂಕ : 5-5-2010 ರಂದು ಮನವಿ ಸಲ್ಲಿಸಿ, ಮಾನ್ಯ ಲೋಕಾಯುಕ್ತರು ಹೂಡಿದ್ದ ಮೊಕದ್ದಮೆಗಳು ಸಕಾರಣಗಳೊಂದಿಗೆ ವಜಾ ಮಾಡಲ್ಪಟ್ಟಿರುವುದರಿಂದ, ತಮಗೆ ಸಲ್ಲಬೇಕಾದಂತಹ ಆರ್ಥಿಕ ಮತ್ತು ಕಾಲಕಾಲಕ್ಕೆ ಸಲ್ಲುವ ಬಡ್ತಿಗಳನ್ನು ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (9)ರ ದಿನಾಂಕ :25-5-2010ರ ಸರ್ಕಾರದ ಪತ್ರದಲ್ಲಿ, ಮಾನ್ಯ ಲೋಕಾಯುಕ್ತರನ್ನು ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು-ಇವರ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣದ ಇತ್ತೀಚಿನ ಹಂತವನ್ನು ತಿಳಿಸುವಂತೆ ಕೋರಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ : (10) ರ ಕರ್ನಾಟಕ ಲೋಕಾಯುಕ್ತರವರ ದಿನಾಂಕ : 12-7-2010 ರ ಪತ್ರದಲ್ಲಿ, ಕೋಲಾರ ಲೋಕಾಯುಕ್ತ ಠಾಣೆ ಮೊಕದ್ದಮೆ ಸಂಖ್ಯೆ : 04/2003 ರ ಪ್ರಕರಣದ ಆರೋಪಿತರಾದ ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಇವರ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣದಲ್ಲಿ ಕೋಲಾರ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಲಯವು ನೀಡಿದ ತೀರ್ಪಿನ ವಿರುದ್ಧ ಲೋಕಾಯುಕ್ತ ಪೊಲೀಸರು ಆರೋಪಿತರ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲು ಸಂಖ್ಯೆ : 2186/2005 ರಲ್ಲಿ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ : 6-4-2010 ರಂದು ವಜಾಗೊಳಿಸಿರುತ್ತದೆ. ಈ ಆದೇಶದ ವಿರುದ್ಧ ಸರ್ಕಾರವು ಮೇಲ್ಮನವಿ ಸಲ್ಲಿಸದಿರಲು ತೀರ್ಮಾನಿಸಿದೆ ಎಂಬ ಮಾಹಿತಿಯನ್ನು ಸರ್ಕಾರಕ್ಕೆ ತರುತ್ತಾ, ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 6555 ಹೆಚ್.ಸಿ.ಪಿ-2/2010 ದಿನಾಂಕ : 30-6-2010 ರ ಪತ್ರದ ಪ್ರತಿಯನ್ನು ಸಹ ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಇವರ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣವನ್ನು ಮಾನ್ಯ ಲೋಕಾಯುಕ್ತರು ತಿಳಿಸಿರುವಂತೆ ಮುಕ್ತಾಯಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 21 ಎಡಿಇ 2003, ಬೆಂಗಳೂರು, ದಿನಾಂಕ : 26-10-2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ವೈ.ಬಿ. ಕೃಷ್ಣ, ತಹಶೀಲ್ದಾರ್, ಕೋಲಾರ ತಾಲ್ಲೂಕು ಪ್ರಸ್ತುತ ತಹಶೀಲ್ದಾರ್, ಚುನಾವಣಾ ಶಾಖೆ, ಜಿಲ್ಲಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ರಾಮನಗರ ಇವರ ವಿರುದ್ಧ ದಾಖಲಾದ ಟ್ರಾಪ್ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ ಹಾಗೂ ಈ ಹಿಂದೆ ಅಮಾನತ್ತಿನಲ್ಲಿಟ್ಟ ಅವಧಿಯನ್ನು ಕರ್ತವ್ಯದ ಅವಧಿ ಎಂದು ಪರಿಗಣಿಸಿ ಆದೇಶಿಸಿದೆ.

ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ, ಶ್ರೀಯುತರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ನೀಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ. (ಸೇವೆಗಳು-3)

ಪಿ. ಆರ್. 2815

ಸಹಕಾರ ಸಚಿವಾಲಯ

ವಿಷಯ : ಕೋಣಸಾಲೆ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು ಇದರ ವಿಶೇಷಾಧಿಕಾರಿಯವರ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ: ಸಹಕಾರ ಸಂಘಗಳ ಅಪರ ನಿಬಂಧಕರ ಪತ್ರ ಸಂಖ್ಯೆ: ಅನಿ/ಡೈರಿ-1/84/2010-11, ದಿನಾಂಕ: 27.08.2010

ಪ್ರಸ್ತಾವನೆ:

ಮದ್ದೂರು ತಾಲ್ಲೂಕಿನ ಕೋಣಸಾಲೆ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿ ಸದಸ್ಯರ ಸಾಮೂಹಿಕ ರಾಜೀನಾಮೆಯಿಂದಾಗಿ ಶೂನ್ಯತೆ ಉಂಟಾಗಿದ್ದರಿಂದ ಸಂಘದ ಆಡಳಿತ ಮಂಡಳಿಯನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 31ರಂತೆ ರದ್ದುಪಡಿಸಿ, 6 ತಿಂಗಳ ಅವಧಿಗೆ ವಿಶೇಷಾಧಿಕಾರಿಯವರನ್ನು ದಿನಾಂಕ: 21.01.2009ರ ಆದೇಶದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮಂಡ್ಯ ಉಪವಿಭಾಗ, ಮಂಡ್ಯ ಇವರನ್ನು ನೇಮಿಸಿರುತ್ತಾರೆ. ತದನಂತರ ವಿಶೇಷಾಧಿಕಾರಿಯವರ ಅವಧಿಯನ್ನು ದಿನಾಂಕ: 20.07.2010ರವರೆಗೆ ವಿಸ್ತರಿಸಿ ಆದೇಶಿಸಿರುತ್ತಾರೆ.

ಕೋಣೆಸಾಲೆ ಗ್ರಾಮದಲ್ಲಿ ಮಳೆಯು ಪ್ರಾರಂಭವಾಗಿದ್ದು, ಗ್ರಾಮದ ಎಲ್ಲಾ ರೈತರು ಬಿತ್ತನೆ ಕಾರ್ಯದಲ್ಲಿ ತೊಡಗಿರುವುದರಿಂದ ಹಾಗೂ ಸಂಘದ ಲೆಕ್ಕ ಪರಿಶೋಧನೆ ನಡೆಯುತ್ತಿದ್ದು ಇದು ಮುಕ್ತಾಯಗೊಂಡ ನಂತರ ಆಡಳಿತ ಮಂಡಳಿಯನ್ನು ಪುನರ್ ರಚಿಸಲು ಸದಸ್ಯರು ಅಪೇಕ್ಷಿಸಿರುವುದರಿಂದ, ವಿಶೇಷಾಧಿಕಾರಿಯವರ ಅವಧಿಯನ್ನು ದಿನಾಂಕ: 21.07.2010ರಿಂದ 20.01.2011ರವರೆವಿಗೆ ವಿಸ್ತರಿಸುವಂತೆ ಸಂಘದ ಕಾರ್ಯದರ್ಶಿಯವರು ಕೋರಿರುತ್ತಾರೆ. ಅದರಂತೆ ದಿನಾಂಕ:21.07.2010 ರಿಂದ 20.01.2011ರವರೆವಿಗೆ ವಿಶೇಷಾಧಿಕಾರಿಯವರ ಅವಧಿಯನ್ನು ವಿಸ್ತರಿಸಿ ಆದೇಶಿಸುವಂತೆ ಸಹಕಾರ ಸಂಘಗಳ ಅಪರ ನಿಬಂಧಕರು ಮೇಲೆ ಓದಲಾದ ಪತ್ರದಲ್ಲಿ ಶಿಫಾರಸು ಮಾಡಿರುತ್ತಾರೆ.

ಸಹಕಾರ ಸಂಘಗಳ ಅಪರ ನಿಬಂಧಕರ ಪ್ರಸ್ತಾವೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 175 ಸಿಎಲ್‌ಎಂ 2010, ಬೆಂಗಳೂರು, ದಿನಾಂಕ: 19-10-2010.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 121ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಸದರಿ ಅಧಿನಿಯಮದ ಪ್ರಕರಣ 31(1) ಈ ಕೆಳಕಂಡ ಮಾರ್ಪಾಟುಗಳೊಂದಿಗೆ ಕೋಣಸಾಲೆ ಹಾಲು ಉತ್ಪಾದಕರ ಸಹಕಾರ ಸಂಘ ನಿ., ಮದ್ದೂರು ತಾಲ್ಲೂಕು ಇದಕ್ಕೆ ಅನ್ವಯವಾಗತಕ್ಕದ್ದೆಂದು ನಿರ್ದೇಶಿಸುತ್ತದೆ, ಏಕೆಂದರೆ:-

31ರ ಪ್ರಕರಣದಲ್ಲಿ'

(1)ನೇ ಉಪಪ್ರಕರಣದಲ್ಲಿರುವ "ಒಂದು ವರ್ಷ" ಎಂಬ ಪದಗಳಿಗೆ ಬದಲಾಗಿ "ಹದಿನೆಂಟು ತಿಂಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಸೂಚನೆ: ಪ್ರಕರಣ 31 ಉಪ-ಪ್ರಕರಣ(1)ಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ: 20.01.2011ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ ಪ್ರಕರಣ 31 ಉಪ-ಪ್ರಕರಣ (1)ರಲ್ಲಿನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್.ಎಸ್.ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ
(ಸಹಕಾರ ಇಲಾಖೆ)

ಪಿ.ಆರ್ 2856

DPAR SECRETARIAT

Sub :- Deputation of Dr. Amita Prasad. IAS to Kolkota- Orders-reg.

Read :- 1) D.O. Letter No.12021/06/2008-Trg.I. dated 10.11.2010 from Government of India, DOPT New Delhi.

2) Letter No. PRS.CR-16/2010-2011. Dated 16-11-2010 from Dr. Amita Prasad, IAG, DG, ATI, Mysore.

Preamble:

In D.O. Letter dated 10.11.2010 read at (1) above, the Government of India, DOPT Ministry of Personnel, Public Grievances and Pensions, New Delhi, has requested Dr. Amita Prasad, Director General, Administrative Training Institute, Mysore to visit Kolkota any days during the period of 8-26th November, 2010 to assess the competence of trainers being developed during the programme. organized by the ATI Kolkota.

Dr. Amita Prasad, IAS in her letter dated 16.11.2010 read at (2) above has requested permission of the Government to visit Kolkota on 24th and 25th of November, 2010 for the above purpose.

After examining the proposal in details, the Government Orders as follows:

Government Order No. DPAR 229 SIS 2010, Bangalore, dated : 23-11-2010

Sanction is accorded for the deputation of Dr. Amita Prasad, IAS (KN-85), Principal Secretary to Government, Co-operation Department, Bangalore and Director General, Administrative Training Institute, Mysore to visit Administrative Training Institute. kolkota on 24.11.2010 and 25.11.2010 to assess the competence of Trainers, being developed during the programme, in the Training of Experiential Learning Tools (ELT) Master Trainer Development Programme, Organized by the Department of Personnel & Training, Government of India, New Delhi.

The period of deputation inluding the time reasonably required for the to and fro journey shall be treated as on 'duty' and the officer is also entitled to draw advance TA/DA as per rules, subject to adjustments in the final bill.

By Order and in the name of the Governor of Karnataka
K.G. Anantha
Under Secretary to Government
DP&AR(Services-1)

PR.No. 2857

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : 1976ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ)ಕಾಯ್ದೆ ಹಾಗೂ ನಿಯಮಗಳ ಅಡಿಯಲ್ಲಿ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾದ ವಿಮುಕ್ತಿ ಟ್ರಸ್ಟ್, ನಾಗರಬಾವಿ ಬೆಂಗಳೂರು ಇವರ ಸದಸ್ಯತ್ವವನ್ನು ಸೇರ್ಪಡೆ ಮಾಡುವ ಕುರಿತು.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ : ಆರ್.ಡಿ.ಪಿ 4.ಆರ್‌ಬಿಎಲ್.96 ದಿ: 20.2.1997.

2) ಶ್ರೀ ಕಿರಣ್ ಕಮಲ್ ಪ್ರಸಾದ್ ಕಾರ್ಯದರ್ಶಿ ವಿಮುಕ್ತಿ ಟ್ರಸ್ಟ್, ನಾಗರಬಾವಿ ಬೆಂಗಳೂರು ಇವರ ಮನವಿ ದಿ: 17.04.2010

3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿ: 27.09.2010ರಂದು ನಡೆದ ರಾಜ್ಯದ ಉನ್ನತ ಅಧಿಕಾರದ ಸಮಿತಿಯ ಸಭೆ ನಡವಳಿಗಳು.

ಪ್ರಸ್ತಾವನೆ:

ರಾಜ್ಯದಲ್ಲಿ ಜೀತದಾಳುಗಳ ಗುರುತಿಸುವಿಕೆ, ಬಿಡುಗಡೆ ಹಾಗೂ ಪುನರ್ವಸತಿ, ಮತ್ತು 1976ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆಯ ಪರಿಣಾಮಕಾರಿ ಅನುಷ್ಠಾನ ಸಂಬಂಧ ಕೈಗೊಂಡ ಕ್ರಮಗಳ ಬಗ್ಗೆ ರಾಜ್ಯ ಮಟ್ಟದಲ್ಲಿ ಉಸ್ತುವಾರಿ ಪರಿಶೀಲನೆ ಮಾಡುವ [illegible] ಆದೇಶ ಸಂಖ್ಯೆ: ಆರ್‌ಡಿಪಿ 4. ಆರ್.ಬಿ.ಎಲ್.96 ದಿ: 20.2.1997 ರಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ [illegible] ಅಧಿಕಾರದ ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ.

ಶ್ರೀ ಕಿರಣ್ ಕಮಲ್ ಪ್ರಸಾದ್ ಕಾರ್ಯದರ್ಶಿ ವಿಮುಕ್ತಿ ಟ್ರಸ್ಟ್, ನಾಗರಬಾವಿ ಬೆಂಗಳೂರು ಇವರು ಸರ್ಕಾರಕ್ಕೆ ದಿ: 17.04.2010ರಂದು ಮನವಿಯೊಂದನ್ನು ಸಲ್ಲಿಸಿ ರಾಜ್ಯ ಮಟ್ಟದ ಜೀತ ಪದ್ದತಿ ನಿರ್ಮೂಲನೆ ಸಂಬಂಧ ಉನ್ನತ ಅಧಿಕಾರದ ಸಮಿತಿಯಲ್ಲಿ ವಿಮುಕ್ತಿ ದತ್ತಿ / ಜೀವಿಕವನ್ನು ಮತ್ತು ಕರ್ನಾಟಕ ಜೀತದಾಳುಗಳು ಹಾಗೂ ಕೃಷಿ ಕಾರ್ಮಿಕರ ಒಕ್ಕೂಟವನ್ನು ಸದಸ್ಯರನ್ನಾಗಿ ಮಾಡಿ ಸೇರಿಸಬೇಕೆಂದು ಕೋರಿಕೆಯನ್ನಿಟ್ಟಿರುತ್ತಾರೆ. ಉಲ್ಲೇಖ (3) ರಂತೆ ರಾಜ್ಯ ಮಟ್ಟದ ಉನ್ನತ ಅಧಿಕಾರದ ಸಮಿತಿಯು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 27.9.2010ರಂದು ಸಭೆ ಸೇರಿ ಸುಧೀರ್ಘ ಚರ್ಚೆ ನಡೆಸಿತು. ಈ ಸಮಿತಿಯು ಸಭೆಯಲ್ಲಿ "ಜೀತಗಾರಿಕೆ ಪದ್ಧತಿ (ನಿರ್ಮೂಲನೆ) ಕಾಯ್ದೆ ಹಾಗೂ ನಿಯಮಗಳು 1976ರ ಅಡಿಯಲ್ಲಿ ಜೀತಪದ್ಧತಿ ನಿರ್ಮೂಲನೆಗೆ ಸಂಬಂಧಿಸಿದಂತೆ ಅನೇಕ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ತಮ್ಮನ್ನು ತೊಡಗಿಸಿಕೊಂಡಿದ್ದು, ಸಾಕಷ್ಟು ಆಸಕ್ತಿವಹಿಸಿ ಕೆಲಸವನ್ನು ನಿರ್ವಹಿಸುತ್ತಿರುವುದರಿಂದ ಇಂತಹ ಸಂಸ್ಥೆಗಳಲ್ಲಿ ಒಂದಾದ ವಿಮುಕ್ತಿ ಟ್ರಸ್ಟ್, ನಾಗರಬಾವಿ, ಬೆಂಗಳೂರು ಇದರ ಕಾರ್ಯದರ್ಶಿಯಾದ ಶ್ರೀ ಕಿರಣ್ ಕಮಲ್ ಪ್ರಸಾದ್ ಇವರನ್ನು ಉನ್ನತ ಅಧಿಕಾರದ ಸಮಿತಿಯ ಸದಸ್ಯರನ್ನಾಗಿ ನೇಮಿಸಿಕೊಳ್ಳುವ ಕುರಿತು ತೀರ್ಮಾನಿಸಿತು. ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/08/ಆರ್‌ಬಿಎಲ್/2010, ಬೆಂಗಳೂರು ದಿನಾಂಕ: 04.11.2010.

1976ರ ಜೀತಗಾರಿಕೆ ಪದ್ಧತಿ (ನಿರ್ಮೂಲನೆ)ಕಾಯ್ದೆ ಹಾಗೂ ನಿಯಮಗಳ ಅಡಿಯಲ್ಲಿ ಜೀತ ಪದ್ಧತಿ ನಿರ್ಮೂಲನೆ ಸಂಬಂಧ ರಾಜ್ಯ ಮಟ್ಟದ ಉನ್ನತ ಅಧಿಕಾರದ ಸಮಿತಿಯಲ್ಲಿ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯಾದ ವಿಮುಕ್ತಿ ಟ್ರಸ್ಟ್, ನಾಗರಬಾವಿ, ಬೆಂಗಳೂರು ಇವರ ಸದಸ್ಯತ್ವವು ಅವಶ್ಯಕತೆ ಇರುವುದನ್ನು ಮನಗೊಂಡು ಸದರಿಯವರನ್ನು ಸದಸ್ಯರನ್ನಾಗಿ ಸೇರ್ಪಡೆಗೊಳಿಸಿ ಆದೇಶ ಮಾಡಿದೆ.

ಈ ಆದೇಶವನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು ದಿನಾಂಕ: 08.10.2010ರಂದು ಉನ್ನತ ಅಧಿಕಾರದ ಸಮಿತಿ ಸಭೆಯ ನಡಾವಳಿಯಲ್ಲಿ ಅನುಮೋದಿಸಿದಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 2858

ಪಿ. ರವಿ ಕುಮಾರ್
ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಕಂದಾಯ ಸಚಿವಾಲಯ

ವಿಷಯ : ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಅಧ್ಯಕ್ಷರ ಹುದ್ದೆಯನ್ನು ಮೇಲ್ದರ್ಜೆಗೇರಿಸುವ ಕುರಿತು.

ಓದಲಾಗಿದೆ: 1) ಅಧಿಸೂಚನೆ ಸಂಖ್ಯೆ. ಡಿಪಿಎಆರ್ 431 ಎಸ್‌ಎಎಸ್ 2010: ದಿ: 29–10–2010

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 29–10–2010ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ಬಿ.ಎಲ್. ಶ್ರೀಧರ್, ಐಎಎಸ್ ಅಧ್ಯಕ್ಷರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣರವರಿಗೆ ಐಎಎಸ್ ವೃಂದದ ಅಪೆಕ್ಸ್ ವೇತನ ಶ್ರೇಣಿ ರೂ.80.000–00ದ ನಿಗದಿತ ವೇತನ ಶ್ರೇಣಿಗೆ ಪದೋನ್ನತಿ ನೀಡಿ ದಿನಾಂಕ: 31–10–2010ರ ಅಪರಾಹ್ನ ಜಾರಿಗೆ ಬರುವಂತೆ ಅಧಿಸೂಚಿಸಲಾಗಿದೆ. ಹಾಗೂ ಸದರಿ ಹುದ್ದೆಯನ್ನು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ವೃಂದದ ಹುದ್ದೆಗೆ ಸಮಾನಾಂತರವಾದ ಹುದ್ದೆಯನ್ನಾಗಿ ಉನ್ನತೀಕರಿಸಲಾಗಿದೆ. ಹಾಗೂ ಮುಂದಿನ ಆದೇಶದವರೆಗೆ ಅದೇ ಉನ್ನತೀಕರಿಸಿದ ಹುದ್ದೆಯಲ್ಲಿ ಮುಂದುವರಿಸಲಾಗಿದೆ.

ಅಧ್ಯಕ್ಷರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ ಈ ಹುದ್ದೆಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ. ಡಿಪಿಎಆರ್ 431 ಎಸ್‌ಎಎಸ್ 2010 ದಿನಾಂಕ: 29–10–2010ರಂತೆ ಉನ್ನತೀಕರಿಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಆರ್ ಡಿ 328 ಆರ್‌ಎಂಇ 2010 ಬೆಂಗಳೂರು ದಿನಾಂಕ 22–11–2010.

ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಅಧ್ಯಕ್ಷರ ಹುದ್ದೆಯನ್ನು ಐ.ಎ.ಎಸ್. ವೃಂದದ ಅಪೆಕ್ಸ್ ವೇತನ ಶ್ರೇಣಿ ರೂ. 80,000–00 (ಎಂಬತ್ತು ಸಾವಿರ ರೂಪಾಯಿಗಳು) (ನಿಗದಿತ) ಶ್ರೇಣಿಯ ಹುದ್ದೆಯನ್ನಾಗಿ ಮತ್ತು ಸರ್ಕರದ ಅಪರ ಮುಖ್ಯ ಕಾರ್ಯದರ್ಶಿಯವರ ಪದ ವೃಂದದ ಹುದ್ದೆಗೆ ಸಮಾನಾಂತರವಾದ ಹುದ್ದೆಯನ್ನಾಗಿ ದಿನಾಂಕ: 01–11–2010ರ ಪೂರ್ವಾಹ್ನದಿಂದ ಜಾರಿಗೆ ಬರುವಂತೆ ಉನ್ನತೀಕರಿಸಲಾಗಿದೆ. ಸದರಿ ಅಧಿಕಾರಿಯವರನ್ನು ಮುಂದಿನ ಆದೇಶದವರೆಗೂ ಈ ಉನ್ನತೀಕರಿಸಿದ ಹುದ್ದೆಯಲ್ಲಿ ಮುಂದುವರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರಾಮಚಂದ್ರಯ್ಯ
ರಾಜ್ಯಪತ್ರಿನಿಧಿ ಹಾಗೂ ಪದನಿಮಿತ್ತ

ಪಿ.ಆರ್ 2859

ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ(ಕೆಎಟಿ ಮತ್ತು ಬಾನಿ)

ಕನ್ನಡ ಮತ್ತು ಸಂಸ್ಕೃತಿ ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಮದ್ದೂರು ತಾಲ್ಲೂಕು, ಶಿವಪುರ ಸತ್ಯಾಗ್ರಹ ಸೌಧದ ಹಾಗೂ ಆವರಣದಲ್ಲಿರುವ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ ಕಸಂವಾಪ್ರ 57 ಸ್ಮಾಪ್ರನಿ 2009, ದಿನಾಂಕ: 15.03.2010.
2) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಪತ್ರ ಸಂಖ್ಯೆ ಕಸನಿ 65 ವಿಸೌನಿ 2000-2001 ದಿನಾಂಕ: 20.08.2010.

ಪ್ರಸ್ತಾವನೆ:

ಮದ್ದೂರು ತಾಲ್ಲೂಕು ಶಿವಪುರ ಸತ್ಯಾಗ್ರಹ ಸೌಧದ ಹಾಗೂ ಆವರಣದಲ್ಲಿರುವ ಕಾಮಗಾರಿಗಳನ್ನು ಅಭಿವೃದ್ಧಿಪಡಿಸಲು ರೂ. 1.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ ಮಂಡ್ಯ ಜಿಲ್ಲೆ ಇವರಿಗೆ ಷರತ್ತುಗಳೊಂದಿಗೆ ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಮಂಜೂರು ಮಾಡಲಾಗಿರುತ್ತದೆ.

ಸದರಿ ಕಾಮಗಾರಿಗಾಗಿ ಬಿಡುಗಡೆ ಮಾಡಲಾದ ರೂ.1.00 ಕೋಟಿಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಡ್ರಾ ಮಾಡಲಾಗಿಲ್ಲ ಆದ್ದರಿಂದ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನವೀಕರಿಸಿ ಸದರಿ ಹಣವನ್ನು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಅವರಿಗೆ ಬಿಡುಗಡೆ ಮಾಡಿ ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಹಾಗೂ ಈ ವೆಚ್ಚವನ್ನು 2010-11ನೇ ಸಾಲಿನ ಲೆಕ್ಕಶೀರ್ಷಿಕೆ 2205-00-102-4-31-059 (ಯೋಜನೆ) ಸರ್ಕಾರ ಸೂಚಿಸುವ ಕಾರ್ಯಕ್ರಮ ಹಾಗೂ ಬಾಕಿ ಪ್ರಕರಣದಡಿ ಭರಿಸಬಹುದಾಗಿದೆ ಎಂದು ಮೇಲೆ (2) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರು ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದೆ ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಸಂವಾಪ್ರ 56 ಸ್ಮಾಪ್ರನಿ 2010, ಬೆಂಗಳೂರು, ದಿನಾಂಕ: 20.11.2010

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಮದ್ದೂರು ತಾಲ್ಲೂಕು ಶಿವಪುರ ಸತ್ಯಾಗ್ರಹ ಸೌಧದ ಮತ್ತು ಆವರಣದಲ್ಲಿರುವ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಲು ಈ ಕೆಳಕಂಡ ಷರತ್ತುಗಳನ್ನು ವಿಧಿಸಿ, ರೂ. 1.00 ಕೋಟಿಗಳನ್ನು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ, ಮಂಡ್ಯ ಇವರಿಗೆ ಬಿಡುಗಡೆ ಮಾಡಲು ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರಿಗೆ ಸರ್ಕಾರದ ಮಂಜೂರಾತಿ ನೀಡಿದೆ ಹಾಗೂ ಈ ಕಾಮಗಾರಿಯನ್ನು ರೂ. 1.00 ಕೋಟಿಗಳ ಮಿತಿಯಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

ಷರತ್ತುಗಳು:

1. ಕಾಮಗಾರಿಯ ಅಂದಾಜು ಪಟ್ಟಿಗೆ ಸಕ್ಷಮ ಪ್ರಾಧಿಕಾರದಿಂದ/ ತಾಂತ್ರಿಕ ಅನುಮೋದನೆಯನ್ನು ಪಡೆದು ಕಾಮಗಾರಿ ಕೈಗೊಳ್ಳುವುದು.
2. ಕಾಮಗಾರಿಯನ್ನು ಟೆಂಡರ್ ಕರೆದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರ ನಿಯಮಗಳು 2000ರಂತೆ ಕಾಮಗಾರಿ ಕೈಗೊಂಡ ನಂತರ ಪ್ರಗತಿ ಆಧರಿಸಿ, ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡುವುದು.
3. ಕಾಮಗಾರಿಯನ್ನು ಪೂರ್ಣಗೊಳಿಸಲು ಸಮಯ ನಿಗದಿಪಡಿಸಿಕೊಂಡು ಆ ಸಮಯದೊಳಗೆ ಪೂರ್ಣಗೊಳಿಸುವುದು.
4. ಕಾಮಗಾರಿಯನ್ನು ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ಇವರ ಮೇಲುಸ್ತುವಾರಿಯಲ್ಲಿ ಕೈಗೊಳ್ಳುವುದು.
5. ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ. 1.00 ಕೋಟಿಗಳಿಗೆ ನಿಗದಿಪಡಿಸಿಕೊಳ್ಳುವುದು.
6. ಹಣ ಬಳಕೆ ಪ್ರಮಾಣ ಪತ್ರ ಪಡೆಯುವುದು.

ಈ ಅನುದಾನವನ್ನು 2010-11ನೇ ಸಾಲಿನ ಲೆಕ್ಕ ಶೀರ್ಷಿಕೆ 2205-00-102-4-31-059 (ಯೋಜನೆ) ಸರ್ಕಾರ ಸೂಚಿಸುವ ಕಾರ್ಯಕ್ರಮ ಹಾಗೂ ಬಾಕಿ ಪ್ರಕರಣದಡಿ ಭರಿಸಬಹುದಾಗಿದೆ.

ಈ ಆದೇಶವನ್ನು ದಿನಾಂಕ: 29/10/2010ರ ಟಿಪ್ಪಣಿ ಸಂಖ್ಯೆ: ಶಿಇ 1996 ಐಎಫ್(ಬಿ&ಎ) 2010ರಲ್ಲಿ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿ.ಆರ್ 2860

ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಅಪಜೀ 123 ಎಫ್‌ಬ್ಲ್ಯೂಎಲ್ 2010, ಬೆಂಗಳೂರು ದಿನಾಂಕ: 16-11-2010

ಸರ್ಕಾರದ ಆದೇಶ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯೂಎಲ್ 1996 ದಿನಾಂಕ: 12-02-2002ರ ಆದೇಶ ಭಾಗದ ಕಂಡಿಕೆ -04ರ ಕ್ರಮ ಸಂಖ್ಯೆ: 01 ರ ಕಾಲಂ 04 ರಡಿ ಮಂಜೂರಾತಿ ಪ್ರಾಧಿಕಾರವಡಿ " ಕ್ಷೇತ್ರ ವ್ಯಾಪ್ತಿಯ ಅರಣ್ಯ ಸಂರಕ್ಷಣಾಧಿಕಾರಿ" ಎಂದು ಸೇರ್ಪಡೆ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಪಿ.ಆರ್. ಕಲಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ

ಪಿ.ಆರ್ 2873

ಕನ್ನಡ ಸಂಸ್ಕೃತಿ ಮತ್ತು ವಾರ್ತಾ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಕಸಂವಾಪ್ರ 146 ಕಸನಿ 2010, ಬೆಂಗಳೂರು ದಿನಾಂಕ: 22-11-2010

ಸರ್ಕಾರದ ಆದೇಶ ಸಂಖ್ಯೆ: 125 ಕಸನಿ 2009, ದಿನಾಂಕ 29.09.2010ರ ಆದೇಶ ಭಾಗದ 2ನೇ ಕಂಡಿಕೆಯಲ್ಲಿ "2010-11ನೇ ಸಾಲಿನ ಲೆಕ್ಕಶೀರ್ಷಿಕೆ 2205-00-101-4-31-059 (ಯೋಜನೆ)" ಎಂಬುದಕ್ಕೆ ಬದಲಾಗಿ "2010-11ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205-00-102-4-31-059 (ಯೋಜನೆ)ಯಡಿ" ಭರಿಸಬಹುದಾಗಿದೆಯೆಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಕೆ.ಸುಧಾಕರ ಶೆಟ್ಟಿ
ಸರ್ಕಾರದ ಉಪ ಕಾರ್ಯದರ್ಶಿ
ಪಿ.ಆರ್ 2874 ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

HORTICULTURE SECRETARIAT

ADDEMDUM

No. HCD 166 HPP 2010 BANGALORE, DATED 27.10.2010

In the operative portion of government Order No. HCD 92 HPP 2010 dated: 12.08.2010 in para 3 (a) under the head" Drip Irrigation" the following additional clause shall be inserted as Sl.No.3.

3) Subsidy will be provided at the rate of 75% all over the State to all categories of farmers up to an extent of 2 hectares per beneficiary family for oil palm crop. The subsidy will be 50% up to an extent between 2 ha. To 4 ha. As per Government of India guidelines. The expenditure towards this effect will be met under Oil Palm Development Scheme as per the guidelines of the said scheme.

By Order and in the name of the Governor of Karnataka
B.C. PRAKASH
PR.No. 2875 Under Secretary to Government
Horticulture Department

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ಸಿಆಸುಇ 421 ಸಅಸೇ 2010, ಬೆಂಗಳೂರು ದಿನಾಂಕ: 27-10-2010

ಶ್ರೀಮತಿ ಮೀನಾಕ್ಷಿ. ಎಂ ಬಾನಿ. ಕಾನೂನು ಕೋಶದ ಮುಖ್ಯಸ್ಥರು, ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರಿಗೆ Robe Allowance ಅನ್ನು ಮಂಜೂರು ಮಾಡಿರುವ ದಿನಾಂಕ: 01-09-2010ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 421 ಸಅಸೇ 2010ರಲ್ಲಿ ದಿನಾಂಕ: 01-11-2009 ರಿಂದ 31-10-2014ರ ಬ್ಲಾಕ್ ಅವಧಿಗೆ 3ನೇ ಬಾರಿಗೆ ಎಂದು ಸೇರಿಸಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎ.ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಪಿ.ಆರ್ 2876 ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ತಿದ್ದುಪಡಿ ಆದೇಶ

ಸಂಖ್ಯೆ: ವಾಕೈ 159 ಕೈಸೇವಿ 2010, ಬೆಂಗಳೂರು ದಿನಾಂಕ: 20-11-2010

ಸರ್ಕಾರದ ಆದೇಶ ಸಂಖ್ಯೆ: ವಾಕೈ 225 ಕೈಸೇವಿ 2010, ದಿನಾಂಕ: 19.12.2009 ರಲ್ಲಿ ಶ್ರೀ ಪಿ.ಹೆಚ್. ಮುಕುಂದಕೃಷ್ಣೇಗೌಡ, ಜಂಟಿ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರಿಗೆ " ದಿ: 10.04.2009 ರಿಂದ 15.09.2009ರ ಅವಧಿಯನ್ನು ಅವರ ಹಕ್ಕಿನಲ್ಲಿರುವ ರಜೆಯೆಂದು ಪರಿಗಣಿಸಿ" ಮಂಜೂರು ಮಾಡಲು ಆದೇಶಿಸಿರುವುದನ್ನು ಈ ಕೆಳಕಂಡಂತೆ ಭಾಗಶಃ ಮಾರ್ಪಡಿಸಲಾಗಿದೆ.

(i) "ದಿ: 10.04.2009ರಿಂದ 08.05.2009 ರವರೆಗಿನ ಅವಧಿಯನ್ನು ಸದರಿ ಅಧಿಕಾರಿಯವರ ಲೆಕ್ಕದಲ್ಲಿರುವ ರಜೆ" ಎಂಬುದಾಗಿ;

(ii) "ದಿ:09.05.2009ರಿಂದ 15.09.2009 ರವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 8 (15) (ಎಫ್)ರ ಪ್ರಕಾರ ಕಡ್ಡಾಯ ಕಾಯುವಿಕೆ ಅವಧಿ" ಎಂಬುದಾಗಿ ತಿದ್ದುಪಡಿ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್.ವಾಸನ್
ಪಿ.ಆರ್ 2877 ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. (ಸೇವೆಗಳು)

COMMERCE & INDUSTRIES SECRETARIAT

Sub :- Approval to the Project Proposal of M/s. Mahindra Aerospace Pvt. Ltd., to establish a unit of "Aerospace Components, Aero structure and Assemblies" at Narasapura Industrial Area, Kolar District.

Ref :- 1. Fax Massage from M/s Mahindra Aerospace Pvt. Ltd., dated 16.11.2010

2. Single file No: Kum/SHLCC/DD3/787/2010 from Karnataka Udyog Mitra.

***

Preamble:

M/s. Mahindra Aerospace Pvt. Ltd., proposes to establish a unit of 'Aerospace Components, Aero Structure and Assemblies" at Narasapura industrial Area, Kolar District, with an investment of 284.00 crores, generating employment to about 650 persons.

Government has examined the proposal in detail.

Hence the following Order.

Government Order No. CI 491 SPI 2010, Bangalore, dated : 19-11-2010

Government is pleased to accord in principle approval to the project proposal of M/s. Mahindra Aerospace pvt. Ltd., to establish a unit of "Aerospace Components, Aero Structure and Assemblies" at Narasapura industrial Area, kolar District, with an investments of 284.00 crores, generating employment to about 650 persons and extend the following infrastructure facilities, incentives and concessions.

Infrastructure Facilities :

1. **Land :** Allotment of 12 acres of Undeveloped Land at Narasapura Industrial Area, Kolar District at subsidized rate.
2. **Power :** To provide power suply line for the company up to the proposed industrial plot in Narasapura Industrial Area.
3. **Water :** To supply tertiary treated water for the proposed project and to ensure supply of required water during construction and operating period.
4. **Incentives and Concessions :** As per prevailing Industrial Policy of the State.

GENERAL TERMS AND CONDITIONS :

1. **Environment :** The promoters to obtain CFE and CFO from KSPCB and environmental clearance from MOEF, GOI.
2. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
3. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
4. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

A.V.Srinivasa Dikshit

Desk Officer (Technical Cell)

Commerce & Industries Department

P.R. 2878

ಶಿಕ್ಷಣ ಸಚಿವಾಲಯ

ವಿಷಯ : ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗಳ ಬದಲಿಗೆ Principal of UG College ಹಾಗೂ Principal of PG College ಎಂದು ಮರು ಪದನಾಮೀಕರಿಸುವ ಕುರಿತು ಆದೇಶ

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ : ಇಡಿ 126 ಡಿಸಿಇ 94 ದಿನಾಂಕ : 02-08-96 ಮತ್ತು ಸರ್ಕಾರಿ ಆದೇಶ ಸಂಖ್ಯೆ : ಇಡಿ 208 ಡಿಸಿಇ 97 ದಿನಾಂಕ : 08-10-97.

2. ಸರ್ಕಾರಿ ಆದೇಶ ಸಂಖ್ಯೆ : ಇಡಿ 37 ಯುಎನ್ ಇ 2009, ದಿನಾಂಕ : 24-12-2009.

3. ಕಾಲೇಜು ಶಿಕ್ಷಣ ನಿರ್ದೇಶಕರ ಪತ್ರ ಸಂಖ್ಯೆ : ಕಾಶಿಇ/149/ಯುಜಿಸಿ/2009-10/ಸಿವಿ-1, ದಿನಾಂಕ : 27-05-2010.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ : 02-08-96 ಮತ್ತು 08-10-97ರ ಆದೇಶಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿನ ಪ್ರಾಂಶುಪಾಲರ ಹುದ್ದೆಗಳನ್ನು ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಗ್ರೇಡ್-1 ಪ್ರಾಂಶುಪಾಲರು ಮತ್ತು ಗ್ರೇಡ್-2 ಪ್ರಾಂಶುಪಾಲರು ಎಂದು ವಿಂಗಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ : 24-12-2009ರ ಸರ್ಕಾರಿ ಆದೇಶದ ಅಂಶ 15 (ಬಿ) (i) ರಿಂದ (iv) ರ ವರೆಗೆ ತಿಳಿಸಲಾಗಿರುವ ಪ್ರಾಂಶುಪಾಲರ ಹುದ್ದೆಗಳನ್ನು ಆಯ್ಕೆ ಮಾಡುವ ಸಂಬಂಧ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ವಿಸ್ತರಣೆ ಆದೇಶದಲ್ಲಿ ತಿಳಿಸಲಾಗಿದ್ದು, ಅದರನ್ವಯ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಗಳ ಬದಲಿಗೆ Principal of UG College ಹಾಗೂ Principal of PG College ಎಂಬ ಹೊಸ ಪದನಾಮ ಜಾರಿಗೆ ತರಲಾಗಿದೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ : 27-05-2010ರ ಪತ್ರದಲ್ಲಿ ಕಾಲೇಜು ಶಿಕ್ಷಣ ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಕೋರ್ಸುಗಳನ್ನು ಬೋಧಿಸುತ್ತಿರುವ ಅನುಬಂಧ-1ರಲ್ಲಿರುವ 297 ಸರ್ಕಾರಿ ಪದವಿ ಕಾಲೇಜುಗಳಲ್ಲಿರುವ ಪ್ರಾಂಶುಪಾಲರ ಹುದ್ದೆಯನ್ನು Principal of UG College ಎಂತಲೂ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಬೋಧಿಸಿರುತ್ತಿರುವ ಅನುಬಂಧ-2 ರಲ್ಲಿರುವ 35 ಸರ್ಕಾರಿ ಪದವಿ ಕಾಲೇಜುಗಳಲ್ಲಿರುವ ಪ್ರಾಂಶುಪಾಲರ ಹುದ್ದೆಗಳನ್ನು Principal of PG College ಎಂದು ಮರು ಪದನಾಮೀಕರಿಸಲು ಆದೇಶ ಹೊರಡಿಸಲು ನಂತರ ಸದರಿ ಆದೇಶದನ್ವಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿಕೊಳ್ಳಲು ಸರ್ಕಾರದ ಆದೇಶವನ್ನು ಕಾಲೇಜು ಶಿಕ್ಷಣ ಆಯುಕ್ತರು ಕೋರಿರುತ್ತಾರೆ.

ಪ್ರಕರಣವನ್ನು ಪರಿಶೀಲಿಸಿ ಸರ್ಕಾರವು ಪರಿಷ್ಕೃತ ಯುಜಿಸಿ ನಿಯಮಗಳನ್ವಯ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರಾಂಶುಪಾಲರುಗಳ ಹುದ್ದೆಗಳನ್ನು ಆಯ್ಕೆ ಮಾಡುವ ಸಂಬಂಧ ತಿಳಿಸಿರುವ ಮೇಲ್ಕಂಡ ನಿಯಮಗಳನ್ನು ಅಳವಡಿಸಿಕೊಂಡಲ್ಲಿ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆ ಆಗುವುದಿಲ್ಲವೆಂದು ಮನಗಂಡು ಈ ಕೆಳಕಂಡಂತೆ ಆದೇಶ ಹೊರಡಿಸಲು ತೀರ್ಮಾನಿಸಿದೆ. ಅದರಂತೆ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಇಡಿ 212 ಡಿಸಿಇ 2010 ಬೆಂಗಳೂರು, ದಿನಾಂಕ: 30-11-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಕೋರ್ಸುಗಳನ್ನು ಬೋಧಿಸುತ್ತಿರುವ ಅನುಬಂಧ-1ರಲ್ಲಿರುವ 297 ಸರ್ಕಾರಿ ಪದವಿ ಕಾಲೇಜುಗಳಲ್ಲಿರುವ ಪ್ರಾಂಶುಪಾಲರ ಹುದ್ದೆಯನ್ನು Principal of UG College ಎಂತಲೂ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳು ನಡೆಸಲ್ಪಡುವ ಅನುಬಂಧ-2ರಲ್ಲಿರುವ 34 ಸರ್ಕಾರಿ ಪದವಿ ಕಾಲೇಜುಗಳಲ್ಲಿರುವ ಪ್ರಾಂಶುಪಾಲರ ಹುದ್ದೆಗಳನ್ನು Principal of PG College ಎಂದು ಮರು ಪದನಾಮೀಕರಿಸಿ ಆದೇಶಿಸಿದೆ.

ಈ ಹೊಸ ಪದನಾಮಗಳನ್ನು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಮುಂದೆ ಪರಿಷ್ಕರಿಸುವ ಸಂದರ್ಭದಲ್ಲಿ ಅಳವಡಿಸಲು ಸಹ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಎಂ. ನಂದಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ಕಾಲೇಜು ಶಿಕ್ಷಣ ಇಲಾಖೆ (ಅನುಬಂಧ-1)

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪದವಿ ಕೋರ್ಸ್‌ಗಳನ್ನು ಬೋಧಿಸಲಾಗುತ್ತಿರುವ ಕಾಲೇಜುಗಳ ಪಟ್ಟಿ

ಕ್ರಮ ಸಂಖ್ಯೆ	ಕಾಲೇಜಿನ ಹೆಸರು	ಸ್ಥಳ
1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿರಾ
2	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪಾವಗಡ
3	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಾಲೂರು
4	ಸರ್ಕಾರಿ ಮಹಿಳಾ ಕಾಲೇಜು	ಚಿಂತಾಮಣಿ
5	ಸರ್ಕಾರಿ ಬಾಲಕರ ಕಾಲೇಜು	ಚಿಂತಾಮಣಿ
6	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಿಕ್ಕಬಳ್ಳಾಪುರ
7	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮುಳಬಾಗಿಲು
8	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಣಸೂರು
9	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚನ್ನಪಟ್ಟಣ
10	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೆ. ಆರ್. ನಗರ
11	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಿತ್ತಾಪುರ (ಗ್ರೇಡ್-1 ಕಾಲೇಜು)
12	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗಂಗಾನಗರ, ಬೆಂಗಳೂರು
13	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಿಡದಿ
14	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು
15	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಫ್ರೇಜರ್ ಟೌನ್, ಬೆಂಗಳೂರು
16	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪೀಣ್ಯ, ಬೆಂಗಳೂರು
17	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಲ್ಲೇಶ್ವರಂ, ಬೆಂಗಳೂರು

18	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜಯನಗರ, ಬೆಂಗಳೂರು
19	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಾಜಾಜಿನಗರ, ಬೆಂಗಳೂರು
20	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೆಂಗೇರಿ, ಬೆಂಗಳೂರು
21	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಯಲಹಂಕ, ಬೆಂಗಳೂರು
22	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೆಸರಘಟ್ಟ, ಬೆಂಗಳೂರು
23	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ವರ್ತೂರು, ಬೆಂಗಳೂರು
24	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಾಡುಗೋಡಿ, ಬೆಂಗಳೂರು
25	ಸರ್ಕಾರಿ ಮಹಿಳಾ ಕಾಲೇಜು	ಕೆ. ಆರ್. ನಗರ, ಮೈಸೂರು
26	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಆನೇಕಲ್
27	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ದೊಡ್ಡಬಳ್ಳಾಪುರ
28	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ದೇವನಹಳ್ಳಿ
29	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಸಕೋಟೆ
30	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸೂಲಿಬೆಲೆ
31	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ತ್ಯಾಮಗೊಂಡ್ಲು, ನೆಲಮಂಗಲ ತಾ॥
32	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನೆಲಮಂಗಲ
33	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಾರೋಹಳ್ಳಿ (ಕನಕಪುರ)
34	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೋಡಿಹಳ್ಳಿ (ಕನಕಪುರ)
35	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕನಕಪುರ
36	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಾಮನಗರ
37	ಸರ್ಕಾರಿ ಕಾನೂನು ಕಾಲೇಜು	ರಾಮನಗರ
38	ಸರ್ಕಾರಿ ಮಹಿಳಾ ಕಾಲೇಜು	ರಾಮನಗರ
39	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಾಗಡಿ
40	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುದೂರು
41	ಸರ್ಕಾರಿ ಕಾನೂನು ಕಾಲೇಜು	ಕೋಲಾರ
42	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಂಗಾರುಪೇಟೆ
43	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶ್ರೀನಿವಾಸಪುರ
44	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೆ. ಜಿ. ಎಫ್.
45	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಂಗಾರು ತಿರುಪತಿ
46	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗೌರಿಬಿದನೂರು
47	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗುಡಿಬಂಡೆ
48	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿಡ್ಲಘಟ್ಟ
49	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಾಗೇಪಲ್ಲಿ
50	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ವೇಮಗಲ್
51	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಿಕ್ಕನಾಯಕನಹಳ್ಳಿ
52	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಳಿಯಾರ್
53	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗುಬ್ಬಿ
54	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುಣಿಗಲ್
55	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೆಬ್ಬೂರು
56	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಧುಗಿರಿ
57	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಡವನಹಳ್ಳಿ
58	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬುಕ್ಕಪಟ್ಟಣ
59	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ತುರುವೇಕೆರೆ
60	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ದಂಡಿನಶಿವಾರ, ತುರುವೇಕೆರೆ ತಾ॥
61	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನೊಣವಿನಕೆರೆ
62	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ತಿಪಟೂರು
63	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುವೆಂಪುನಗರ, ಮೈಸೂರು
64	ಸರ್ಕಾರಿ ಮಹಿಳಾ ದರ್ಜೆ ಕಾಲೇಜು	ಮೈಸೂರು

65	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿದ್ಧಾರ್ಥ ಲೇಔಟ್, ಮೈಸೂರು
66	ಸರ್ಕಾರಿ ಮಹಿಳಾ ಕಾಲೇಜು	ಸಾಲಿಗ್ರಾಮ
67	ಸರ್ಕಾರಿ ಮಹಿಳಾ ಕಾಲೇಜು	ಹುಣಸೂರು
68	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಿಳಿಕೆರೆ (ಹುಣಸೂರು)
69	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೆಚ್. ಡಿ. ಕೋಟೆ
70	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪಿರಿಯಾಪಟ್ಟಣ
71	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬನ್ನೂರು
72	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಟಿ. ನರಸೀಪುರ
73	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಲ್ಲಹಳ್ಳಿ (ನಂಜನಗೂಡು)
74	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನಂಜನಗೂಡು
75	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಾಮರಾಜನಗರ
76	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುದೇರು
77	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೊಳ್ಳೇಗಾಲ
78	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹನೂರು
79	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಬ್ಬಳ್ಳಿ (ಗುಂಡ್ಲುಪೇಟೆ)
80	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗುಂಡ್ಲುಪೇಟೆ
81	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಯಳಂದೂರು
82	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶ್ರೀರಂಗಪಟ್ಟಣ
83	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೆ. ಆರ್. ಸಾಗರ
84	ಸರ್ಕಾರಿ ಮಹಿಳಾ ಕಾಲೇಜು	ಕೆ. ಆರ್. ಪೇಟೆ
85	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಳವಳ್ಳಿ
86	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಲಗೂರು (ಮಳವಳ್ಳಿ)
87	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮದ್ದೂರು
88	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೊಪ್ಪ (ಮದ್ದೂರು)
89	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಭಾರತಿನಗರ (ಮದ್ದೂರು)
90	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪಾಂಡವಪುರ
91	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕ್ಯಾತನಹಳ್ಳಿ
92	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನಾಗಮಂಗಲ
93	ಸರ್ಕಾರಿ ಮಹಿಳಾ ಕಾಲೇಜು	ಹಾಸನ
94	ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಗೃಹ)	ಹಾಸನ
95	ಸರ್ಕಾರಿ ಕಾನೂನು ಕಾಲೇಜು	ಹಾಸನ
96	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮೊಸಳೆಹೊಸಳ್ಳಿ (ಹಾಸನ ತಾ॥)
97	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪಡುವಲಹಿಪ್ಪೆ
98	ಸರ್ಕಾರಿ ಕಾನೂನು ಕಾಲೇಜು	ಪಡುವಲಹಿಪ್ಪೆ
99	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಳೆನರಸೀಪುರ
100	ಸರ್ಕಾರಿ ಮಹಿಳಾ ಕಾಲೇಜು	ಹೊಳೆನರಸೀಪುರ
101	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಕಲೇಶಪುರ
102	ಸರ್ಕಾರಿ ಕಾನೂನು ಕಾಲೇಜು	ಹೊಳೆನರಸೀಪುರ
103	ಸರ್ಕಾರಿ ಗೃಹ ವಿಜ್ಞಾನ ಕಾಲೇಜು	ಹೊಳೆನರಸೀಪುರ
104	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಳ್ಳಿಮೈಸೂರು (ಹಾಸನ ಜಿಲ್ಲೆ)
105	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅರಕಲಗೂಡು
106	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೊಣನೂರು
107	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೇಲೂರು
108	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಳೆಬೀಡು (ಬೇಲೂರು ತಾ॥)
109	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜಾವಗಲ್
110	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗಂಡಸಿ
111	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅರಸೀಕೆರೆ

112	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಾಣಾವರ (ಅರಸೀಕೆರೆ ತಾ॥)
113	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚನ್ನರಾಯಪಟ್ಟಣ
114	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಲೂರು (ಹಾಸನಜಿಲ್ಲೆ)
115	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಉದಯಪುರ (ಚನ್ನರಾಯಪಟ್ಟಣ)
116	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಿರಿಸಾವೆ (ಚನ್ನರಾಯಪಟ್ಟಣ)
117	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಿರೇಕೆರೂರು
118	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸವಣೂರು
119	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಕ್ಕಿಆಲೂರು
120	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಾನಗಲ್, ಹಾವೇರಿ
121	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಂಕಾಪುರ
122	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿಗ್ಗಾಂವ್, ಹಾವೇರಿ
123	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಾವೇರಿ
124	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸುಣಕಲ್ ಬಿದರಿ (ರಾಣೆಬೆನ್ನೂರು)
125	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗಜೇಂದ್ರಗಡ
126	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರೋಣ
127	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನರಗುಂಡ
128	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿರಹಟ್ಟಿ
129	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮುಳಗುಂದ (ಗದಗ)
130	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗದಗ
131	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಕೋಟಿ (ಗದಗ)
132	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಳ್ನಾವರ
133	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಧಾರವಾಡ
134	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗುಡಿಗೇರಿ
135	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುಂದಗೋಳ
136	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಬ್ಬಳ್ಳಿ
137	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಲಘಟಗಿ, ಧಾರವಾಡ
138	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಣ್ಣಿಗೇರಿ, ನವಲಗುಂದ
139	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನವಲಗುಂದ, ಧಾರವಾಡ
140	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಾಣಿಬೆನ್ನೂರು, ಹಾವೇರಿ
141	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬ್ಯಾಡಗಿ, ಹಾವೇರಿ
142	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಳಿಯಾಳ (ಉ.ಕ.)
143	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮುಂಡಗೋಡು
144	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಯಲ್ಲಾಪುರ
145	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜೊಯಿಡಾ (ಉ.ಕ.)
146	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಭಟ್ಕಳ (ಉ.ಕ.)
147	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿರ್ಸಿ (ಉ.ಕ.)
148	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿದ್ದಾಪುರ (ಉ.ಕ.)
149	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಂಕಿ (ಹೊನ್ನಾವರ)
150	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊನ್ನಾವರ (ಉ.ಕ.)
151	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುಮಟಾ (ಉ.ಕ.)
152	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಂಕೋಲ (ಉ.ಕ.)
153	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೆಳಗಾಂ
154	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೆ. ಕೆ. ಕೊಪ್ಪ, ಬೆಳಗಾಂ
155	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	[illegible]
156	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	[illegible]
157	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	[illegible]
158	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಐನಾಪುರ

159	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಥಣಿ, ಬೆಳಗಾಂ
160	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಿಕ್ಕೋಡಿ, ಬೆಳಗಾಂ
161	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಾಯಬಾಗ, ಬೆಳಗಾಂ
162	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸೌವದತ್ತಿ, ಬೆಳಗಾಂ
163	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಖಾನಾಪುರ
164	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪಾಶ್ಚಪುರ, ಹುಕ್ಕೇರಿ
165	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಕ್ಕೇರಿ, ಬೆಳಗಾಂ
166	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಾಮದುರ್ಗ, ಬೆಳಗಾಂ
167	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮೂಡಲಗಿ, ಗೋಕಾಕ
168	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗೋಕಾಕ, ಬೆಳಗಾಂ
169	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಾಗಲಕೋಟೆ
170	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಇಳಕಲ್, ಬಾಗಲಕೋಟೆ
171	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೀಳಗಿ
172	ಸರ್ಕಾರಿ ಮಹಿಳಾ ಕಾಲೇಜು	ಜಮಖಂಡಿ
173	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುನ್ನೂರಾ
174	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುನಗುಂದ
175	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಾದಾಮಿ, ಬಾಗಲಕೋಟೆ
176	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಲೋಕಾಪುರ, ಮುದೋಳ
177	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮುಧೋಳ, ಬಾಗಲಕೋಟೆ
178	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಿಜಾಪುರ
179	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಮದಾಪುರ, ಬಿಜಾಪುರ
180	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿಂಧಗಿ, ಬಿಜಾಪುರ
181	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಸವನಬಾಗೇವಾಡಿ, ಬಿಜಾಪುರ
182	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಇಂಡಿ, ಬಿಜಾಪುರ
183	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮುದ್ದೇಬಿಹಾಳ, ಬಿಜಾಪುರ
184	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೆಬ್ರಿ (ದ.ಕ.)
185	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಾರ್ಕಳ
186	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೈಂದೂರು
187	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಂಕರನಾರಾಯಣ
188	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುಂದಾಪುರ, ಉಡುಪಿ
189	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಾಪು
190	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಉಡುಪಿ
191	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೋಟಪಡುಕೆರೆ
192	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಿರಿಯಡ್ಕ
193	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಉಪ್ಪಿನಂಗಡಿ
194	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೆಟ್ಟಂಪಾಡಿ
195	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ವಿಟ್ಲ
196	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪುತ್ತೂರು
197	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೆಳ್ತಂಗಡಿ
198	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪುಂಜಾಲಕಟ್ಟೆ, ಬೆಳ್ತಂಗಡಿ
199	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ವಾಮದಪದವು
200	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿದ್ದಕಟ್ಟೆ, ಬಂಟ್ವಾಳ
201	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಂಟ್ವಾಳ, ದ.ಕ.
202	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೆಳ್ಳಾರೆ
203	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸುಳ್ಯ, ದ.ಕ.
204	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಳೆಯಂಗಡಿ
205	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಂಗಳೂರು ದ.ಕ.

206	ಸರ್ಕಾರಿ ಮಹಿಳಾ ಕಾಲೇಜು	ಮಂಗಳೂರು ದ.ಕ.
207	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುಶಾಲನಗರ, ಕೊಡಗು
208	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನಾಪೋಕ್ಲು
209	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಡಿಕೇರಿ, ಕೊಡಗು
210	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ವಿರಾಜಪೇಟೆ, ಕೊಡಗು
211	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಮಲಾಪುರ
212	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜೇವರ್ಗಿ, ಗುಲ್ಬರ್ಗಾ
213	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜೇವರ್ಗಿ, ಕಾಲೋನಿ ಗುಲ್ಬರ್ಗಾ
214	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಹಾಗಾಂವ್ ಕ್ರಾಸ್, ಗುಲ್ಬರ್ಗಾ
215	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಯಾದಗಿರಿ
216	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗುರುಮಿಠಕಲ್
217	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಫರ್ತಾಬಾದ್, ಗುಲ್ಬರ್ಗಾ
218	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಹಾಪುರ
219	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಾಳಗಿ, ಗುಲ್ಬರ್ಗಾ ಜಿಲ್ಲೆ
220	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸೇಡಂ
221	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಫಜಲ್ಪುರ
222	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕರ್ಜಗಿ, ಗುಲ್ಬರ್ಗಾ
223	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸುರಪುರ
224	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೆಂಬಾವಿ, ಸುರಪುರ
225	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಆಳಂದ, ಗುಲ್ಬರ್ಗಾ
226	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಾದನಹಿಪ್ಪರಗ, ಗುಲ್ಬರ್ಗಾ
227	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಿಂಚೋಳಿ, ಗುಲ್ಬರ್ಗಾ
228	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಾಯಚೂರು
229	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿಂಧನೂರು
230	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಾನ್ವಿ
231	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ದೇವದುರ್ಗ
232	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಲಿಂಗಸಗೂರು, ರಾಯಚೂರು
233	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮದಗಲ್, ಲಿಂಗಸಗೂರು
234	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಯಲಬುರ್ಗಾ
235	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೊಪ್ಪಳ
236	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಸಬಂಡಿ ಅರಳಪುರ
237	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಇರಕಲ್‌ಗಡ, ಕೊಪ್ಪಳ
238	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುಷ್ಟಗಿ
239	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಗಂಗಾವತಿ
240	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕನಕಗಿರಿ
241	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶ್ರೀರಾಮನಗರ, ಗಂಗಾವತಿ
242	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಳ್ಳಾರಿ ನಗರ, ಬಳ್ಳಾರಿ
243	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮೋಕ, ಬಳ್ಳಾರಿ
244	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೂಡ್ಲಗಿ
245	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕುರಗೋಡು
246	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹಗರಿಬೊಮ್ಮನಹಳ್ಳಿ
247	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಂಪ್ಲಿ
248	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಸಪೇಟೆ, ಬಳ್ಳಾರಿ
249	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮರಿಯಮ್ಮನಹಳ್ಳಿ, ಹೊಸಪೇಟೆ
250	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಿರಗುಪ್ಪ
251	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ತೆಕ್ಕಲಕೋಟೆ, ಬಳ್ಳಾರಿ ಜಿಲ್ಲೆ
252	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೂವಿನಹಡಗಲಿ, ಬಳ್ಳಾರಿ

253	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಂಡೂರು, ಬಳ್ಳಾರಿ
254	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮನಳ್ಳಿ, ಬೀದರ್
255	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಔರಾದ್, ಬೀದರ್
256	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಭಾಲ್ಕಿ, ಬೀದರ್
257	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಚಿಟಗುಪ್ಪ, ಬೀದರ್
258	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹುಮ್ನಾಬಾದ್, ಬೀದರ್
259	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಸವಕಲ್ಯಾಣ, ಬೀದರ್
260	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿಕಾರಿಪುರ
261	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿರಾಳಿಕೊಪ್ಪ
262	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಸನಗರ
263	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಿಪ್ಪನ್‌ಪೇಟೆ
264	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸೊರಬ
265	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಆನವಟ್ಟಿ
266	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ತೀರ್ಥಹಳ್ಳಿ, ಶಿವಮೊಗ್ಗ
267	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಭದ್ರಾವತಿ
268	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಳೆಹೊನ್ನೂರು
269	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶಿವಮೊಗ್ಗ
270	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕೊಪ್ಪ
271	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮೂಡಿಗೆರೆ
272	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಳಸ, ಚಿಕ್ಕಮಗಳೂರು
273	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನರಸಿಂಹರಾಜಪುರ
274	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಜ್ಜಂಪುರ
275	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ತರೀಕೆರೆ, ಚಿಕ್ಕಮಗಳೂರು
276	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಪಂಚನಹಳ್ಳಿ
277	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬೀರೂರು, ಚಿಕ್ಕಮಗಳೂರು
278	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಕರಾಯಪಟ್ಟಣ
279	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಶೃಂಗೇರಿ, ಚಿಕ್ಕಮಗಳೂರು
280	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಭರಮಸಾಗರ, ಚಿತ್ರದುರ್ಗ
281	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮೊಳಕಾಲ್ಮೂರು
282	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜವಗೊಂಡನಹಳ್ಳಿ, ಹಿರಿಯೂರು
283	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊಳಲ್ಕೆರೆ, ಚಿತ್ರದುರ್ಗ
284	ಸರ್ಕಾರಿ ಮಹಿಳಾ ಕಾಲೇಜು	ದಾವಣಗೆರೆ
285	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಮಾಯಕೊಂಡ ಸಂತೇಬೆನ್ನೂರು
286	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಸಂತೇಬೆನ್ನೂರು
287	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಬಸವಾಪಟ್ಟಣ
288	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ನ್ಯಾಮತಿ
289	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹೊನ್ನಾಳಿ, ದಾವಣಗೆರೆ
290	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹರಪನಹಳ್ಳಿ, ದಾವಣಗೆರೆ
291	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಹರಿಹರ, ದಾವಣಗೆರೆ
292	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಜಗಳೂರು, ದಾವಣಗೆರೆ
293	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಅಳವಂಡಿ, ಕೊಪ್ಪಳ
294	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಾಣಿಯೂರು
295	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಯರಗಟ್ಟಿ
296	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ಕಲಾದಗಿ
297	ಸರ್ಕಾರಿ ಪ್ರಥಮ ದರ್ಜೆ ಕಾಲೇಜು	ರಬಕವಿ-ಬನಹಟ್ಟಿ

ಕಾಲೇಜು ಶಿಕ್ಷಣ ನಿರ್ದೇಶಕರು.

ಕಾಲೇಜು ಶಿಕ್ಷಣ ಇಲಾಖೆ (ಅನುಬಂಧ-2)

[illegible] ಕೋರ್ಸ್‌ಗಳೊಂದಿಗೆ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿರುವ ಕಾಲೇಜುಗಳ ಪಟ್ಟಿ

ಕ್ರಮ ಸಂಖ್ಯೆ	ಕಾಲೇಜು
1	ಸರ್ಕಾರಿ ಕಲಾ ಕಾಲೇಜು, ಬೆಂಗಳೂರು
2	ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು
[illegible]	ಮಹಾರಾಣಿ ಮಹಿಳಾ ಕಲಾ ಕಾಲೇಜು, ಬೆಂಗಳೂರು
[illegible]	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಬೆಂಗಳೂರು
[illegible]	ವಿಹೆಚ್ ಡಿ ಗೃಹ ವಿಜ್ಞಾನ ಕಾಲೇಜು, ಬೆಂಗಳೂರು
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು
[illegible]	ಆರ್. ಸಿ. ಕಾಲೇಜು, ಬೆಂಗಳೂರು
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ. ಆರ್. ಪುರಂ, ಬೆಂಗಳೂರು
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು
10	ಸರ್ಕಾರಿ ಮಹಿಳಾ ಕಾಲೇಜು, ಕೋಲಾರ
11	ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು
[illegible]	ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು. ಮೈಸುರು
[illegible]	ಸರ್ಕಾರಿ [illegible] ಕಾಲೇಜು, ಮಂಡ್ಯ
[illegible]	ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ. ಆರ್. ಪೇಟೆ
16	ಸರ್ಕಾರಿ ಕಲಾ ಕಾಲೇಜು, ಹಾಸನ
[illegible]	ಸರ್ಕಾರಿ ಕಾಲೇಜು, ಗುಲ್ಬರ್ಗಾ
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಬಳ್ಳಾರಿ
19	ಸರ್ಕಾರಿ ಮಹಿಳಾ ಕಾಲೇಜು, ಸಾಗರ, ಶಿವಮೊಗ್ಗ
20	ಐಡಿಸ್‌ಜಿ ಚಿಕ್ಕಮಗಳೂರು
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ದಾವಣಗೆರೆ
22	ಸರ್ಕಾರಿ ಕಲಾ ಕಾಲೇಜು, ಚಿತ್ರದುರ್ಗ
[illegible]	ಸರ್ಕಾರಿ ವಿಜ್ಞಾನ ಕಾಲೇಜು. ಚಿತ್ರದುರ್ಗ
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು. ಹೊಸದುರ್ಗ
25	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ
26	ಸರ್. ಎಂ. ವಿಜ್ಞಾನ ಕಾಲೇಜು, ಭದ್ರಾವತಿ
27	ಸರ್ಕಾರಿ ಪ್ರಥಮ ದರ್ಜೆ ಕಾಲೇಜು. [illegible]
28	ಸರ್ಕಾರಿ ವಿಜ್ಞಾನ ಕಾಲೇಜು, ಹಾಸನ (ಗ್ರೇಡ್-1 ಕಾಲೇಜು)
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, [illegible]
30	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೊರಟಗೆರೆ
31	ಸರ್ಕಾರಿ ಕಾಲೇಜು, ಕಾರವಾರ
32	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಿದರ್
[illegible]	ಸರ್ಕಾರಿ ಮಹಿಳಾ ಕಾಲೇಜು, [illegible]
[illegible]	[illegible] ಕಲಾ ಮತ್ತು ವಾಣಿಜ್ಯ ಕಾಲೇಜು, [illegible]
[illegible]	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, [illegible] ([illegible])

ಕಾಲೇಜು ಶಿಕ್ಷಣ ನಿರ್ದೇಶಕರು

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಎನ್. ನಂಜಪ್ಪ, ಮಾಜಿ ರೇಷ್ಮೆ ಪ್ರವರ್ತಕರು ಇವರನ್ನು ಮರು ನೇಮಕ ಮಾಡಿಕೊಳ್ಳುವ ಬಗ್ಗೆ.

ಓದಲಾಗಿದೆ :

1. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಜ್ಞಾಪನ ಸಂಖ್ಯೆ : Est/Apt/CR/177/19/79-80, ದಿನಾಂಕ : 1-1-1980.
2. ಸರ್ಕಾರದ ಆದೇಶ ಸಂಖ್ಯೆ : ವಾಕೈ 457 ರೇಸೇವಿ 2000, ದಿನಾಂಕ : 1-2-2003.
3. ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ : 4396/2003 ರಲ್ಲಿ ನೀಡಿರುವ ತೀರ್ಪು ದಿನಾಂಕ : 24-07-2009.
4. ಮಾನ್ಯ ಉಚ್ಚ ನ್ಯಾಯಾಲಯದ ಮೇಲ್ಮನವಿ ಸಂಖ್ಯೆ : 24033/10 ರಲ್ಲಿ ನೀಡಿರುವ ತೀರ್ಪು ದಿನಾಂಕ : 13-08-2010.
5. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರ ಪತ್ರ ಸಂಖ್ಯೆ : ಸಿಬ್ಬಂದಿ 1(7)/ರೇಪ್ರ/ಪಪೂಅ/2000-01, ದಿನಾಂಕ : 17-08-2010.

ಪ್ರಸ್ತಾವನೆ:

ಶ್ರೀ ನಂಜಪ್ಪ, ಮಾಜಿ ರೇಷ್ಮೆ ಪ್ರವರ್ತಕರು (ಸೇವೆಯಿಂದ ತೆಗೆದು ಹಾಕಲ್ಪಟ್ಟ ನೌಕರರು) ಇವರು ಮೇಲೆ ಓದಲಾದ ಕ್ರಮಸಂಖ್ಯೆ (1)ರ ಜ್ಞಾಪನದಂತೆ ರೇಷ್ಮೆ ಪ್ರವರ್ತಕರಾಗಿ ವೇತನ ಶ್ರೇಣಿ ರೂ. 300-700 ದಿನಾಂಕ : 25-1-1980 ರಂದು ಪೂರ್ವಾಹ್ನ ಕೋಲಾರ ವಲಯದಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ನಿಯಮಾನುಸಾರ ಸದರಿ ನೌಕರರು ಅಕೌಂಟ್ಸ್ ಲೋಯರ್ ಪರೀಕ್ಷೆಯಲ್ಲಿ ಸೇವೆಗೆ ಸೇರಿದ 2 ವರ್ಷಗಳ ಒಳಗೆ ಉತ್ತೀರ್ಣರಾಗಬೇಕಾಗಿರುತ್ತದೆ. ಆದರೆ, ಸದರಿ ನೌಕರರು ಮೇಲ್ಕಂಡ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾಗದ ಕಾರಣ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಅವರನ್ನು ಕೂಡಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡಲಾಗಿರುತ್ತದೆ. ಮೇಲ್ಕಂಡ ನೌಕರರು ಈ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ : 4396/2003ನ್ನು ದಾಖಲಿಸಿದ್ದು ಓದಲಾದ ಕ್ರಮ ಸಂಖ್ಯೆ (3)ರ ಆದೇಶದಲ್ಲಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಮೇಲ್ಕಂಡ ನೌಕರರಿಗೆ ಇಲಾಖಾ ಪರೀಕ್ಷೆಗಳನ್ನು 2 ವರ್ಷಗಳೊಳಗೆ ಪಾಸು ಮಾಡಿಕೊಳ್ಳುವ ಷರತ್ತಿಗೊಳಪಟ್ಟು ಮರುನೇಮಕ ಮಾಡಿಕೊಳ್ಳುವಂತೆ ಆದೇಶಿಸಿರುತ್ತದೆ. ಇದನ್ನು ಪ್ರಶ್ನಿಸಿ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದ ಮೇಲೆ ಓದಲಾದ (4)ರ ಮೇಲ್ಮನವಿಯನ್ನು ಮಾನ್ಯರು ಉಚ್ಚ ನ್ಯಾಯಾಲಯವು ವಜಾಗೊಳಿಸಿ ತೀರ್ಪು ನೀಡಿರುತ್ತದೆ.

ಅದರಂತೆ ಮೇಲೆ ಓದಲಾದ (5)ರಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು ಮೇಲ್ಕಂಡ ನೌಕರರನ್ನು ಮರುನೇಮಕ ಮಾಡಿಕೊಳ್ಳಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ವಿಷಯವನ್ನು ಪರಿಶೀಲಿಸಿ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶದಂತೆ ನೌಕರರನ್ನು ಮರು ನೇಮಕ ಮಾಡಿಕೊಳ್ಳಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ವಾಕೈ 56 ರೇಇವಿ 2010 ಬೆಂಗಳೂರು, ದಿನಾಂಕ: 04ನೇ ನವೆಂಬರ್ 2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಿಟ್ ಅರ್ಜಿ ಸಂಖ್ಯೆ : 24033/2010 (S-KAT) ದಿನಾಂಕ : 13-08-2010 ರಲ್ಲಿನ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದನ್ವಯ ಶ್ರೀ ಎನ್. ನಂಜಪ್ಪ, ಮಾಜಿ ರೇಷ್ಮೆ ಪ್ರವರ್ತಕರು ಇವರು 2 ವರ್ಷಗಳಲ್ಲಿ ಬಾಕಿ ಇರುವ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಇವರನ್ನು ಪರಿವೀಕ್ಷಣಾ ಅವಧಿಯಲ್ಲಿರುವ ನೌಕರರೆಂದು ಸೇವೆಯಿಂದ ವಜಾಗೊಳಿಸಲಾಗುವುದು ಎಂಬ ಷರತ್ತಿಗೊಳಪಟ್ಟು ಈ ಕೂಡಲೇ ಜಾರಿಗೆ ಬರುವಂತೆ ರೇಷ್ಮೆ ಪ್ರವರ್ತಕರ ಹುದ್ದೆಗೆ ಮರು ನೇಮಕ ಮಾಡಲಾಗಿದೆ. ಸದರಿ ನೌಕರರು ಯಾವುದೇ ವೇತನ ಬಾಕಿ ಪಾವತಿಗೆ ಅರ್ಹರಿರುವುದಿಲ್ಲ.

ಇವರಿಗೆ ಇಲಾಖಾ ಪರೀಕ್ಷೆ ಪಾಸು ಮಾಡಿಕೊಳ್ಳಲು ಪರೀಕ್ಷೆ ಬರೆಯುವುದಕ್ಕೆ ಅಂಗವಿಕಲತೆ ಇದ್ದಲ್ಲಿ ಪರೀಕ್ಷೆ ಬರೆಯಲು ನೀಡಬಹುದಾದ ಅಗತ್ಯ ಸೌಲಭ್ಯಗಳನ್ನು ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಭಾರತಿ ಆರ್. ನಾಯಕ್
ಪೀಠಾಧಿಕಾರಿ(ರೇಷ್ಮೆ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

ಪಿ.ಆರ್. 2822

ವಸತಿ ಸಚಿವಾಲಯ

ವಿಷಯ : ಕ್ರಯ ಪರಿಣಾಮಕಾರಿ ಮತ್ತು ಪರಿಸರಪ್ರೇಮಿ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಕೈಗೊಳ್ಳುವ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಯಿಂದ ನೀಡುವ ವಿನಾಯಿತಿ ಅವಧಿಯನ್ನು 2010-11ನೇ ಸಾಲಿಗೆ ವಿಸ್ತರಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಅಧಿಸೂಚನೆ ಸಂಖ್ಯೆ : ಆಇ/311/ವೆಚ್ಚ-12/10, ದಿನಾಂಕ : 29-04-2010.
2. ಸರ್ಕಾರದ ಪತ್ರ ಸಂಖ್ಯೆ : ವಇ 208 ಹೆಚ್ಎಎಂ 2009, ದಿನಾಂಕ : 09-09-2010.
3. ಚಿತ್ರದುರ್ಗ ಜಿಲ್ಲಾಧಿಕಾರಿಗಳ ಪತ್ರ ಸಂಖ್ಯೆ : ಆಶಾ/ಸಿಆರ್/275/20-11, ದಿನಾಂಕ : 22-09-2010.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ನೇರವಾಗಿ ರಾಜ್ಯದಲ್ಲಿನ ನಿರ್ಮಿತಿ ಕೇಂದ್ರಗಳು ಹಾಗೂ ಕಾರ್ನಿಕ ಸಂಸ್ಥೆಗೆ ವಹಿಸಿಕೊಡುವ ಸರ್ಕಾರದ ವಿವಿಧ ಇಲಾಖೆಯ ಕಾಮಗಾರಿಗಳಲ್ಲಿ ಪರಿಸರ ಪ್ರೇಮಿ ಅಥವಾ ಕ್ರಯ ಪರಿಣಾಮಕಾರಿ ತಂತ್ರಜ್ಞಾನ ಅಥವಾ ನವೀನ ಕಟ್ಟಡ ನಿರ್ಮಾಣ ಸಾಮಗ್ರಿಗಳು ಅಥವಾ ಮೊದಲೇ ಅಚ್ಚು ಹಾಕಿದ ತಂತ್ರಜ್ಞಾನ ಅಳವಡಿಸಿದಲ್ಲಿ ಅಂಥ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ಗ) ರಡಿ ವಸತಿ ಇಲಾಖೆಗೆ 2010-11ನೇ ಸಾಲಿಗೆ ವಿನಾಯಿತಿ ನೀಡಿದೆ. ಅದರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ [illegible]

ಪಡೆಯುವ ನಿರ್ಮಿತಿ ಕೇಂದ್ರಗಳು ಅಥವಾ [illegible] ಸಂಸ್ಥೆ [illegible] ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ವಿನಾಯಿತಿ ಪಡೆಯಬಹುದೆಂದು ಮೇಲೆ (2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಸೂಚಿಸಲಾಗಿದ. ಆದರೆ, ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುವ ಚಿತ್ರದುರ್ಗ ಜಿಲ್ಲಾಧಿಕಾರಿಗಳು, ವಸತಿ ಇಲಾಖೆಯು ರಾಜ್ಯಾದ್ಯಂತ ಸಾವಿರಾರು [illegible] ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮತಿ ನೀಡುವುದು ಕಷ್ಟಸಾಧ್ಯವಾಗಿದ್ದು, ಅಭಿವೃದ್ಧಿ ಕಾಮಗಾರಿಗಳಲ್ಲಿ ಹೆಚ್ಚಿನ ವಿಳಂಬ ಉಂಟಾಗುವುದನ್ನು ಮತ್ತು ಆರ್ಥಿಕ ವಿಕೇಂದ್ರಿಕರಣದ ಸರ್ಕಾರದ ನೀತಿಗೆ ಧಕ್ಕೆ ಉಂಟಾಗುವುದನ್ನು ತಪ್ಪಿಸಲು, ನಿರ್ಮಿತಿ ಕೇಂದ್ರಗಳು ಹಾಗೂ [illegible] ವೆಚ್ಚ [illegible] ಅಥವಾ ಕ್ರಯ ಪರಿಣಾಮಕಾರಿ ತಂತ್ರಜ್ಞಾನ ಅಥವಾ ನವೀನ ಕಟ್ಟಡ ನಿರ್ಮಾಣ ಸಾಮಗ್ರಿಗಳು ಅಥವಾ [illegible] ಅಳವಡಿಸಿರುವ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ[illegible] ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ಪಡೆಯಲು ಅವಕಾಶ ಕಲ್ಪಿಸುವಂತೆ [illegible] ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

[illegible] ಸಂಖ್ಯೆ : [illegible] 2009, ಬೆಂಗಳೂರು, ದಿನಾಂಕ: 03ನೇ ನವೆಂಬರ್ 2010.

ರಾಜ್ಯದಲ್ಲಿನ [illegible] ಸಂಸ್ಥೆಗೆ ವಹಿಸಿಕೊಡುವ ಸರ್ಕಾರದ ವಿವಿಧ ಇಲಾಖೆಯ ಕಾಮಗಾರಿಗಳಲ್ಲಿ ಈ ಕೆಳಕಂಡಿರುವಂತೆ [illegible] ಪರಿಣಾಮಕಾರಿ ತಂತ್ರಜ್ಞಾನ ಅಥವಾ ನವೀನ ಕಟ್ಟಡ ನಿರ್ಮಾಣ ಸಾಮಗ್ರಿಗಳು ಅಥವಾ ಮೊದಲೇ ಅಚ್ಚು ಹಾಕಿದ ತಂತ್ರಜ್ಞಾನ [illegible] ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ದೃಢೀಕರಿಸಿದ ಹಾಗೂ ಕರ್ನಾಟಕ [illegible] ನಿರ್ಮಾಣ ಕೇಂದ್ರದಿಂದ (ಕಾರ್ನಿಕ್) ತಾಂತ್ರಿಕ ಪರಿಶೀಲನೆಗೊಳಗಾದ ಪ್ರಸ್ತಾವನೆಗಳಿಗೆ ಮಾತ್ರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ [illegible] ಕಾಯ್ದೆಯಿಂದ 2010–11ನೇ ಸಾಲಿಗೆ ವಿನಾಯಿತಿ ಪಡೆಯಲು ಸರ್ಕಾರದ ಅನುಮೋದನೆ ನೀಡಲಾಗಿದೆ.

(ಅ) ಅಡಿಪಾಯಗಳಿಗೆ :

1. ಕಪ್ಪು ಮಣ್ಣಿನಲ್ಲಿ ಪೈಲ್ ಫೌಂಡೇಶನ್ (Pile Foundation)
2. ಸುಣ್ಣ ಬಳಸಿ ಕಪ್ಪು ಮಣ್ಣಿನ ಬಲವೃದ್ಧಿ (Lime Treatment)
3. ಗಟ್ಟಿ ಮಣ್ಣಿನಲ್ಲಿ ಕಮಾನು ಪಾಯ (Arch Foundation)

(ಆ) ಗೋಡೆಗಳಲ್ಲಿ :

1. ದೃಢೀಕರಿಸಿದ ಸಿಮೆಂಟ್ ಹಾಗೂ ಮಣ್ಣಿನ ಇಟ್ಟಿಗೆಗಳು (Stabilised Mud Blocks)
2. ಕಾಡುಗಲ್ಲು ಹಾಗೂ ಗಾರೆಯಿಂದ ತಯಾರಿಸಿದ ಇಟ್ಟಿಗೆಗಳು (Boulder Blocks)
3. ರ್‍ಯಾಟ್ ಟ್ರಾಪ್ ಬಾಂಡ್ (Rat Trap bond)
4. ಹಾರುಬುದಿ ಉಪಯೋಗಿಸಿ ಕಾಂಕ್ರೀಟ್‌ನಿಂದ ತಯಾರಿಸಿದ ಇಟ್ಟಿಗೆಗಳು
5. ಹಾರುಬೂದಿ, ಸುಣ್ಣ ಹಾಗೂ ಜಿಪ್ಸಂ ಉಪಯೋಗಿಸಿ ತಯಾರಿಸಿದ ಇಟ್ಟಿಗೆಗಳು
6. ಫೆರೋಸಿಮೆಂಟ್‌ನ ತೆಳುಗೋಡೆ (Ferro cement walls)

(ಇ) ಮೇಲ್ಛಾವಣಿಯಲ್ಲಿ :

1. ಫೆರೋಸಿಮೆಂಟ್ ಟ್ರಸ್‌ಗಳು ಹಾಗೂ ಮಂಗಳೂರು ಹೆಂಚು
2. ಕಾಂಕ್ರೀಟ್ ತೊಲೆಗಳು ಹಾಗೂ ಫನಿಕ್ಯುಲರ್ ಶೆಲ್‌ಗಳು
3. ಕಾಂಕ್ರೀಟ್ ತೊಲೆಗಳು ಹಾಗೂ ಕಾಂಕ್ರೀಟ್ ಸ್ಲಾಬ್‌ಗಳು
4. ಫೆರೋಸಿಮೆಂಟ್ ಛಾವಣಿ
5. ಕಾಂಕ್ರೀಟ್ ತೊಲೆಗಳು ಹಾಗೂ ಜ್ಯಾಕ್ ಆರ್ಚ್ ಛಾವಣಿ
6. ಕಾಂಕ್ರೀಟ್ ತೊಲೆಗಳು ಹಾಗೂ ಕಡಪ ಸ್ಲ್ಯಾಬ್ ಛಾವಣಿ
7. ಕಾಂಕ್ರೀಟ್ ತೊಲೆಗಳು ಹಾಗೂ ಕಾಂಕ್ರೀಟ್ ಬ್ಲಾಕ್ ಛಾವಣಿ (ನಾಗಲಕ್ಷ್ಮೀ ತಂತ್ರಜ್ಞಾನ)

(ಈ) ಇತರೆ :

1. ಆರ್.ಸಿ.ಸಿ. ಬಾಗಿಲ ಚೌಕಟ್ಟುಗಳು
2. ಆರ್.ಸಿ.ಸಿ. ಕಿಟಕಿ ಚೌಕಟ್ಟುಗಳು
3. ಮೊದಲೇ ತಯಾರಿಸಿದ ಲಿಂಟಲ್ ಹಾಗೂ ಸಜ್ಜಾಗಳು
4. ತೆಂಗಿನ ನಾರಿನ, ಬೈಸನ್ ಪ್ಯಾನಲ್, ಫೆರೋಸಿಮೆಂಟ್, ಎಫ್.ಆರ್.ಪಿ. ಬಾಗಿಲುಗಳು
5. ಫೆರೋಸಿಮೆಂಟ್ ಶೌಚಾಲಯಗಳು
6. ಪಿ.ವಿ.ಸಿ. ಬಾಗಿಲು ಚೌಕಟ್ಟು ಹಾಗೂ ಬಾಗಿಲುಗಳು

[illegible]

[illegible] ಡುವ ಸಾಮಗ್ರಿಗಳು, ನೀರಿನ ತೊಟ್ಟಿ, ಮಂಚ, ಕುರ್ಚಿ, ಮೇಜು, ಶಾಲಾ [illegible]

[illegible] ಚೌಕಟ್ಟುಗಳು [illegible]

(ಊ) ಹಾರುಬೂದಿಯಿಂದ ತಯಾರಿಸಲ್ಪಡುವ ಕ್ರಯ ಪರಿಣಾಮಕಾರಿ, ಪರಿಸರ ಪ್ರೇಮಿ ಸಾಮಗ್ರಿಗಳು :

ಶಾಖೋತ್ಪನ್ನ, ಉಕ್ಕು ತಯಾರಿಕೆ ಹಾಗೂ ಕಾಗದ ತಯಾರಿಕೆ ಕಾರ್ಖಾನೆಗಳಿಂದ ದೊರಕುವ ನಿರುಪಯೋಗಿ ವಸ್ತುವಾದ ಹಾರುಬೂದಿಯನ್ನು ಉಪಯುಕ್ತ ಕಟ್ಟಡ ನಿರ್ಮಾಣ ಸಾಮಗ್ರಿಗಳಾಗಿ ಪರಿವರ್ತಿಸಿ ಬಾಗಿಲು ಹಾಗು ಕಿಟಕಿಗಳ ಚೌಕಟ್ಟುಗಳು, ಬ್ಲಾಕ್‌ಗಳು, ನೆಲ ಹಾಸುಗಳನ್ನು ತಯಾರಿಸುವುದಲ್ಲದೇ ರಸ್ತೆ ನಿರ್ಮಾಣ ಮತ್ತು ಮೇಲ್ಹಾವಣಿಯ ಕಾಂಕ್ರೀಟಿನಲ್ಲಿ ಗಣನೀಯ ಪ್ರಮಾಣದಲ್ಲಿನ ಉಪಯೋಗ.

(ಎ) ಬೊಂಬಿನ ತಾಂತ್ರಿಕತೆ :

ಬೊಂಬುಗಳನ್ನು ರಾಸಾಯನ ಕ್ರಿಯೆಗೊಳಪಡಿಸಿ, ಅವುಗಳ ಬಲವೃದ್ಧಿಗೊಳಿಸಿ ಅನಂತರ ಮನೆ ಹಾಗೂ ಕಟ್ಟಡ ನಿರ್ಮಾಣದಲ್ಲಿ ಇವುಗಳ ಉಪಯೋಗ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 2823

ಕೆ.ಆರ್. ವಲ್ಲೂರ

ಪೀಠಾಧಿಕಾರಿ-2, ವಸತಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮಾನ್ಯ ಶಾಸಕರುಗಳ ಆಪ್ತ ಸಹಾಯಕರನ್ನು ನೇಮಿಸಲು ಹುದ್ದೆಗಳನ್ನು ಸೃಜಿಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 90 ಶಿಸನೇ 96, ದಿನಾಂಕ : 28-11-96.
2. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 90 ಶಿಸನೇ 96, ದಿನಾಂಕ : 16-12-96.
3. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 180 ಶಿಸನೇ 99, ದಿನಾಂಕ : 01-02-2000.
4. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 92 ಶಿಸನೇ 2000, ದಿನಾಂಕ : 16-08-2000.
5. ಅಧಿಸೂಚನೆ ಸಂಖ್ಯೆ ಸಿಆಸುಇ 48 ಎಸ್‌ಆರ್‌ಆರ್ 2009 ದಿನಾಂಕ : 20-01-2010.
6. ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 177 ಆಹಿಸೇ 2009, ದಿನಾಂಕ : 23-02-2010.
7. ಜಿಲ್ಲಾಧಿಕಾರಿಗಳು ಧಾರವಾಡ ಜಿಲ್ಲೆ ಇವರ ಪತ್ರ ಸಂಖ್ಯೆ ಸಿಬ್ಬಂದಿ(2)/ವಹಿ-30 : 2010-11 ದಿನಾಂಕ: 1-07-2010 ಮತ್ತು ಸಿಬ್ಬಂದಿ(2) ವಹಿ-112 : 2008-09 ದಿನಾಂಕ : 30-06-2010.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಅಧಿಕೃತ ಜ್ಞಾಪನಗಳಲ್ಲಿ ಮಾನ್ಯ ಶಾಸಕರ ಆಪ್ತ ಸಹಾಯಕರನ್ನು ಒದಗಿಸುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮೇಲೆ ಓದಲಾದ (3)ರ ಆದೇಶದಲ್ಲಿ ಮೇಲೆ ಓದಲಾಗಿರುವ (1) ಮತ್ತು (2)ರ ಅಧಿಕೃತ ಜ್ಞಾಪನಗಳನ್ನು ಭಾಗಶ: ಮಾರ್ಪಡಿಸಿ ರಾಜ್ಯ ಸರ್ಕಾರದ ಯಾವುದೇ ಇಲಾಖೆಗಳಲ್ಲಿನ ಗ್ರೂಪ್ ಸಿ ವೃಂದದ ನೌಕರರನ್ನು ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಮೇಲೆ ಓದಲಾದ (4)ರ ಆದೇಶದಲ್ಲಿ ನಿಗಮ : ಮಂಡಳಿ : ಸ್ಥಳೀಯ ಸಂಸ್ಥೆಗಳು : ಸ್ವಾಯತ್ತ : ಶಾಸನಬದ್ಧ ಸಂಸ್ಥೆಗಳ ಗ್ರೂಪ್ ಸಿ ವೃಂದದ ನೌಕರರನ್ನು ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅವಕಾಶ ನೀಡಿದೆ. ಮೇಲೆ (5)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15ರನ್ವಯ ಮಾನ್ಯ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳ ಆಪ್ತ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಮೇಲೆ (6)ರಲ್ಲಿ ಓದಲಾದ ಆದೇಶದಲ್ಲಿ ಗ್ರೂಪ್ ಸಿ ವೃಂದದಲ್ಲಿ ಪ್ರಥಮ ದರ್ಜೆ ಸಹಾಯಕರ/ದ್ವಿತೀಯ ದರ್ಜೆ ಸಹಾಯಕರು/ಶೀಘ್ರಲಿಪಿಗಾರರಿಗೆ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಅವರ ವಿದ್ಯಾರ್ಹತೆಯನುಸಾರ ಕಂದಾಯ ಇಲಾಖೆಯಲ್ಲಿ [illegible] ಪ್ರಥಮ ದರ್ಜೆ ಸಹಾಯಕರ/ದ್ವಿತೀಯ ದರ್ಜೆ ಸಹಾಯಕರ/ಶೀಘ್ರಲಿಪಿಗಾರರ ಹುದ್ದೆಗಳಿಗದುರಾಗಿ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15(1)(ಬಿ)(vii)ರನ್ವಯ ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ಸರ್ಕಾರದಿಂದ ಅನುಮೋದಿಸಲ್ಪಟ್ಟ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ನೇಮಿಸಲು ಅವಕಾಶ ನೀಡಿದೆ. ಮೇಲೆ (7)ರಲ್ಲಿ ಓದಲಾದ ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಧಾರವಾಡ, ಇವರು ಶ್ರೀ ವಿಜಯ ಸಂಕೇಶ್ವರ ಮಾನ್ಯ ವಿಧಾನ ಪರಿಷತ್ ಸದಸ್ಯರು ಶ್ರೀಮತಿ ರಾಜೇಶ್ವರಿ [illegible] ಇವರನ್ನು ಗುತ್ತಿಗೆ ಆಧಾರದ ಮೇಲೆ ತಮ್ಮ ಆಪ್ತ ಸಹಾಯಕರಾಗಿ ಹಾಗೂ ಶ್ರೀ ಸಂತೋಷ್ ಎಸ್. ಲಾಡ್ ಮಾನ್ಯ ವಿಧಾನ ಸಭಾ ಸದಸ್ಯರು ಇವರು [illegible] ಇವರನ್ನು ತಮ್ಮ ಆಪ್ತ ಸಹಾಯಕರಾಗಿ ನೇಮಿಸಲು ಕೋರಿರುವುದಾಗಿ ತಿಳಿಸಿ, ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರ ಮತ್ತು ಶೀಘ್ರಲಿಪಿಗಾರರ ಹುದ್ದೆಯು ಖಾಲಿ ಇಲ್ಲದಿರುವುದರಿಂದ ಮಾನ್ಯ ಶಾಸಕರ ಆಪ್ತ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಬಗ್ಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಇದಕ್ಕಾಗಿಯೇ ಖಾಯಂ ಹುದ್ದೆಗಳನ್ನು ಸೃಜಿಸುವಂತೆ ಅಭಿಪ್ರಾಯ ಪಟ್ಟಿರುತ್ತಾರೆ. ಈ ಬಗ್ಗೆ [illegible] ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 248 ಆಹಿಸೇ 2010 ಬೆಂಗಳೂರು, ದಿನಾಂಕ: 26ನೇ ಅಕ್ಟೋಬರ್ 2010.

ಸೂಕ್ತ ಪರಿಶೀಲನೆಯ ನಂತರ ಧಾರವಾಡ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಪ್ರಥಮ ದರ್ಜೆ ಸಹಾಯಕರ ಮತ್ತು ಶೀಘ್ರಲಿಪಿಗಾರರ [illegible] ಲಭ್ಯವಿಲ್ಲದಿರುವ ಕಾರಣ ಒಂದು ಪ್ರಥಮ ದರ್ಜೆ ಸಹಾಯಕರ ಹಾಗೂ ಒಂದು ಶೀಘ್ರಲಿಪಿಗಾರರ [illegible]

ಅಥವಾ ಧಾರವಾಡ ಜಿಲ್ಲಾ ಕಂದಾಯ ಘಟಕದಲ್ಲಿ ವಯೋ ನಿವೃತ್ತಿ ಅಥವಾ ಇನ್ನಿತರೆ ಕಾರಣಗಳಿಂದ ಸದರಿ ಹುದ್ದೆಗಳು ಖಾಲಿಯಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಸೃಜಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 648 ವೆಚ್ಚ-12/2010 ದಿನಾಂಕ : 23-09-10ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ರುಕ್ಮಿಣಿ ದಿವಾಕರ್
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-1)

ಪಿ.ಆರ್. 2825

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಶಿವಮೊಗ್ಗ ಜಿಲ್ಲಾ ಕಾರಾಗೃಹ (ಹಾಲಿ ತುಮಕೂರು ಜಿಲ್ಲಾ ಕಾರಾಗೃಹದಲ್ಲಿ ಸಹಾಯಕ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ) ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣ-ಅಭಿಯೋಜನಾ ಮಂಜೂರಾತಿ ಕುರಿತು.

ಓದಲಾಗಿದೆ :

1. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರ ಸಂಖ್ಯೆ : ಲೋಕ್/ಐಎನ್‌ವಿ(ಜಿ)/ಸಿಟಿಎಲ್-37/ಸಿಆರ್ 13/2009 ಶಿವಮೊಗ್ಗ ದಿನಾಂಕ : 06-04-2010.
2. ತನಿಖಾಧಿಕಾರಿಯ ಅಂತಿಮ ತನಿಖಾ ವರದಿ ದಿನಾಂಕ : 04-03-2010.
3. ತನಿಖಾಧಿಕಾರಿಯ ದಾಖಲೆಗಳ ವಿವರ :

   ಎ) ಅಸಲು ತನಿಖಾ ವರದಿ, ಪ್ರಥಮ ವರ್ತಮಾನ ವರದಿ ಮತ್ತು ಪಿರ್ಯಾದಿಯ ದೂರಿನ ನಕಲು, ಠಾಣಾ ದಿನಚರಿ ನಕಲು, ಪಂಚಸಾಕ್ಷಿಗಳನ್ನು ಬರಮಾಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸಿದ ಕೋರಿಕೆ ಪತ್ರ ನಕಲುಗಳು, ವಹಿಸುವಿಕೆ ಮತ್ತು ಜಪ್ತಿ ಪಂಚನಾಮೆಗಳ ನಕಲುಗಳು, ಧ್ವನಿ ದೃಢೀಕರಣ ಪಂಚನಾಮೆ ನಕಲು, ಟ್ರ್ಯಾಪ್ ಯಶಸ್ವಿಯಾದ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಸಿದ ವರದಿಯ ನಕಲು, ಸ್ವತ್ತುಪಟ್ಟಿ ನಕಲು, ತನಿಖಾ ಕಾಲದಲ್ಲಿ ತೆಗೆದಿರುವ ಫೋಟೋಗಳ ಛಾಯಾ ಪ್ರತಿಗಳು.

   ಬಿ) ಸಾಕ್ಷಿದಾರರುಗಳ ಹೇಳಿಕೆಗಳ ಮತ್ತು ಮುಂದುವರಿದ ಹೇಳಿಕೆಗಳ ನಕಲು ಪ್ರತಿಗಳು

ಪ್ರಸ್ತಾವನೆ:

ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಜಿಲ್ಲಾ ಕಾರಾಗೃಹ, ಶಿವಮೊಗ್ಗ (ಹಾಲಿ ತುಮಕೂರು ಜಿಲ್ಲಾ ಕಾರಾಗೃಹದಲ್ಲಿ ಸಹಾಯಕ ಅಧೀಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ) ಇವರ ವಿರುದ್ಧ ಲೋಕಾಯುಕ್ತ ಮೊಕದ್ದಮೆ ಸಂಖ್ಯೆ : 13/2009ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ತನಿಖಾಧಿಕಾರಿಗಳು, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಇಲ್ಲಿ ದಾಖಲಿಸಿರುವ ಪ್ರಕರಣದ ತನಿಖಾ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ : 06-04-2010ರ ಪತ್ರಮೂಲಕ ಕಳುಹಿಸುತ್ತಾ, ಆಪಾದಿತರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧ ಕಾಯ್ದೆ, 1988ರ ಕಲಂ 19(1)ರ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಅಧಿಕಾರಿಯಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕಳುಹಿಸಿಕೊಟ್ಟ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

ಅ) ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಯಲ್ಲಪ್ಪ, ಶಿವಮೊಗ್ಗ ಇವರ ದೂರು ದಿನಾಂಕ : 17-11-2009.

ಆ) ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ತನಿಖಾಧಿಕಾರಿಗಳು, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ ಇವರ ಪ್ರಥಮ ವರ್ತಮಾನ ವರದಿ, ಲೋಕಾಯುಕ್ತ ಮೊಕದ್ದಮೆ ಸಂಖ್ಯೆ : 13/2009.

ಇ) ಪೊಲೀಸ್ ಠಾಣೆಯ ದಿನಚರಿ.

ಈ) ಸಾಕ್ಷಿದಾರರುಗಳ ಹೇಳಿಕೆಗಳು (1) ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಯಲ್ಲಪ್ಪ (2) ಶ್ರೀಮತಿ ಆರ್. ಮಂಜುಳ, ಕೋಂ ಲೇಟ್ ಶಿವಣ್ಣ [illegible] (3) ಶ್ರೀ ಕೆ. ಗಣೇಶ್ ತಂದೆ ಕೃಷ್ಣನಾಯ್ಕ (4) ಶ್ರೀ ಡಿ.ಎಂ. ಶಶಿಧರ ಮೂರ್ತಿ ತಂದೆ ಮಲ್ಲಾಜಪ್ಪ (5) ಶ್ರೀ ಎಸ್. [illegible] ತಂದೆ ಲೇಟ್ [illegible] (6) [illegible] ಕೊಕ್ಕರೆ ಸ್ವಾಮಿ ತಂದೆ ಲೇಟ್ ಯಲ್ಲಪ್ಪ (7) ಶ್ರೀ ಜಿ.ಎಂ. ಧನಂಜಯ ಮೂರ್ತಿ ತಂದೆ [illegible] (8) ಶ್ರೀ [illegible] ಎನ್. ಕೋಣನತಲೆ, ಹೆಡ್ ಕಾನ್ಸ್‌ಟೇಬಲ್ (9) ಶ್ರೀ ಜಿ.ಪಿ. ಬಸವರಾಜಪ್ಪ, ಪೊಲೀಸ್ ಹೆಡ್ ಕಾನ್ಸ್‌ಟೇಬಲ್ (10) ಶ್ರೀ ಬಿ. ಶ್ರೀನಿವಾಸ, ಸಿ.ಪಿ.ಸಿ. (11) ಶ್ರೀ ರಮೇಶ್ ಎಸ್. ಪೊಲೀಸ್ ಕಾನ್ಸ್‌ಟೇಬಲ್ (12) ಶ್ರೀ ಐ.ಜಿ. ರಜನಿಕಾಂತ, ಪೊಲೀಸ್ ಕಾನ್ಸ್‌ಟೇಬಲ್ (13) ಶ್ರೀ ಎ. ಮಂಜುನಾಥ, ಪೊಲೀಸ್ ಕಾನ್ಸ್‌ಟೇಬಲ್ (14) ಶ್ರೀ ಆರ್. ಪ್ರಕಾಶ್, ಪೊಲೀಸ್ ಕಾನ್ಸ್‌ಟೇಬಲ್.

ಉ) ರಾಸಾಯನಿಕ [illegible] ಸಂಖ್ಯೆ : [illegible] 19 2009-10 ದಿನಾಂಕ : 13-0[illegible]-2010

ಊ) ಕೃತ್ಯ ನಡೆದ ಸ್ಥಳದ ನಕ್ಷೆ

[illegible]) [illegible] ದೃಢೀಕೃತ ನಕಲು ಪ್ರತಿಗಳು.

ತನಿಖಾಧಿಕಾರಿಗಳಾದ ಶ್ರೀ [illegible] ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಶಿವಮೊಗ್ಗ [illegible] ಲೋಕಾಯುಕ್ತ ಮೊಕದ್ದಮೆ ಸಂಖ್ಯೆ : 13/2009 [illegible] ನಿರೋಧ [illegible] 1988ರ [illegible]

ಫಿರ್ಯಾದಿಯಾದ ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಯಲ್ಲಪ್ಪ, ವಾಸ ಎಲ್‌ಐಜಿ 23, [illegible] ಇಬ್ಬರು ಮಕ್ಕಳು ವಿವಿಧ ಕೇಸುಗಳಲ್ಲಿ ಜೈಲಿನಲ್ಲಿದ್ದು, ಅದರಲ್ಲಿ ಒಬ್ಬ ಮಗ ಆನಂದ್ ಎಂಬುವವನನ್ನು ಈಗ್ಗೆ [illegible] ವರ್ಗಾಯಿಸಲಾಗಿದ್ದು, ಇನ್ನೊಬ್ಬ ಮಗ ಶ್ಯಾಮ, ಗಾಂಜಾ ಕೇಸಿನಲ್ಲಿ ಅರೆಸ್ಟ್ ಆಗಿದ್ದು, ಈ ಬಗ್ಗೆ ಸಹಾಯಕ [illegible] ಸಹ ಬೇರೆ ಜೈಲಿಗೆ ಕಳುಹಿಸುತ್ತೇನೆಂದು ಇಲ್ಲದಿದ್ದರೆ ರೂ. 2000-00ಗಳ ಲಂಚಕ್ಕಾಗಿ ಒತ್ತಾಯಿಸಿದ್ದು, [illegible] ಕಳುಹಿಸಬೇಡಿ ಎಂದು ತಮ್ಮಲ್ಲಿದ್ದ ರೂ. 1000/- ಕೊಟ್ಟಿರುತ್ತಾರೆಂದು, ಶಿವಣ್ಣನವರು ಇನ್ನೂ 1000/- ಕ್ಕೆ [illegible] ಶ್ರೀ ಶಿವಣ್ಣರವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದಿನಾಂಕ : 17-11-2009ರಂದು ದೂರನ್ನು ನೀಡಿದ್ದು [illegible] ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯಪೂರ್ಣ ಕಾರ್ಯಕ್ರಮವನ್ನು ನೆರವೇರಿಸಿದ ನಂತರ ದಿನಾಂಕ : 17-[illegible] ಟ್ರ್ಯಾಪ್ ಯಶಸ್ವಿಯಾಗಿ, ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು, ಅಕ್ರಮ ಸಂಭಾವನೆಯಾದ ರೂ. 1000/-[illegible] ಹಾಕಿಕೊಂಡಿರುತ್ತಾರೆ. ಆಪಾದಿತ ಅಧಿಕಾರಿಯ ಎರಡೂ ಹಸ್ತದ ಕೈಬೆರಳುಗಳನ್ನು ತಯಾರಿಸಿಟ್ಟಿದ್ದ [illegible] ತೊಳೆಸಿದಾಗ, ದ್ರಾವಣ ಬಣ್ಣ ಬದಲಾಗಿ ಆಪಾದಿತರು ಲಂಚದ ಹಣವನ್ನು ಸ್ವೀಕರಿಸಿರುವುದು ದೃಢಪಟ್ಟಿರುವುದೆ [illegible] ವರದಿಯಿಂದಲೂ ಸಹಾ ದೃಢಪಟ್ಟಿರುತ್ತದೆ. ಅಕ್ರಮ ಸಂಭಾವನೆಯಾದ ರೂ. 1000/-ಗಳನ್ನು ಶ್ರೀ ಶಿವಣ್ಣ [illegible] ಹಣವನ್ನು ಯಥಾವತ್ತಾಗಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ. ಲೋಕಾಯುಕ್ತ ಅಧಿಕಾರಿಗಳು ಒದಗಿಸಿದ [illegible] ಹೇಳಿಕೆಗಳನ್ನು ಸಂದರ್ಭಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಆರೋಪಿತ ಸರ್ಕಾರಿ ಅಧಿಕಾರಿಯು [illegible] ಗಳನ್ನು ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಮ 7, 13(1)(ಡಿ) [illegible] ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ [illegible] 1988ರ ಅನ್ವಯ ಕಲಂ 7, 13(1)(ಡಿ) ಸಹವಾಚ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರವು [illegible]

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತನನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳದ್ದಾಗಿದ್ದು [illegible] ಅಧಿಕಾರಿಯಾದ ಶ್ರೀ ಶಿವಣ್ಣ, ಸಹಾಯಕ ಅಧೀಕ್ಷಕರು ಇವರ ವಿರುದ್ಧ ಲಂಚ ನಿರೋಧ ಕಾಯ್ದೆ 1988ರ ಕಲಂ 7 13(1)(ಡಿ) ಸಹವಾಚ [illegible] 13(2)ರ ಅಡಿಯಲ್ಲಿ ಸಕ್ಷಮ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡುವುದು ಅಗತ್ಯವೆಂದು ಪರಿಗಣಿಸಿ, ಸರ್ಕಾರವು ಈ [illegible]

ಸರ್ಕಾರದ ಆದೇಶ ಸಂಖ್ಯೆ : ಹೆಚ್‌ಡಿ 62 ಪಿಆರ್‌ಇ 2010 ಬೆಂಗಳೂರು, ದಿನಾಂಕ: 10ನೇ [illegible] 2010.

ಲಂಚ ನಿರೋಧ ಕಾಯ್ದೆ 1988ರ ಕಲಂ 19(ಸಿ)ಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು, ಶ್ರೀ ಶಿವಣ್ಣ, [illegible] ಅಧೀಕ್ಷಕರು, ಜಿಲ್ಲಾ ಕಾರಾಗೃಹ, ತುಮಕೂರು ಇವರ ವಿರುದ್ಧದ ಲಂಚ ನಿರೋಧ ಕಾಯ್ದೆ, 1988ರ ಕಲಂ 7. 13(1)[illegible] ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಕರ್ನಾಟಕ ಲೋಕಾಯುಕ್ತ ಪೊಲೀಸ್‌ಗೆ [illegible] ನೀಡಿದೆ.

ಆದ್ದರಿಂದ ಕರ್ನಾಟಕ ಸರ್ಕಾರದ (ವ್ಯವಹಾರ) ನಿರ್ವಹಣೆ ನಿಯಮಾವಳಿ 1977ರ ನಿಯಮ 19(1)ರನ್ವಯ [illegible] ಕಛೇರಿಯ ಮೊಹರು ಮತ್ತು ನನ್ನ ಸಹಿ ಅಡಿಯಲ್ಲಿ ದಿನಾಂಕ : 10-11-2010 ರಂದು ಹೊರಡಿಸಲಾಗಿದೆ.

ಈ ಹಿಂದೆ ಹೊರಡಿಸಿದ್ದ ಸಮ ಸಂಖ್ಯೆಯ ದಿನಾಂಕ : 02-08-2010ರ ಆದೇಶವನ್ನು ಈ [illegible]

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ. ಕೃಷ್ಣಮೂರ್ತಿ

ಪಿ.ಆರ್. 2826

ಸರ್ಕಾರದ ಅಧೀನ ಕಾರ್ಯದರ್ಶಿ

ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯ

ವಿಷಯ : ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಕೋಲಾರ ಜಿಲ್ಲಾ ಪಂಚಾಯತ್, ರವರ ವಿರುದ್ಧ ದಾಖಲಾಗಿರುವ ಲಂಚ ಸ್ವೀಕಾರ ಪ್ರಕರಣದ ಅಪರಾಧಕ್ಕಾಗಿ ಅಭಿಯೋಜನೆಗೊಳಿಸಲು ಸರ್ಕಾರದ [illegible]

ಓದಲಾಗಿದೆ :

1. ಕರ್ನಾಟಕ ಲೋಕಾಯುಕ್ತ ಕಛೇರಿಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರ ಪತ್ರ ದಿನಾಂಕ 15-02-2010 ಹಾಗೂ 23-07-2010.
2. ಟ್ರ್ಯಾಪ್ ಪಂಚನಾಮೆ ವರದಿ.

ಪ್ರಸ್ತಾವನೆ:

ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಕೋಲಾರ ಜಿಲ್ಲಾ ಪಂಚಾಯತ್, ಇವರ ವಿರುದ್ಧ ಡಾ: ಎನ್. ರಮೇಶ್‌ಬಾಬು, ಜಿಲ್ಲಾ ಆರೋ[illegible] ಕುಟುಂಬ ಕಲ್ಯಾಣಾಧಿಕಾರಿ, ಕೋಲಾರ ರವರು ಉಪ ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರ[illegible] ಹಾಜರಾಗಿ ನೀಡಿದ ದೂರಿನ ಹಿನ್ನೆಲೆಯಲ್ಲಿ ಲಂಚ ನಿರೋಧ ಕಾಯ್ದೆ, 1988ರ ಕಲಂ 7, 13(1)(ಡಿ) ಸಹವಾಚನ ಕಲಂ 13(2)ರ ರೀತ್ಯಾ [illegible] 02-2010 ರಂದು ಮೊಕದ್ದಮೆ ಸಂಖ್ಯೆ : 7/2010 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು [illegible] ತಮ್ಮ ಸಿಬ್ಬಂದಿ ಹಾಗೂ ಪಂಚಸಾಕ್ಷಿಗಳ ಸಮೇತ ದಿನಾಂಕ : 06-02-2010 ರಂದು ಲಂಚದ ಹಣ 3.00 ಲಕ್ಷಗಳನ್ನು ಸ್ವೀಕರಿಸಿದಾಗ ಲ[illegible] ಬಲೆಗೆ ಸಿಲುಕಿರುತ್ತಾರೆ. ಈ ಹಿನ್ನೆಲೆಯಲ್ಲಿ ಶ್ರೀ ಎಂ. ಶ್ರೀನಿವಾಸನ್ ರವರನ್ನು ದಿನಾಂಕ 06-02-2010 [illegible] ಒಪ್ಪಿಸಲಾಗಿದ್ದು, ಈ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲು ಪಿರ್ಯಾದುದಾರರ ದೂರು, ಪಥಮ [illegible] ಟ್ರ್ಯಾಪ್ ಪಂಚನಾಮೆಯ ಪ್ರತಿಗಳನ್ನು ಮೇಲೆ (1)ರಲ್ಲಿ ಓದಲಾದ ದಿನಾಂಕ 15-02-2010 ಮತ್ತು 23-07-2010ರ [illegible]

ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸರ್ಕಾರಕ್ಕೆ ಕಳುಹಿಸುತ್ತಾ, ಆಪಾದಿತರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ [illegible] ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ 19((1)(ಬಿ) ರಡಿಯಲ್ಲಿ ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ 23-07-2010ರ ಪತ್ರದಲ್ಲಿ ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ ಇವರ ವಿರುದ್ಧ ದಾಖಲಾಗಿರುವ ಟ್ರ್ಯಾಪ್ ಪ್ರಕರಣದಲ್ಲಿ ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚನ ಕಲಂ 13(2)ರ ರೀತ್ಯಾ ಆಪಾದನೆ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಅಭಿಯೋಜನೆಗೆ [illegible] ಸದರಿ ಕಾಯ್ದೆಯ ಕಲಂ 19(1)(ಬಿ) ರನ್ವಯ ಮಂಜೂರಾತಿ ನೀಡಲು ಕೋರಿರುತ್ತಾರೆ, ಹಾಗೂ ತಮ್ಮ ಪತ್ರದೊಂದಿಗೆ [illegible] ವರದಿ, ಪ್ರಥಮ ವರ್ತಮಾನ ವರದಿಯ ಪ್ರತಿ, ಟ್ರ್ಯಾಪ್ ಪೂರ್ವದ ಮಹಜರ್, ಟ್ರ್ಯಾಪ್ ನಡವಳಿಗಳು, ರಾಸಾಯನಿಕ ತಜ್ಞರ ವರದಿ, ವಶಪಡಿಸಿಕೊಂಡ ದಾಖಲೆಗಳ ಪ್ರತಿ, ಕೃತ್ಯ ನಡೆದ ಸ್ಥಳದ ನಕ್ಷೆ, ದಾಖಲೆಗಳ ಪ್ರತಿ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಒದಗಿಸಿರುತ್ತಾರೆ. ಲೋಕಾಯುಕ್ತದ ಕಛೇರಿಯಿಂದ ಬಂದ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

(1) ಡಾ: ಎಸ್. ರಮೇಶ್ ಬಾಬು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೋಲಾರ ಜಿಲ್ಲೆ, ರವರು ದಿನಾಂಕ 06-02-2010ರಂದು ಉಪ ಪೊಲೀಸ್ ಮಹಾ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರಿಗೆ ನೀಡಿದ ದೂರು ಅರ್ಜಿ.

(2) ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ ಇಲ್ಲಿನ ಕ್ರೈಂ ನಂ. 7/2010ರಲ್ಲಿ ದಾಖಲಿಸಿದ ಪ್ರಥಮ ವರ್ತಮಾನ ವರದಿ.

(3) ದಿ : 06-02-2010ರ ಪ್ರಾಯೋಗಿಕ ಪಂಚನಾಮೆ ವರದಿ.

(4) ದಿ : 06-02-2010ರ ಟ್ರ್ಯಾಪ್ ಮಹಜರ್ ವರದಿ.

(5) ಡಾ: ಪ್ರಕಾಶ್ ಮತ್ತು ಮುನಿರಾಜು ರವರುಗಳು ಶ್ರೀ ಎಂ. ಶ್ರೀನಿವಾಸನ್ ರವರೊಂದಿಗೆ ನಡೆಸಿದ ಸಂಭಾಷಣೆಯ ಧ್ವನಿಮುದ್ರಿಕೆಯ ಲಿಪೀಕರಣದ ಪ್ರತಿಗಳು.

(6) ರಾಸಾಯನಿಕ ಪರಿವೀಕ್ಷಣಾ ವರದಿ ಸಂ. ಪಿಹೆಚ್ಐ/ಸಿಎಂಇ/ಎಲ್ಒಕೆ/173/09-10, ದಿನಾಂಕ : 10-02-2010.

(7) ಕೃತ್ಯ ನಡೆದ ಸ್ಥಳದ ನಕ್ಷೆ.

(8) ಡಾ: ರಮೇಶ್‌ಬಾಬು ಬಿನ್ ಟಿ. ನರಸಿಂಹಲುನಾಯ್ಡು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಕೋಲಾರ ಇವರ ದಿ: 06-02-2010ರ ಹೇಳಿಕೆ.

(9) ಡಾ: ಕೆ.ಎಸ್. ಪ್ರಕಾಶ್ ಬಿನ್ ಲೇಟ್ ಟಿ.ಕೃಷ್ಣೇಗೌಡ, ಜಿಲ್ಲಾ ಕ್ಷಯರೋಗ ನಿವಾರಣಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಕಛೇರಿ, ಕೋಲಾರ ರವರ ದಿ : 06-02-2010ರ ಹೇಳಿಕೆ.

(10) ಶ್ರೀ ಮುನಿರಾಜು ಬಿನ್ ಲೇಟ್ ಚಿಕ್ಕಮುನಿಯಪ್ಪ, ಪ್ರ.ದ.ಸಹಾಯಕ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರ ಹೇಳಿಕೆ ದಿನಾಂಕ 06-02-2010.

(11) ಶ್ರೀ ಎಂ.ಎಸ್. ರವಿಕುಮಾರ್ ಬಿನ್ ಅಪ್ಪಾಜಿಗೌಡ, ಪ್ರ.ದ.ಸಹಾಯಕ, ಸಾರಿಗೆ ಆಯುಕ್ತರ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರುರವರ ದಿ : 06-02-2010ರ ಹೇಳಿಕೆ.

(12) ಶ್ರೀ [illegible] ಬಿನ್ ಲೇಟ್ ಪುಟ್ಟರಂಗಪ್ಪ ಪ್ರ.ದ.ಸಹಾಯಕ, ಸಾರಿಗೆ ಆಯುಕ್ತರ ಕಛೇರಿ, ಬಹುಮಹಡಿ ಕಟ್ಟಡ, ಬೆಂಗಳೂರುರವರ ದಿ : 06-02-2010ರ ಹೇಳಿಕೆ.

(13) ಶ್ರೀ [illegible] ಶ್ರೀನಿವಾಸಮೂರ್ತಿ, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ದಿ : 11-02-2010ರ ಹೇಳಿಕೆ.

(14) ಶ್ರೀ [illegible]. ಪೊಲೀಸ್ ಕಾನ್ಸ್‌ಟೇಬಲ್. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ದಿ : 06-02-2010ರ ಹೇಳಿಕೆ.

(15) ಶ್ರೀ [illegible]. ಪೊಲೀಸ್ ಕಾನ್ಸ್‌ಟೇಬಲ್. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ ಬೆಂಗಳೂರು ರವರ ದಿ : 06-02-2010ರ ಹೇಳಿಕೆ.

(16) ಶ್ರೀ [illegible]. ಪೊಲೀಸ್ ಕಾನ್ಸ್‌ಟೇಬಲ್. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ ಬೆಂಗಳೂರು ರವರ ದಿ : 06-02-2010ರ ಹೇಳಿಕೆ.

(17) [illegible] ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ ಬೆಂಗಳೂರು ರವರ ದಿ : 06-02-2010ರ ಹೇಳಿಕೆ.

(18) [illegible]. ಪೊಲೀಸ್ ಇನ್ಸ್‌ಪೆಕ್ಟರ್. ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ ಬೆಂಗಳೂರು ರವರ ಹೇಳಿಕೆ.

(19) [illegible], [illegible] ಕಾರ್ಯದರ್ಶಿಗಳು (ಅಭಿವೃದ್ಧಿ) ಕೋಲಾರ ರವರ ದಿ : 06-02-2010ರ ಹೇಳಿಕೆ.

(20) [illegible] ವೆಂಕಟರೆಡ್ಡಿ, ಪ್ರ.ದ.ಸಹಾಯಕ, ಜಿ.ಪಂ.ಕಛೇರಿ, ಕೋಲಾರ ರವರ ದಿ : 06-02-2010ರ ಹೇಳಿಕೆ.

(21) [illegible]. ಡಿ ದರ್ಜೆ ನೌಕರ, ಜಿ.ಪಂ.ಅಧ್ಯಕ್ಷರ ಕಛೇರಿ, ಕೋಲಾರ ರವರ ಹೇಳಿಕೆ ದಿನಾಂಕ : 06-02-2010

(22) ಶ್ರೀ ಸುಬ್ರಮಣಿ ಎಸ್ ಬಿನ್ ಲೇಟ್ ಚಿನ್ನಪ್ಪಯ್ಯ, ಡಾಟಾ ಎಂಟ್ರಿ ಆಪರೇಟರ್, ಜಿಲ್ಲಾ ಪಂಚಾಯತ್ ಕಛೇರಿ, ಕೋಲಾರ ರವರ ಹೇಳಿಕೆ ದಿ : 06-02-2010

(23) ಶ್ರೀ ವಿ. ಪ್ರವೀಣ್‌ಕುಮಾರ್ ಬಿನ್ ಸಿ. ವೆಂಕಟೇಶಪ್ಪ, ವಿದ್ಯಾರ್ಥಿ, ಕನಕನಪಾಳ್ಯ, ಕೋಲಾರ ರವರ ಹೇಳಿಕೆ ದಿ : 09-02-2010.

(24) [illegible]. ಕೋಲಾರ ರವರ ಹೇಳಿಕೆ ದಿ : 15-02-2010.

(25) [illegible] ಬ್ಯಾಂಕ್ ಆಫ್ ಮೈಸೂರು ರವರ ಹೇಳಿಕೆ ದಿ : 09-02-2010.

(26) ಶ್ರೀ ಎಸ್.ಪಿ. ಪರಮೇಶ್, ಪೊಲೀಸ್ ಕಾನ್ಸ್‌ಟೇಬಲ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗ, ಬೆಂಗಳೂರು ರವರ ದಿ : 25-06-2010ರ ಹೇಳಿಕೆ.

(27) ಲಂಚ ಕೇಳಲು ಆಧಾರವಾದ ಡಾ: ಎನ್.ರಮೇಶ್‌ಬಾಬು, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ರವರು ನಡೆಸಿರುವರು ಎನ್ನಲಾದ ಅವ್ಯವಹಾರ ಮತ್ತು ಹಣ ದುರುಪಯೋಗದ ವಿವರವಿರುವ ದಿ : 10-12-2009ರ ಅಧ್ಯಕ್ಷರು, ಜಿ.ಪಂ. ಕೋಲಾರ ರವರ ಪತ್ರ ಮತ್ತು ದಾಖಲೆ.

(28) ಆಪಾದಿತರಾದ ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿ.ಪಂ.ಕೋಲಾರ ರವರ ಸಮಜಾಯಷಿ ಹೇಳಿಕೆ ದಿ : 06-02-2010.

ತನಿಖಾಧಿಕಾರಿಗಳಾದ ಶ್ರೀ ಯು.ಡಿ. ಕೃಷ್ಣಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಶ್ರೀ ಎಸ್. ಮಂಜುನಾಥ್, ಪೊಲೀಸ್ ಇನ್ಸ್‌ಪೆಕ್ಟರ್, ಕರ್ನಾಟಕ ಲೋಕಾಯುಕ್ತ, ಕೋಲಾರ ಜಿಲ್ಲೆ, ಕೋಲಾರ ಇವರು ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ ಇವರ ವಿರುದ್ಧ ದಂಡಾರ್ಹ ಪ್ರಕರಣವನ್ನು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ನಗರ ವಿಭಾಗದಲ್ಲಿ ಈ ಮೊದಲು ದಾಖಲಾಗಿದ್ದ ಮೊಕದ್ದಮೆ ಸಂಖ್ಯೆ : 07/2010 ಕಲಂ 7, 13(1)(ಡಿ) ಜೊತೆಗೆ 13(2) ಲಂಚ ನಿರೋಧ ಕಾಯ್ದೆ, 1988ರ ಪ್ರಕರಣವು ಸರಹದ್ದಿನ ಆಧಾರದ ಮೇಲೆ ಕೋಲಾರ ಲೋಕಾಯುಕ್ತ ಘಟಕಕ್ಕೆ ವರ್ಗಾವಣೆ ಯಾಗಿದ್ದು, ಅದರಂತೆ ಸದರಿ ಪ್ರಕರಣವನ್ನು ಮರುನೋಂದಾಯಿಸಿ ತನಿಖೆ ಕೈಗೊಂಡಿರುತ್ತಾರೆ. ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ ರವರು ಡಾ: ಎನ್. ರಮೇಶ್‌ಬಾಬು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಕೋಲಾರ ಹಾಗೂ ಅವರ ಸಹದ್ಯೋಗಿಗಳಾದ ಡಾ: ಕೆ.ಎನ್. ಪ್ರಕಾಶ್ ಮತ್ತು ಶ್ರೀ ಮುನಿರಾಜು ಎಂಬುವವರಿಗೆ ಸಹಾಯ ಮಾಡಲು ಅಕ್ರಮ ಸಂಭಾವನೆಯಾದ ರೂ. 3.00 ಲಕ್ಷಗಳನ್ನು ಪಡೆಯುತ್ತಿದ್ದಾಗ ಲೋಕಾಯುಕ್ತ ಬಲೆಗೆ ಸಿಕ್ಕಿಹಾಕಿಕೊಂಡಿರುತ್ತಾರೆ. ಶ್ರೀ ಎಂ. ಶ್ರೀನಿವಾಸನ್ ರವರ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೆಟ್ ದ್ರಾವಣದಲ್ಲಿ ತೊಳೆಸಿದಾಗ ಮತ್ತು ಅಕ್ರಮ ಸಂಭಾವನೆಯಾಗಿ ಪಡೆದ ಹಣವನ್ನು ಇಟ್ಟ ಮೇಜನ್ನು ಕೋರಾ ಬಟ್ಟೆಯಿಂದ ಒರೆಸಿ, ಸದರಿ ಬಟ್ಟೆಯನ್ನು ಸೋಡಿಯಂ ಕಾರ್ಬೋನೆಟ್ ಮಿಶ್ರಣದಲ್ಲಿ ಅದ್ದಿ ತೊಳೆದಾಗ ಬಣ್ಣ ರಹಿತವಾದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗುವುದರ ಮೂಲಕ ಸಕಾರಾತ್ಮಕವಾಗಿ ಪ್ರತಿಕ್ರಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ದೃಢಪಟ್ಟಿರುತ್ತದೆ. ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ, ಪಿರ್ಯಾದಿ ಹಾಗೂ ಆಪಾದಿತರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ. ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ 3.00 ಲಕ್ಷಗಳನ್ನು ಶ್ರೀ ಎಂ. ಶ್ರೀನಿವಾಸನ್ ರವರಿಂದ ಜಿಲ್ಲಾ ಪಂಚಾಯತ್ ಕೋಲಾರದಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಮೇಲ್ಕಾಣಿಸಿದ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್ ಕೋಲಾರ ಇವರು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಗೆ 13(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಅವರನ್ನು ಈ ಅಪರಾಧಕ್ಕಾಗಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವುದು ಸೂಕ್ತವೆಂದು ಕಂಡುಬರುವುದರಿಂದ ಹಾಗೂ ಈ ಅಧಿಕಾರವನ್ನು ಸರ್ಕಾರ ಹೊಂದಿರುವುದರಿಂದ, ಈ ಕೆಳಕಾಣಿಸಿದ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 182 ಜಿಪಸ 2010 ಬೆಂಗಳೂರು, ದಿನಾಂಕ: 23ನೇ ಅಕ್ಟೋಬರ್ 2010.

ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ, ಇವರನ್ನು ಸ್ಥಾನದಿಂದ ತೆಗೆದುಹಾಕುವ/ವಜಾ ಮಾಡುವ ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ, ಇವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಗಗೊಳಿಸಲು ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರನ್ವಯ ಹಾಗೂ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 286ರ ಪ್ರಕಾರ ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರರವರು ಭಾರತ ದಂಡ ಸಂಹಿತೆಯ 21ನೇ ಪ್ರಕರಣ ಮತ್ತು ಭ್ರಷ್ಟಾಚಾರ ನಿವಾರಣ 1988ರ ಅರ್ಥವ್ಯಾಪ್ತಿಯಲ್ಲಿ ಲೋಕ ನೌಕರನಾಗಿರುವುದರಿಂದ ಸರ್ಕಾರವು ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎಂ. ಶ್ರೀನಿವಾಸನ್, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಕೋಲಾರ, ಇವರನ್ನು ಶಿಕ್ಷಾರ್ಹ ಅಪರಾಧಕ್ಕಾಗಿ ಅಭಿಯೋಗಗೊಳಿಸಲು ಮಂಜೂರಾತಿಯನ್ನು ನೀಡಿದೆ.

ಈ ಆದೇಶವನ್ನು ಕರ್ನಾಟಕ ಸರ್ಕಾರದ (ಕಾರ್ಯ ಕಲಾಪಗಳ ನಿರ್ವಹಣೆ) ನಿಯಮಗಳು 1977ರ ನಿಯಮ 18 ಮತ್ತು 19(1)ರಲ್ಲಿ ಸರ್ಕಾರದ ಆದೇಶ/ಅಧಿಸೂಚನೆಗಳನ್ನು ಹೊರಡಿಸಲು ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸ್ವರ್ಣಲತ ಎಂ. ಭಂಡಾರೆ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಿ.ಆರ್. 2827

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ಚಲನವಲನ ವೈಕಲ್ಯ ಮತ್ತು ಮೆದುಳಿನ ಪಾರ್ಶ್ವವಾಯು (Locomotor disability and Cerebral palsy) ಅಂಗವಿಕಲತೆಯನ್ನು ಹೊಂದಿದ ಅಭ್ಯರ್ಥಿಗಳಿಗೆ ಗೆಜೆಟೆಡ್ ಪ್ರೊಬೆಷನರ್‌ಗಳ ಮುಖ್ಯ ಪರೀಕ್ಷೆಯನ್ನು ಬರೆಯಲು ಹೆಚ್ಚುವರಿ ಸಮಯಾವಕಾಶ ನೀಡುವ ಬಗ್ಗೆ.

ಓದಲಾಗಿದೆ : ದಿನಾಂಕ : 30-10-2007ರ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 74 ಸೆನೆನಿ 2006.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 30-10-2007ರ ಆದೇಶದಲ್ಲಿ ಕರ್ನಾಟಕ ಲೋಕಸೇವಾ ಆಯೋಗ/ಸರ್ಕಾರದ ವಿವಿಧ ಇಲಾಖೆಗಳಲ್ಲಿ ಆಯ್ಕೆ ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಂಧ/ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಸಿವಿಲ್ ಸೇವಾ ಪರೀಕ್ಷೆಯನ್ನು ಬರೆಯಲು ಲಿಪಿಕಾರರನ್ನು

ಒದಗಿಸಲು ಮತ್ತು ಪ್ರತಿ ಒಂದು ಗಂಟೆಗೆ ಹತ್ತು ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡಲು ಆದೇಶಿಸಲಾಗಿದೆ. ಇದೇ ರೀತಿ ಚಲನವಲನ ವೈಕಲ್ಯ(Locomotor disability) ಮತ್ತು ಮೆದುಳಿನ ಪಾರ್ಶ್ವವಾಯುಗೆ (Cerebral palsy) ಒಳಗಾದ ಅಂಗವಿಕಲರಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗೆಜೆಟೆಡ್ ಪ್ರೊಬೆಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರನ್ವಯ ಲೋಕಸೇವಾ ಆಯೋಗವು ನಡೆಸುವ ಪರೀಕ್ಷೆಯಲ್ಲಿ ಪ್ರತಿ ಒಂದು ಗಂಟೆಗೆ ಇಪ್ಪತ್ತು ನಿಮಿಷಗಳ ಹೆಚ್ಚುವರಿ ಸಮಯಾವಕಾಶವನ್ನು ನೀಡುವಂತೆ ಕೋರಿ ಸರ್ಕಾರದಲ್ಲಿ ಮನವಿ/ಕೋರಿಕೆಗಳು ಸ್ವೀಕೃತವಾಗಿವೆ.

ಮೇಲ್ಕಂಡ ಕೋರಿಕೆಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಚಲನವಲನ ವೈಕಲ್ಯ (Locomotor disability) ಮತ್ತು ಮೆದುಳಿನ ಪಾರ್ಶ್ವವಾಯು (Cerebral palsy)ಗೆ ಒಳಗಾದ ಅಂಗವಿಕಲರಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗೆಜೆಟೆಡ್ ಪ್ರೊಬೆಷನರ್‌ಗಳ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆಯಲ್ಲಿ ಉತ್ತರಿಸಲು ಪ್ರತಿ ಒಂದು ಗಂಟೆ ಪರೀಕ್ಷಾವಧಿಗೆ ಇಪ್ಪತ್ತು ನಿಮಿಷಗಳ ಹೆಚ್ಚುವರಿ ಸಮಯಾವಕಾಶವನ್ನು ನೀಡಲು ಸರ್ಕಾರ ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 171 ಸೇನೆನಿ 2010 ಬೆಂಗಳೂರು, ದಿನಾಂಕ: 19ನೇ ನವೆಂಬರ್ 2010.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ , ಕರ್ನಾಟಕ ಗೆಜೆಟೆಡ್ ಪ್ರೊಬೆಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳು, 1997ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಗೆಜೆಟೆಡ್ ಪ್ರೊಬೆಷನರ್‌ಗಳ ಹುದ್ದೆಗಳ ನೇಮಕಾತಿಗೆ ನಡೆಸುವ ಸ್ಪರ್ಧಾತ್ಮಕ ಮುಖ್ಯ ಪರೀಕ್ಷೆಯಲ್ಲಿ ಚಲನವಲನ ವೈಕಲ್ಯ(Locomotor disability) ಮತ್ತು ಮೆದುಳಿನ ಪಾರ್ಶ್ವವಾಯು (Cerebral palsy)ಗೆ ಒಳಗಾದ ಅಂಗವಿಕಲ ಅಭ್ಯರ್ಥಿಗಳಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಶ್ನೆ ಪತ್ರಿಕೆ ಉತ್ತರಿಸಲು ಪ್ರತಿ ಒಂದು ಗಂಟೆ ಪರೀಕ್ಷಾವಧಿಗೆ ಇಪ್ಪತ್ತು ನಿಮಿಷಗಳ ಹೆಚ್ಚುವರಿ ಸಮಯಾವಕಾಶ ನೀಡಲು ಸರ್ಕಾರ ಆದೇಶಿಸಿದೆ.

1. ಅಭ್ಯರ್ಥಿಯು ಅಂಗವಿಕಲ ಮೀಸಲಾತಿ ಸೌಲಭ್ಯ ಕೋರಿ ಅರ್ಜಿಯೊಂದಿಗೆ ನಿಗದಿತ ವೈದ್ಯಕೀಯ ಪ್ರಮಾಣ ಪತ್ರ ಸಲ್ಲಿಸಿರಬೇಕು.
2. ಚಲನವಲನ ವೈಕಲ್ಯ (Locomotor disability) ಮತ್ತು ಮೆದುಳಿನ ಪಾರ್ಶ್ವವಾಯು (Cerebral palsy)ಗೆ ಒಳಗಾದ ಅಂಗವಿಕಲ ಅಭ್ಯರ್ಥಿಗಳ ಬರವಣಿಗೆ ಸಾಮರ್ಥ್ಯವು ಕುಂಠಿತವಾಗಿರಬೇಕು. (ಅಂಗವಿಕಲತೆಯ ಪ್ರಮಾಣ ಶೇಕಡ 40 ಹಾಗೂ ಅದಕ್ಕಿಂತ ಹೆಚ್ಚಿನದಾಗಿರಬೇಕು)
3. ಈ ಅಭ್ಯರ್ಥಿಗಳು, ಅಂದರೆ ಚಲನವಲನ ವೈಕಲ್ಯ (Locomotor disability) ಮತ್ತು ಮೆದುಳಿನ ಪಾರ್ಶ್ವವಾಯು (Cerebral palsy)ಗೆ ಒಳಗಾದ ಅಂಗವಿಕಲ ಅಭ್ಯರ್ಥಿಗಳು ಲಿಪಿಕಾರರ (scribe) ಸಹಾಯ ಪಡೆಯುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ದೇವರಾಜು

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

(ಸೇವಾ ನಿಯಮಗಳು-1)

ಪಿ.ಆರ್. 2866

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಂ.ವಿ. ವೀರಭದ್ರಯ್ಯ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ, Deputy Manager, (R&R) U.K.P. Bagalkote, ಇವರು ಸ್ವ-ಇಚ್ಛಾ ನಿವೃತ್ತಿ ಹೊಂದಲು ಸಲ್ಲಿಸಿರುವ ಮನವಿಯನ್ನು ಹಿಂಪಡೆಯಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ :
1. ಅಧಿಕಾರಿಯವರ ಮನವಿ ದಿನಾಂಕ : 27-08-2008.
2. ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 15 ಅಸೇನಿ 2008, ದಿನಾಂಕ : 05-12-2008.
3. ಅಧಿಕಾರಿಯವರು ಸ್ವ-ಇಚ್ಛಾ ನಿವೃತ್ತಿ ಹಿಂಪಡೆಯಲು ಸಲ್ಲಿಸಿದ ಮನವಿ ದಿನಾಂಕ : 19-01-2009.

ಪ್ರಸ್ತಾವನೆ:

ಶ್ರೀ ಎಂ.ವಿ. ವೀರಭದ್ರಯ್ಯ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಇವರು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ : 27-08-2008ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, ವೈಯುಕ್ತಿಕ ಕಾರಣದಿಂದ ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಲು ಕೆ.ಸಿ.ಎಸ್.ಆರ್. ನಿಯಮ 285 ರಡಿಯಲ್ಲಿ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಕೋರಿದ್ದರು. ಸದರಿಯವರ ಮನವಿಯಲ್ಲಿ ತಿಳಿಸಿದ ಕಾರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ : 05-12-2008ರ ಅಧಿಸೂಚನೆಯಲ್ಲಿ ಅಧಿಕಾರಿಯವರಿಗೆ ದಿನಾಂಕ : 01-04-2009 ರಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಸ್ವ-ಇಚ್ಛಾ ನಿವೃತ್ತಿ ಹೊಂದಲು ಅನುಮತಿ ನೀಡಲಾಗಿತ್ತು. ಆದರೆ ಸದರಿ ಅಧಿಕಾರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ದಿನಾಂಕ : 19-01-2009ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿ, ಸ್ವ-ಇಚ್ಛಾ ನಿವೃತ್ತಿ ಹೊಂದಲು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯನ್ನು ಹಿಂತೆಗೆದುಕೊಂಡಿರುವುದಾಗಿಯೂ ಹಾಗೂ ಮೇಲೆ ಓದಲಾದ ಕ್ರಮಾಂಕ (2)ರ ದಿನಾಂಕ : 05-12-2008ರ ಆದೇಶದಲ್ಲಿ ಸ್ವ-ಇಚ್ಛಾ ನಿವೃತ್ತಿ ಹೊಂದಲು ಸರ್ಕಾರವು ನೀಡಿರುವ ಅನುಮತಿಯು ದಿನಾಂಕ 01-04-2009 ರಿಂದ ಜಾರಿಗೆ ಬರುವುದರಿಂದ, ಅದಕ್ಕೂ ಮೊದಲೇ ಸ್ವ-ಇಚ್ಛಾ ನಿವೃತ್ತಿ ಹೊಂದಲು ಸಲ್ಲಿಸಿರುವ ಮನವಿಯನ್ನು ವಾಪಸ್ಸು ಪಡೆದಿರುವುದರಿಂದ, ಸರ್ಕಾರಿ ಆದೇಶವನ್ನು ರದ್ದುಗೊಳಿಸಿ, ಸರ್ಕಾರಿ ಸೇವೆಯಲ್ಲಿ ಮುಂದುವರೆಯಲು ಅನುಮತಿ ನೀಡಲು ಕೋರಿದ್ದಾರೆ.

ಶ್ರೀ ಎಂ.ವಿ. ವೀರಭದ್ರಯ್ಯ, ಕೆ.ಎ.ಎಸ್. (ಸೂಪರ್ ಟೈಂ ಸ್ಕೇಲ್) ಅಧಿಕಾರಿ, ಇವರು ಸ್ವ-ಇಚ್ಛಾ ನಿವೃತ್ತಿ ಹೊಂದಲು ಸಲ್ಲಿಸಿರುವ ಮನವಿಯನ್ನು ಹಿಂದಕ್ಕೆ ಪಡೆದಿರುವುದರಿಂದ, ಅದರಂತೆ ಸೇವೆಯಲ್ಲಿ ಮುಂದುವರೆಸಲು ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವಂತೆ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ : 1233/2009ರ ಮೇಲೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ : 20-11-2009ರಂದು

ಹಾಗೂ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು W.P. No. 14426/2010 ದಿನಾಂಕ : 26-05-2010ಗಳಲ್ಲಿ ನೀಡಿರುವ ತೀರ್ಪುಗಳನ್ನು ಅನುಷ್ಠಾನಕ್ಕೆ ತರಲು ಸರ್ಕಾರವು ನಿರ್ಧರಿಸಿ, ಅದರಂತೆ ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 15 ಅಸೇನಿ 2010, ಬೆಂಗಳೂರು, ದಿನಾಂಕ: 19ನೇ ಸೆಪ್ಟೆಂಬರ್ 2010.

